ಕರ್ನಾಟಕ ವಿಧಾನ ಸಭೆ

ಗುರುವಾರ 16ನೇ ಮಾರ್ಚ್ 2000ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ ಎಂ.ವಿ.ವೆಂಕಟಪ್ಪರವರು ಪೀಠವನ್ನು ಅಲಂಕರಿಸಿದ್ದರು.

1. ನಿಲುವಳಿ ಸೂಚನೆ

ವಿಷಯ: ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿ ಗ್ರಾಮದಲ್ಲಿ ಎರಡು ದಲಿತ ಕುಟಂಬಗಳಿಗೆ ಸೇರಿದ 7 ಜನರನ್ನು ಸಜೀವವಾಗಿ ಸುಟ್ಟಿರುವ ಬಗ್ಗೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷ ನಾಯಕರು): ಮಾನ್ಯ ಸಭಾಧ್ಯಕ್ಷರೆ, ಕಂಬಾಲಪಲ್ಲಿಯಲ್ಲಿನ ಘಟನೆ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದು, ದಯಮಾಡಿ ಅದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ವಿನಂತಿಸಿಕೊಂಡು, ಸದರಿ ಘಟನೆಯ ಬಗ್ಗೆ ಸದನದ ಗಮನಹರಿಸಲು ಬಯಸುತ್ತೇನೆ. ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿ ಗ್ರಾಮದಲ್ಲಿ 11ನೇ ತಾರೀಕು ಒಂದು ಪೈಶಾಚಿಕ ನರಮೇಧ ನಡೆಯಿತು. ಈ ನರಮೇಧವನ್ನು ಖಂಡಿಸಲಿಕ್ಕೆ ಬಹುಶಃ ಶಬ್ದಗಳೇ ಸಾಲುವುದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ಕರ್ನಾಟಕದ ಇತಿಹಾಸದಲ್ಲಿ ಈ ರೀತಿಯಾದಂಥ ಘಟನೆ ಹಿಂದೆ ಎಂದೂ ನಡೆದಿರಲಿಕ್ಕಿಲ್ಲ ಎಂದು ನನಗನಿಸುತ್ತದೆ. ಈ ಘಟನೆಗೆ ಕಾರಣ ಏನು? ಇದರ ಹಿಂದೆ ಇರತಕ್ಕಂತಹ ಪರಿಸ್ಥಿತಿ ಏನು? ಎನ್ನುವುದರ ಕಡೆಗೆ ನಾವು ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ಎರಡು ದಲಿತ ಕುಟುಂಬಗಳಿಗೆ ಸೇರಿದಂಥ 7 ಜನರನ್ನು ಅವರ ಮನೆಯಲ್ಲಿಯೇ ಕೂಡಿ ಹಾಕಿ ಕಿಟಕಿ ಬಾಗಿಲುಗಳನ್ನು ಮುಚ್ಚಿ ಹುಲ್ಲಿನ ಬಣವೆಯಿಂದ ಹುಲ್ಲನ್ನು ತಂದು ಕಿಟಕಿ, ಬಾಗಿಲುಗಳಿಗೆ ಬೀಗ ಹಾಕಿ, ಬ್ಯಾರಲ್‌ನಲ್ಲಿ ಸೀಮೆ ಎಣ್ಣೆಯನ್ನು ಸುರಿದು ಬೆಂಕಿ ಹಚ್ಚಿ ಅರ್ಧ ಗಂಟೆಯಲ್ಲಿ ಅವರನ್ನು ಸಜೀವವಾಗಿ ಸುಡಲಾಯಿತು. ಈ ಘಟನೆ 11ನೇ ತಾರೀಖು ರಾತ್ರಿ 7-30 ಗಂಟೆಯಿಂದ 8-00 ಗಂಟೆಯ ವರೆಗೆ ನಡೆದಿದೆ. ಇದನ್ನು ನೋಡಿದಾಗ ಇದು ಆಕಸ್ಮಿಕವಾಗಿ ನಡೆದಂಥ ಘಟನೆ ಅಲ್ಲ. ಇದರ ಹಿಂದಿನ ಘಟನಾವಳಿಗಳನ್ನು ಗಮನಿಸಿದಾಗ, 1997ರಲ್ಲಿ ಇದೇ ಚಿಂತಾಮಣಿ ತಾಲ್ಲೂಕಿನ ಇರಗಂಪಲ್ಲಿ ಗ್ರಾಮದಲ್ಲಿ ದಲಿತ ವ್ಯಕ್ತಿಯಾದ ಶ್ರೀ ವೆಂಕಟರಮಣಪ್ಪನ ಕೊಲೆ ಆಗಿದೆ. 1997ರ ಸೆಪ್ಟಂಬರ್ ತಿಂಗಳಿನಲ್ಲಿ ಡಾ: ಅಂಬೇಡ್ಕರ್ ಜಯಂತಿ ಆಚರಣೆಗೆ ಸಂಬಂಧ ಪಟ್ಟಂತೆ ಬಿಲ್ಲಾಂಡಹಳ್ಳಿಯಲ್ಲಿ ಘರ್ಷಣೆ ಆಗಿದೆ. ಆ ಘರ್ಷಣೆಯ ಬಗ್ಗೆ ಅಲ್ಲಿಯ ಜನರನ್ನು ಸಮಾಧಾನ ಮಾಡಲಿಕ್ಕೆ

ಅಥವಾ ಆ ಘರ್ಷಣೆಯ ವಿಚಾರವಾಗಿ ಅದನ್ನು ಇತ್ಯರ್ಥ ಮಾಡಲಿಕ್ಕೆ ಹೋದಂಥ ಮೂರು ಜನ ಪೊಲೀಸ್ ಪೇದೆಗಳ ಸಜೀವ ದಹನ ಮಾಡಲಾಗಿದೆ. ಹೀಗೆ ಒಂದಕ್ಕೊಂದು ಘಟನೆಗಳು ನಡೆಯುತ್ತಲೆ ಬಂದಿವೆ. ಇದರಲ್ಲಿ ಪ್ರಮುಖವಾಗಿ ಶ್ರೀರಾಮಪ್ಪ ಮತ್ತು ಆತನ ಕುಟುಂಬದ ಸದಸ್ಯರು ಹಾಗೂ ಕೃಷ್ಣ ರೆಡ್ಡಿ ಮತ್ತು ಆತನ ಸಹಚರರು ಇವರ ಮಧ್ಯೆ ಆದಂಥ ಘರ್ಷಣೆ ಒಂದಕ್ಕೊಂದು ಸೇರಿ, ಸವರ್ಣೀಯರು ಮತ್ತು ದಲಿತರ ಮಧ್ಯೆ ಘರ್ಷಣೆಗೆ ಈಡುಮಾಡಿರುವಂಥ ಘಟನಾವಳಿಗಳು ನಡೆಯುತ್ತಾ ಇವೆ. ಈ ಹಿಂದೆ ಶ್ರೀರಾಮಪ್ಪನ ಗೆಳೆಯನಾದ ನಾಗರಾಜನ ಅಣ್ಣನ ಕೊಲೆ ಆಗಿದೆ. ಆ ಸಂದರ್ಭದಲ್ಲಿ ಶ್ರೀರಾಮಪ್ಪ ತನ್ನ ಗೆಳೆಯ ನಾಗರಾಜನಿಗೆ ಕೋರ್ಟು ಕಚೇರಿ ಕೆಲಸ ಹಾಗೂ ಇನ್ನಿತರ ಕೆಲಸಗಳಿಗೆ ಸಹಾಯ ಮಾಡಿದ್ದಾನೆ. ಈ ರೀತಿ ಶ್ರೀರಾಮಪ್ಪ ತನ್ನ ಗೆಳೆಯನಿಗೆ ಸಹಾಯ ಮಾಡಿದ್ದರಿಂದ ಅವನ ಮೇಲೆ ಸವರ್ಣೀಯರಿಗೆ ಸಿಟ್ಟು ಬಂದಿದೆ. ನಂತರ, ಶ್ರೀರಾಮಪ್ಪ ಮತ್ತು ಅಣ್ಣತಮ್ಮಂದಿರ ನಡುವೆ ಆಗಾಗ ಘರ್ಷಣೆಗಳು ಆಗುತ್ತಾ ಬಂದಿವೆ. 1998ರಲ್ಲಿ ಶ್ರೀರಾಮಪ್ಪನ ಅಣ್ಣನ ಕೊಲೆ ಮಾಡಲಾಗಿದೆ. ಈ ಕೊಲೆಯನ್ನು ಮಾಡಿದವರು ಸವರ್ಣೀಯರು. ಸದರಿ ಘಟನೆ ನಡೆಯುವುದಕ್ಕೆ ಒಂದೆರಡು ದಿವಸಗಳ ಮುಂಚೆ ದಲಿತ ವರ್ಗದವರಾದ ಶ್ರೀರಾಮಪ್ಪನ ಗುಂಪಿಗೆ ಸೇರಿದಂಥ ಶಂಕರ ಮತ್ತು ನರಸಿಂಹಪ್ಪ ಹಾಗೂ ಸವರ್ಣೀಯರ ಗುಂಪಿನ ಕೃಷ್ಣ ರೆಡ್ಡಿ ಮತ್ತು ಅವರ ಸಂಗಡಿಗರು ಹೀಗೆ ಈ ಎರಡು ಗುಂಪಿನ ನಡುವೆ ಸಣ್ಣಪುಟ್ಟ ಕಾರಣಗಳಿಗಾಗಿ ಕೆಲವೊಂದು ಘರ್ಷಣೆಗಳು ಆಗಿವೆ. ಈ ಸಂದರ್ಭದಲ್ಲಿ ಶಂಕರ ಮತ್ತು ನರಸಿಂಹಪ್ಪ ಇವರ ಮೇಲೆ ಹಲ್ಲೆ ನಡೆದಿದೆ. ಇದರ ಸಲುವಾಗಿ ಶ್ರೀರಾಮಪ್ಪ ಫಿರ್ಯಾದಿ ಕೊಡಲಿಕ್ಕೆ ಪೊಲೀಸ್ ಸ್ಟೇಷನ್‌ಗೆ ಹೋಗಿದ್ದಾನೆ. ಯಾರಿಗಾಗಿ ದೂರು ಕೊಡಲಾಗಿತ್ತೊ ಅವನನ್ನು ಹಿಡಿದಿಲ್ಲ. ಕೊನೆಗೆ ಮೇಲಾಧಿಕಾರಿಯ ಹತ್ತಿರ ಶ್ರೀರಾಮಪ್ಪ ಹೋಗಿ ದೂರು ಕೊಟ್ಟ ನಂತರ ಮೇಲಾಧಿಕಾರಿಯ ಆದೇಶದಂತೆ ಆತನ ಫಿರ್ಯಾದಿಯನ್ನು ತೆಗೆದುಕೊಳ್ಳಲಾಗಿದೆ. ತದನಂತರ ಶ್ರೀರಾಮಪ್ಪ ಮತ್ತು ಆತನ ಸಂಗಡಿಗರು 11ನೇ ತಾರೀಖು ತನ್ನ ಗ್ರಾಮಕ್ಕೆ ಮರಳಿ ಬಂದಂಥ ಸಂದರ್ಭದಲ್ಲಿ ಅವರಿಗೂ ಮತ್ತು ಕೃಷ್ಣ ರೆಡ್ಡಿ ಗುಂಪಿನವರ ಮಧ್ಯೆ ಘರ್ಷಣೆ ಆಗಿದೆ. ಈ ಘರ್ಷಣೆಯಲ್ಲಿ ಕೃಷ್ಣ ರೆಡ್ಡಿಯ ಹತ್ಯೆ ಆಗಿದೆ. ಇದೇ ಸಂದರ್ಭದಲ್ಲಿ ಇಬ್ಬರು ಪೊಲೀಸ್ ಪೇದೆಗಳು ಆ ಸ್ಥಳದಲ್ಲಿ ಇದ್ದರು. ಆದರೆ ಆ ಇಬ್ಬರು ಪೊಲೀಸ್ ಪೇದೆಗಳು ಜೀವ ಭಯದಿಂದ ಅಲ್ಲಿ ನಡೆಯುತ್ತಿದ್ದ ಘರ್ಷಣೆಯನ್ನು ತಡೆಯುವುದಕ್ಕೆ ಯಾವುದೇ ರೀತಿಯಾದ ಕ್ರಮವನ್ನು ಕೈಗೊಂಡಿಲ್ಲ. ಈ ಹಿಂದೆ ಬಹುಶಃ 1997ರಲ್ಲಿ 3 ಜನ ಪೊಲೀಸ್ ಪೇದೆಗಳ ಸಜೀವ ದಹನ ಆಗಿರುವ ಭಯ ಅವರಿಗೆ ಇದ್ದಿರಬಹುದು. ಆ ಗುಂಪು ಆ ಇಬ್ಬರು ಪೊಲೀಸ್ ಪೇದೆಗಳನ್ನು ಅಲ್ಲಿಂದ ಓಡಿಸಿಬಿಟ್ಟರು. ನಂತರ ಬಹುಶಃ ಅಲ್ಲಿ ಕಾನೂನು ಸುವ್ಯವಸ್ಥೆ ಎನ್ನುವಂಥ ವಾತಾವರಣ ಅಲ್ಲಿ ಇರಲಿಲ್ಲ. ಅಲ್ಲಿ ಯಾರೂ ಹೇಳುವವರು ಕೇಳುವವರು ಇರಲಿಲ್ಲ. ಬಹುಶಃ ಅಂಥ ಒಂದು ಪರಿಸ್ಥಿತಿಯಲ್ಲಿ ಕೃಷ್ಣ

ರೆಡ್ಡಿಯವರ ಗುಂಪು ಇಡೀ ವ್ಯವಸ್ಥೆಯನ್ನು ತನ್ನ ಕೈಗೆ ತೆಗೆದುಕೊಂಡು ದಲಿತ ವರ್ಗದ ಶ್ರೀರಾಮಪ್ಪ ಮತ್ತು ಅವರ ಸಂಗಡಿಗರ ಬೆನ್ನು ಹತ್ತಿದ್ದಾರೆ. ಅವರು ತಮ್ಮ ಜೀವ ಉಳಿಸಿಕೊಳ್ಳುವ ಸಲುವಾಗಿ ತಮ್ಮ ಮನೆಗೆ ಹೋಗಿ ಬಾಗಿಲು ಹಾಕಿಕೊಂಡಿದ್ದಾರೆ. ಕೃಷ್ಣ ರೆಡ್ಡಿ ಗುಂಪಿನ ಸುಮಾರು 152 ಜನರ ಗುಂಪು ಬಾಗಿಲು ತೆಗೆಯುವುದಕ್ಕೆ ಪ್ರಯತ್ನ ಪಟ್ಟಿದೆ. ಬಾಗಿಲನ್ನು ತೆಗೆಯದಿದ್ದಾಗ ಕಲ್ಲಿನಿಂದ ಬಾಗಿಲಿಗೆ ಜಜ್ಜಲಾಗಿದೆ, ಹಾಗೂ ಇನ್ನಿತರ ಬೇರೆ ಬೇರೆ ಒತ್ತಡದ ಕ್ರಮಗಳನ್ನು ಕೈಗೊಂಡರೂ ಸದರಿ ಗುಂಪಿನಿಂದ ಆ ಮನೆಯ ಒಳಗೆ ಪ್ರವೇಶ ಮಾಡಲಿಕ್ಕೆ ಆಗಲಿಲ್ಲ. ನಂತರ ಆ ಗುಂಪು ಅಲ್ಲಿದ್ದಂಥ ಹುಲ್ಲಿನ ಬಣವೆಯಿಂದ ಹುಲ್ಲನ್ನು ತಂದು ಬಾಗಿಲು ಕಿಟಿಕಿಗೆ ಹಾಕಿ, ಊರಲ್ಲಿ ಇದ್ದಂಥ ಬ್ಯಾರಲ್‌ನಿಂದ ಸೀಮೆಣ್ಣೆ ತೆಗೆದುಕೊಂಡು ಬಂದು ಹುಲ್ಲಿಗೆ ಸಿಂಪಡಿಸಿ ಬೆಂಕಿ ಹಚ್ಚಿದ್ದಾರೆ. ಇದು ಕೇವಲ 15-20 ನಿಮಿಷದಲ್ಲಿ ನಡೆದ ಘಟನೆಯಾಗಿದೆ. ನಂತರ, ಆ ಸ್ಥಳದಿಂದ ಇಬ್ಬರು ಪಿ.ಸಿ.ಗಳು ಮೇಲಿನ ಅಧಿಕಾರಿಗಳಿಗೆ ಸುದ್ದಿ ಕೊಟ್ಟಿದ್ದಾರೆ. ನಾನೂ ಸಹ ಸ್ಥಳಕ್ಕೆ ಭೇಟಿ ನೀಡಿದ್ದೆ. ಹಿರಿಯ ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಬರುವ ಮುಂಚೆಯೇ ಏಳು ಜನ ದಲಿತರು ಇಕ್ಕಟ್ಟಾದ ಮನೆಯಲ್ಲಿ ಸಜೀವವಾಗಿ ದಹನವಾಗಿದ್ದಾರೆ. ಈ ಸಂದರ್ಭದಲ್ಲಿ ರಾಮಪ್ಪ ಮತ್ತು ಆಂಜನಪ್ಪ ಅವರೊಂದಿಗೆ ಏನೂ ತಪ್ಪು ಮಾಡಿರದ ತಾಯಿ ರಾಮಕ್ಕ, ಅಕ್ಕ ಸುಬ್ಬಮ್ಮ, ಅವರ ಸಂಬಂಧಿಕರಾದ ಪಾಪಮ್ಮ, ನರಸಿಂಹ ಮತ್ತೊಬ್ಬ ಅಂಗವಿಕಲನಾದ ಪಾಪಣ್ಣ ಇವರೆಲ್ಲ ಸಜೀವವಾಗಿ ಸುಟ್ಟು ಹೋಗಿದ್ದಾರೆ. ಅವರಿಗೂ ಇಂದಿನ ಘಟನಾವಳಿಗೂ ಯಾವುದೇ ಸಂಬಂಧವಿಲ್ಲ. ಆದರೂ, ಅಮಾಯಕರು ಅಲ್ಲಿ ಸುಟ್ಟು ಭಸ್ಮವಾಗಿದ್ದಾರೆ. ಇದನ್ನೆಲ್ಲ ವಿಚಾರ ಮಾಡುತ್ತಾ ಹೋದರೆ, ರಾಜ್ಯದಲ್ಲಿ ಹಾಗೂ ಜಿಲ್ಲೆಯಲ್ಲಿ ಏನಾದರೊಂದು ಕಾನೂನು ಸುವ್ಯವಸ್ಥೆ, ಬಿಗಿಯಾದ ಆಡಳಿತ ಇದೆಯೇ ಎಂಬುದನ್ನು ನಾವು ನೋಡಬೇಕಾಗುತ್ತದೆ. ಮೂರು ವರ್ಷಗಳಿಂದ ಒಂದಕ್ಕೊಂದು ಘಟನೆಗಳು ನಡೆಯುತ್ತಾ ಬಂದಿವೆ. ನನಗನ್ನಿಸುತ್ತದೆ. ಜಿಲ್ಲಾಡಳಿತ, ಜಿಲ್ಲಾ ಪೋಲೀಸ್ ಅಧಿಕಾರಿಗಳು ಸರಿಯಾಗಿ ಇದನ್ನು ಅಭ್ಯಾಸ ಮಾಡಿಕೊಂಡು ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಿ, ಅಂಥ ಸೆನ್ಸಿಟಿವ್ ಏರಿಯಾಗಳಲ್ಲಿ ಬಹುಶಃ ಸರಿಯಾದ ಕ್ರಮಗಳನ್ನು ಕೈಗೊಂಡಿದ್ದರೆ ಅಥವಾ ಶ್ರೀ ರಾಮಪ್ಪ ಒಂದು ದಿವಸ ಮುಂಚೆಯೇ ಪೋಲೀಸರಿಗೆ ಫಿರ್ಯಾರ್ದು ನೀಡಲು ಹೋದಾಗಲಾದರೂ, ಸರಿಯಾದ ಕ್ರಮವನ್ನು ಕೈಗೊಂಡಿದ್ದರೆ, ಇಂಥ ಘಟನೆಗಳು ನಡೆಯುತ್ತಿರಲಿಲ್ಲ. ಕೋಲಾರ ಜಿಲ್ಲಾ ಎಸ್ಪಿ ಇಂದಿನ ಪತ್ರಿಕೆಯಲ್ಲಿ ಹೇಳಿಕೆ ನೀಡಿ, ಘಟನೆಯಲ್ಲಿ ಪೋಲೀಸ್ ಇಲಾಖೆಯ ವೈಫಲ್ಯ ಇರುವುದನ್ನು ಸ್ಪಷ್ಟವಾಗಿ ಒಪ್ಪಿ ಕೊಂಡಿದ್ದಾರೆ. ಇಂದಿನ ವಿಜಯ ಕರ್ನಾಟಕ ಎಂಬ ಕನ್ನಡ ದಿನಪತ್ರಿಕೆಯಲ್ಲಿ ಪೋಲೀಸ್ ನಿರ್ಲಕ್ಷ್ಯ ಕಾರಣ, ಎಸ್ಪಿ ಒಪ್ಪಿಗೆ'' ಎಂಬ ಶೀರ್ಷಿಕೆಯಡಿಯಲ್ಲಿ, ''ಚಿಂತಾಮಣಿ ತಾಲೂಕಿನ ಕಂಬಾಲಪಲ್ಲಿ ಹಳ್ಳಿಯಲ್ಲಿ ಕಳೆದ ಶನಿವಾರ ಸವರ್ಣೀಯನೊಬ್ಬನ ಕೊಲೆಯಾಗಿದೆ ಮತ್ತು ಇದಕ್ಕೆ ಪ್ರತೀಕಾರವಾಗಿ ಏಳು ಜನ

ದಲಿತರ ಸಜೀವ ದಹನವಾಗಿದ್ದು, ಇದಕ್ಕೆ ಪೋಲೀಸರ ನಿರ್ಲಕ್ಷ್ಯವೇ ಕಾರಣವೆಂದು ಜಿಲ್ಲಾ ಪೋಲೀಸ್ ವರಿಷ್ಠ ಶ್ರೀ ಜಯಪ್ರಕಾಶ್ ವಿ.ನಾಯಕ್ ಹೇಳಿದರು. ಬುಧವಾರ ಸುದ್ದಿಗಾರರೊಡನೆ ಮಾತನಾಡುತ್ತಿದ್ದ ಅವರು, ಈ ಸಂಬಂಧ ಕೆಂಚಾರ್ಲ ಹಳ್ಳಿ ಠಾಣೆಯ ಎಸ್.ಐ. ಶ್ರೀ ಕೆ.ಜಿ.ವೆಂಕಟರಾಮಪ್ಪ ಎಂಬುವವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿದ್ದು, ಅವರ ವಿರುದ್ಧ ವಿಚಾರಣೆಗೆ ಆದೇಶಿಸಲಾಗಿದೆಯೆಂದು ಸಹ ತಿಳಿಸಿದರು. ಚಿಂತಾಮಣಿ ತಾಲೂಕಿನ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಆನಂದ್‌ರವರಿಗೆ ಈ ಘಟನೆಯ ವಿಚಾರ ಅದೇ ದಿನ ಬೆಳಿಗ್ಗೆ 5 ಗಂಟೆಗೇ ತಿಳಿದಿತ್ತು ಮತ್ತು ಜಿಲ್ಲಾ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಹೆಚ್ಚುವರಿ ಡಿವೈಎಸ್‌ಪಿ ಶ್ರೀ ಬಿ.ಶ್ರೀಕಂಠಪ್ಪನವರಿಗೆ ಬೆಳಿಗ್ಗೆ 11 ಗಂಟೆಗೆ ಗ್ರಾಮಕ್ಕೆ ಭೇಟಿ ನೀಡಿ ಬಂದೋಬಸ್ತ್ ವ್ಯವಸ್ಥೆ ಮಾಡಲು ಆದೇಶ ನೀಡಲಾಗಿದ್ದರೂ, ಅವರು ಘಟನೆ ನಡೆದ ನಂತರ ಆ ಸ್ಥಳಕ್ಕೆ ತೆರಳಿರುವುದು ಇಲ್ಲಿ ಸ್ಪಷ್ಟವಾಗಿದೆ. ಈ ಮೇಲ್ಕಂಡ ಅಧಿಕಾರಿಗಳು ತೆಗೆದುಕೊಂಡ ಕ್ರಮಗಳ ಬಗ್ಗೆ ಚಿಂತಾಮಣಿ ಡಿವೈಎಸ್‌ಪಿ ರಾಮಯ್ಯ ಅನುಸರಣಾ ಕ್ರಮವನ್ನು ಸೂಕ್ತ ಕಾಲದಲ್ಲಿ ತೆಗೆದುಕೊಳ್ಳದಿರುವುದರಿಂದ ಮೇಲಧಿಕಾರಿಗಳಿಗೆ ಈ ಬಗ್ಗೆ ವರದಿಯನ್ನು ಸಲ್ಲಿಸಲಾಗಿದೆಯೆಂದು ಎಸ್‌ಪಿಯವರು ತಿಳಿಸಿದರು'' ಎಂದು ವರದಿಯಾಗಿದೆ. ಹೀಗಾಗಿ, ಎಸ್‌ಪಿಯವರ ಹೇಳಿಕೆ ಓದಿದರೆ, ಪೋಲೀಸರ ನಿರ್ಲಕ್ಷ್ಯವಿತ್ತು ಎಂಬುದು ಬಹಳ ಸ್ಪಷ್ಟವಾಗಿ ಕಂಡು ಬರುತ್ತದೆ. ನನಗನ್ನಿಸುತ್ತದೆ, ಕಾಂಗ್ರೆಸ್ ಪಕ್ಷ ಯಾವಾಗ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತದೆಯೋ, ಆ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುವ ಪ್ರಸಂಗವನ್ನು ನಾವು ನೋಡುತ್ತಿದ್ದೇವೆ. ಹಿಂದೆ ಶ್ರೀ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಹಲವಾರು ಘಟನೆಗಳನ್ನು ನಾವು ನೋಡಿದ್ದೇವೆ. ಚನ್ನಪಟ್ಟಣ, ರಾಮನಗರದಲ್ಲಿ ಮತೀಯ ಗಲಭೆಗಳಾದವು. ದಾವಣಗೆರೆಯಲ್ಲಿ ಒಂದು ತಿಂಗಳು ಸತತವಾಗಿ ಮತೀಯ ಗಲಭೆಗಳಾದವು ಮಾನ್ಯ ಶ್ರೀ ಎಸ್.ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಕಾವೇರಿ ವಿಷಯದ ಬಗ್ಗೆ ದೊಡ್ಡ ಗಲಭೆಯಾಯಿತು. ಆ ಸಂದರ್ಭದಲ್ಲಿ ಎಷ್ಟೋ ಜನರ ಹತ್ಯೆ ಮಾಡಲಾಯಿತು. ಇವತ್ತು ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಯಾವ ರೀತಿ ಹದಗೆಡುತ್ತಿದೆ ಎಂಬುದನ್ನು ನಾವು ಕಳೆದ 4-5 ತಿಂಗಳಿನಿಂದ ನೋಡುತ್ತಿದ್ದೇವೆ. ಗೃಹ ಸಚಿವರಾದ ಮಾನ್ಯ ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆಯವರು ಅನುಭವಿಗಳು, ಹಿರಿಯ ನಾಯಕರು, ಬಹುಶಃ ಅವರು ರಾಜಕೀಯ ಪ್ರವೇಶ ಮಾಡಿದಾಗ, ನಾವು ಹೈಸ್ಕೂಲು, ಪ್ರೈಮರಿ ಸ್ಕೂಲಿನಲ್ಲಿ ಕಲಿಯುತ್ತಿದ್ದೆವೋ ಏನೋ? ಅಂಥ ಒಬ್ಬ ಆಡಳಿತ ಮುತ್ಸದ್ದಿಯಾಗಿದ್ದು, ಅವರು ಇವತ್ತು ಗೃಹ ಸಚಿವರಾಗಿರುವ ಸಂದರ್ಭದಲ್ಲಿ ಬಹುಶಃ ಒಳ್ಳೆಯ ಆಡಳಿತವನ್ನು, ಕಾನೂನು ಸುವ್ಯವಸ್ಥೆಯನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತಾರೆಂಬ ವಿಶ್ವಾಸ ನಮಗಿತ್ತು. ಆದರೆ, ಇವತ್ತು

ಹೀಗೇಕಾಗುತ್ತದೆ? ಶ್ರೀ ಖರ್ಗೆಯವರಿಗೇನಾಗಿದೆ? ಮುಖ್ಯಮಂತ್ರಿಗಳಲ್ಲಿ ಮತ್ತು ಶ್ರೀ ಖರ್ಗೆಯವರಲ್ಲಿ ಏನಾದರೂ ಭಿನ್ನಾಭಿಪ್ರಾಯ, ಗೊಂದಲಗಳಿವೆಯೇ? ಅದರಿಂದಾಗಿ, ಇವೆಲ್ಲ ನಡೆಯುತ್ತಿದೆಯೋ, ಏನೋ ಎಂದು ನಮಗನ್ನಿಸುತ್ತದೆ. ಇದರ ಬಗ್ಗೆ ನಾವು ಕೂಲಂಕಷವಾಗಿ ವಿಚಾರ ಮಾಡಬೇಕಾಗಿದೆ. ಈ ಘಟನಾವಳಿಗಳು ಏಕಾಗುತ್ತಿವೆ? ಮೊನ್ನೆ ಹುಬ್ಬಳ್ಳಿಯಲ್ಲಿ ಎರಡು ಜೋಡಿ ಕೊಲೆಗಳಾಗಿದೆ. ಉಣಕಲ್ ಕೆರೆಯಲ್ಲಿ ಸಂಶಯಾಸ್ಪದ ರೀತಿಯಲ್ಲಿ ಇಬ್ಬರು ಬಾಲಕರು ಮುಳುಗಿ ಸತ್ತರು ಪತ್ರಿಕೆಯಲ್ಲಿ ದಿನನಿತ್ಯ ದರೋಡೆ ಕಳ್ಳತನದ ಸುದ್ದಿಗಳು ವರದಿಯಾಗುತ್ತಿರುವುದನ್ನು ನೋಡಿದರೆ, ಇದರ ಹಿಂದೆ ಏನಿದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಅದರಲ್ಲೂ ಕೋಲಾರ ಜಿಲ್ಲೆ ಅತೀ ಸೂಕ್ಷ್ಮ ಪ್ರದೇಶ. ಅದರಲ್ಲೂ ಆಂಧ್ರಪ್ರದೇಶದ ಬಾರ್ಡರ್‌ಗೆ ಹೊಂದಿಕೊಂಡಿರುವ ಜಿಲ್ಲೆ ಕೋಲಾರ. ಕೋಲಾರ ಜಿಲ್ಲೆಯನ್ನು ಯಾವಾಗಲೂ ನಾವು ಸೆನ್ಸಿಟೀವ್ ಡಿಸ್ಟ್ರಿಕ್ಟ್ ಎಂದು ನೋಡಬೇಕಾಗುತ್ತದೆ. ಆದರೆ, ಇವತ್ತು ಅಲ್ಲಿಯ ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಏಕೆ ಫೇಲಾಗುತ್ತಿದೆ? ಮೊನ್ನೆ ನಮ್ಮ ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಬಿ.ಎಸ್.ಯಡಿಯೂರಪ್ಪ, ಶಾಸಕರಾದ ಶ್ರೀ ಪಿ.ಸಿ.ಮೋಹನ್, ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಶ್ರೀ ಮುಖ್ಯಮಂತ್ರಿ ಚಂದ್ರು, ನಾನು ಎಲ್ಲರೂ ಸ್ಥಳಕ್ಕೆ ಭೇಟಿ ನೀಡಿದ್ದೆವು. ಅಲ್ಲಿನ ಪರಿಸ್ಥಿತಿ ನೋಡಿದರೆ, ಜನರ ಅಭಿಪ್ರಾಯ ಕೇಳಿದರೆ, ಕೋಲಾರ ಜಿಲ್ಲಾ ಪೋಲೀಸ್ ಅಧಿಕಾರಿಗಳು, ರೆವಿನ್ಯೂ ಅಧಿಕಾರಿಗಳು ಎಲ್ಲರೂ ನಿಷ್ಕ್ರಿಯರಾಗಿದ್ದಾರೆ, ನಿರ್ವೀರ್ಯರಾಗಿದ್ದಾರೆ ಎಂದು ಹೇಳುತ್ತಿದ್ದರು. ರಾಜಕಾರಣಿಗಳ ಹಸ್ತಕ್ಷೇಪ ಅಲ್ಲಿ ನಡೆಯುತ್ತಿದೆ. ಪ್ರಭಾವಿ ರಾಜಕಾರಣಿಗಳಿರಬಹುದು, ಅವರ ಹಸ್ತಕ್ಷೇಪ ಅಧಿಕಾರಿಗಳ ಮೇಲಾಗುತ್ತಿದೆ. ಹೀಗಾಗಿ, ಅಧಿಕಾರಿಗಳು ನಿಷ್ಕ್ರಿಯರಾಗಿದ್ದಾರೆ. ಯಾವುದೇ ಒಂದು ಘಟನೆ ನಡೆದರೆ ತಕ್ಷಣ ಬಂಧಿಸುವುದು, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಾಗುತ್ತಿಲ್ಲ. 1997ರಲ್ಲಿ ಮೂರು ಜನ ಪಿ.ಸಿ.ಗಳು ಸಜೀವವಾಗಿ ಸುಟ್ಟು ಹೋದ ಸಂದರ್ಭದಲ್ಲಿ ಸಂಬಂಧಪಟ್ಟ ಆರೋಪಿಗಳ ಮೇಲೆ ಸರಿಯಾದ ಕ್ರಮ ತೆಗೆದುಕೊಂಡು, ಶಿಕ್ಷಿಸಿದ್ದರೆ, ಈ ಘಟನಾವಳಿ ನಡೆಯುತ್ತಿರಲಿಲ್ಲ. ಆ ಸಂದರ್ಭದಲ್ಲಿ ಮೂರು ಜನ ಪಿ.ಸಿ.ಗಳು ಸತ್ತ ನಂತರ, ಅಲ್ಲಿದ್ದ ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆ ಹೊಂದಿ, ಇವತ್ತಿನವರೆಗೂ ರಾಜಾರೋಷವಾಗಿ ಅಡ್ಡಾಡುತ್ತಿದ್ದಾರೆ. ಪಿ.ಸಿ.ಗಳನ್ನೇ ಸುಟ್ಟು ಹಾಕಿದರೂ ಏನೂ ಆಗುವುದಿಲ್ಲ ಎಂಬ ಮನೋಭಾವನೆ ಜನರಲ್ಲಿ ಬೆಳೆಯುತ್ತಿದೆ ಮತ್ತು ಅಪರಾಧಿ ಸ್ಥಾನದಲ್ಲಿ ಯಾರಿದ್ದಾರೆ ಅವರಲ್ಲೂ, ಪೋಲೀಸರನ್ನೆ ಸುಟ್ಟರೂ ಹೇಳುವವರೂ, ಕೇಳುವವರೂ ಇವತ್ತು ಇಲ್ಲವೆಂಬ ವಾತಾವರಣ ಮೂಡುತ್ತದೆ ಎಂದಮೇಲೆ ನಾವು ಮುಂದೆ ಯಾವ ಹಂತಕ್ಕೆ ಹೋಗಬಹುದು?

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ ಇದು

ಪ್ರಾಥಮಿಕ ಹಂತದಲ್ಲಿರುವ ಸನ್ನಿವೇಶ. ಈ ಹಂತದಲ್ಲಿ ತಾವು ಇನ್ನೂ ಚರ್ಚೆಗೆ ಅನುಮತಿ ಕೊಟ್ಟಿಲ್ಲ. ಅನುಮತಿ ಕೋರುವಾಗ, ತಮ್ಮನ್ನು ಒಪ್ಪಿಸುವ ಕೆಲಸವನ್ನು ಮಾನ್ಯ ವಿರೋಧಪಕ್ಷದ ನಾಯಕರು ಮಾಡುತ್ತಿದ್ದಾರೆ. ಇದು ವಿಷಯವನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸುವ ಸಂದರ್ಭ. ಪ್ರಸ್ತಾವನೆಗೆ ತಾವು ಅಂಗೀಕಾರ ನೀಡಿದ ಮೇಲೆ, ವಿವರವಾದ ವಿಷಯಗಳನ್ನು ಪ್ರಸ್ತಾಪಿಸುವ ಸಂದರ್ಭ ಬರುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಶ್ರೀ ತಿಮ್ಮಪ್ಪನವರು ಈ ಭಾಗದಲ್ಲಿ ಕುಳಿತಿದ್ದ ಸಂದರ್ಭದಲ್ಲಿ ನಿಲುವಳಿ ಸೂಚನೆಯ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಎರಡು ದಿನಗಳನ್ನು ತೆಗೆದು ಕೊಂಡಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು ಎರಡು ನಿಮಿಷ ಕೂಡ ಮಾತನಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಸಿಂಧ್ಯರವರು ಹೇಳುವುದನ್ನು ಕೇಳಿದರೆ ಆಶ್ಚರ್ಯವಾಗುತ್ತದೆ. ಯಾರಾದರೂ ನಂಬುವ ಮಾತೇ ಇದು?

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವು ಸಮಾಜ ಕಲ್ಯಾಣ ಇಲಾಖೆಯ ಸಚಿವರು, ಸಭೆಯ ಹಿರಿಯ ಸದಸ್ಯರು, ದಯವಿಟ್ಟು ಈಲ್ಡಾಗಿ. ಇಂಥ ಭಯಂಕರವಾದ, ಅಮಾನವೀಯವಾದ ಘಟನೆ ನಡೆದಿರುವ ಸಂದರ್ಭದಲ್ಲಿ ಇದು ಕೇವಲ ತಿಮ್ಮಪ್ಪನವರು, ಸಿಂಧ್ಯಾರವರು, ಜಗದೀಶ್ ಶೆಟ್ಟರ್ ಮತ್ತು ಸಭಾನಾಯಕರು ಹೇಳಿದರು ಎಂಬ ಪ್ರಶ್ನೆ ಅಲ್ಲ. ನಾವು ಎಲ್ಲರೂ ಕೂಡ ತಲೆತಗ್ಗಿಸತಕ್ಕಂಥ ಘಟನೆ ಇದು. ಆದುದರಿಂದ ನಿಲುವಳಿ ಸೂಚನೆ ನೋಟಿಸ್ ತೆಗೆದುಕೊಳ್ಳುವುದಕ್ಕೆ ತಾವು ಅನುಮತಿಸಿದರೆ ನಾವು ಈಗಲೇ ಸಬ್‌ಮಿಷನ್ ಮಾಡುತ್ತೇವೆ. ವಿಷಯದ ಗಾಂಭೀರ್ಯತೆ ಹಾಗೂ ವಿಷಯದ ಮಹತ್ವದ ಮೇಲೆ ನಾವು ಎಲ್ಲರೂ ಯೋಚನೆ ಮಾಡಿಕೊಂಡು, ವಿಮರ್ಶೆ ಮಾಡತಕ್ಕಂಥ ಘಟ್ಟವನ್ನು ನಾವು ಈಗ ತಲುಪಿದ್ದೇವೆ. ಆದ್ದರಿಂದ, ನಾನು ಸರ್ಕಾರದಲ್ಲಿ ಏನು ಒಂದು ಮನವಿ ಮಾಡಿ ಕೊಳ್ಳುತ್ತೇನೆಂದರೆ, ಮುಖ್ಯಮಂತ್ರಿಗಳು ಹೊರಗಡೆ ಸರ್ಕಾರದ ಕೆಲಸದ ನಿಮಿತ್ತ ಸ್ವಲ್ಪ ಸಮಯ ಹೋಗಬೇಕು ಎಂದು ಹೇಳಿದಿರಿ, ನಿಲುವಳಿ ಸೂಚನೆಗೆ ಅನುಮತಿ ಕೊಟ್ಟಿದ್ದೇವೆಂದು ಸರ್ಕಾರದವರು ಒಪ್ಪಿಕೊಂಡು ತಾವು ನಮಗೆ ಅನುಮತಿ ಕೊಡುವುದಾದರೆ ನಾವು ಎಲ್ಲರೂ ಸಹಿತ ಈ ವಿಚಾರದ ಬಗ್ಗೆ ಮಾತನಾಡಬೇಕು ಎಂದಿದ್ದೇವೆ. ಅನೇಕ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ ಗಾಂಭೀರ್ಯತೆಯನ್ನು ನಾವು ಮನಗಂಡಿಲ್ಲ ಎಂದು ಯಾರಾದರೂ ಭಾವಿಸುವುದಾದರೆ ಅದು ತಪ್ಪು. ಮಾನ್ಯ ಸದಸ್ಯರಿಗೆ ಆ ವಿಷಯದ ಬಗ್ಗೆ ಎಷ್ಟು ಗಾಂಭೀರ್ಯತೆ, ಕಾಳಜಿ ಇದೆಯೋ ಅಷ್ಟು ನಮಗೂ ಕೂಡ ಇದೆ. ಈಗ ನಡೆದಿರತಕ್ಕಂಥ ಘಟನೆಯನ್ನು ಮೆಚ್ಚಿಕೊಂಡಿದ್ದಾರೆಂದು

ಯಾರೂ ಭಾವಿಸಬಾರದು. ಆದುದರಿಂದ, ಯಾವ ಹಂತದಲ್ಲಿ ಯಾವ ವಿಚಾರವನ್ನು ಎಷ್ಟು ಪ್ರಮಾಣದಲ್ಲಿ ಪ್ರಸ್ತಾಪಿಸಿಬೇಕೋ ಅಷ್ಟು ಪ್ರಮಾಣದಲ್ಲಿ ಪ್ರಸ್ತಾಪಿಸಿದರೆ ಸಭೆಯ ಘನತೆ ಹೆಚ್ಚುತ್ತದೆ.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಸಭಾಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಸಮಾಜ ಕಲ್ಯಾಣ ಸಚಿವರು ಆಗಿರುತ್ತಾರೆ. ಅವರ ಪ್ರಥಮ ಕರ್ತವ್ಯ ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರಿಗೆ, ರಕ್ಷಣೆ ಕೊಡತಕ್ಕಂಥ ಜವಾಬ್ದಾರಿಯನ್ನು ಹೊತ್ತಿರತಕ್ಕಂಥವರು. ಮಾನ್ಯ ವಿರೋಧ ಪಕ್ಷದ ನಾಯಕರು ದಲಿತರ ಕೊಲೆಯಾಗಿರತಕ್ಕಂಥ ವಿಚಾರದ ಬಗ್ಗೆ ಈ ಸದನದಲ್ಲಿ ನಿಲುವಳಿ ಸೂಚನೆ ಮುಖಾಂತರ ವಿಷಯವನ್ನು ತರುತ್ತಿದ್ದಾರೆ. ಇಡೀ ಕರ್ನಾಟಕದ ಇತಿಹಾಸದಲ್ಲಿಯೇ ಇಂಥ ಒಂದು ಹೀನಕೃತ್ಯ ನಡೆದಿಲ್ಲ. ಅವರು ಈ ವಿಚಾರವನ್ನು ಬೇಡ ಎನ್ನುವ ಉದ್ದೇಶದಿಂದ ಹೇಳುತ್ತಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳತಕ್ಕಂಥ ವಿಚಾರವಲ್ಲ...

ಅಧ್ಯಕ್ಷರು: ಅವರು ಈ ವಿಚಾರ ಬೇಡ ಎಂದು ಹೇಳಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ನಾನು ಬೇಡ ಎಂದು ಹೇಳಲಿಲ್ಲ, ಈ ಹಂತದಲ್ಲಿ ಎಷ್ಟು ಪ್ರಸ್ತಾಪ ಮಾಡಬೇಕೋ ಅಷ್ಟನ್ನು ಮಾತ್ರ ಮಾಡಿ ಎಂದು ಹೇಳಿದ್ದುದು.

ಶ್ರೀ ಬಿ.ಸೋಮಶೇಖರ್: ನೀವು ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ ನೀವುಗಳು ಮಾತನಾಡುವುದಕ್ಕಾಗುವುದಿಲ್ಲ, ವಿರೋಧ ಪಕ್ಷದವರು ಮಾತನಾಡುತ್ತಾರೆ, ಆಗ ನೀವು ಸುಮ್ಮನೆ ಕುಳಿತುಕೊಳ್ಳಬೇಕು.

ಅಧ್ಯಕ್ಷರು: ಅವರು ಹೇಳಿದ್ದು ಏನೆಂದರೆ, ಇದು ಪ್ರಿಲಿಮಿನರಿ ಸಬ್‌ಮಿಷನ್ ಸಂಕ್ಷಿಪ್ತವಾಗಿ ಹೇಳಲಿ ಎಂದು ಹೇಳಿದರೆ ಹೊರತು importance ಬಗ್ಗೆ He never told the House anything....

(ಗೊಂದಲ)

ಶ್ರೀ ಬೈರೇಗೌಡ ಸಿ (ವೇಮಗಲ್): ನಾವು ಕೆಲವು ವಿಚಾರಗಳನ್ನು ಪೂರ್ತಿಯಾಗಿ ಹೇಳಿದಿದ್ದರೂ ಸೂಕ್ಷ್ಮವಾಗಿ ಹೇಳಬೇಕಾಗುತ್ತದೆ. ಆ ರೀತಿಯ ಕೆಲಸವನ್ನು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಮಾಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ತಾವು ಹಿರಿಯ ಸದಸ್ಯರು, ಪೂರ್ವಭಾವಿ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನಿಯಮಾವಳಿಗಳಲ್ಲಿ ಇರತಕ್ಕಂಥ ಯಾವ ಇನ್‌ಗ್ರೇಡಿಯಂಟ್ ಏನಿದೆ ಅದನ್ನು ಅವರು ಸಬ್‌ಮಿಟ್ ಮಾಡಬೇಕು.

ಶ್ರೀ ಭೈರೇಗೌಡ. ಸಿ.: ಪೂರ್ವಭಾವಿಯಾಗಿ ಮಂಡನೆ ಮಾಡತಕ್ಕಂಥ ವಿಚಾರದಲ್ಲಿ ಮಾನ್ಯ ಅಧ್ಯಕ್ಷರನ್ನು ಒಲಿಸಬೇಕಾಗಿದೆ. ಅವರ ಮನಸ್ಸನ್ನು ಒಲಿಸಬೇಕಾಗಿದೆ. ಇಂಥ ಒಂದು ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ. ಇದನ್ನು ಚರ್ಚೆ ಮಾಡುವುದಕ್ಕೆ ಸರ್ಕಾರ ಒಪ್ಪಿದೆ ಎಂದು ಮಾನ್ಯ ಸಭಾಧ್ಯಕ್ಷರು ಹೇಳಿ ಬಿಟ್ಟರೆ ಈ ವಿಚಾರದ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್ ಬೇಕಾಗುವುದಿಲ್ಲ. ನೇರವಾಗಿ ಚರ್ಚೆ ಮಾಡಬಹುದು.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು): ಮಾನ್ಯ ಕಾಗೋಡು ತಿಮ್ಮಪ್ಪನವರು ಮಧ್ಯೆ ಪ್ರವೇಶ ಮಾಡಿದ ಉದ್ದೇಶ ಏನೆಂದರೆ, ಯಾವುದೇ ಚರ್ಚೆ ಆಗಲಿ ಅದೊಂದು structured debate ಆಗಬೇಕು. ನಿಲುವಳಿ ಸೂಚನೆ ಆಗಬೇಕಾದರೆ ಅದಕ್ಕೆ ಹಲವಾರು ವಿಧಿ ವಿಧಾನಗಳು ಇವೆ. ಇವುಗಳ ಚೌಕಟ್ಟಿನಲ್ಲಿ ನಿಲುವಳಿ ಸೂಚನೆಯನ್ನು ಸಭಾಧ್ಯಕ್ಷರು ಹಾಗೂ ಸದನದ ಗಮನಕ್ಕೆ ತರಕ್ಕಂಥದ್ದು ಇದೆ. ದುರಂತ ನಡೆದಂಥ ಸ್ಥಳಕ್ಕೆ ಮಾನ್ಯ ಕಾಗೋಡು ತಿಮ್ಮಪ್ಪನವರು ಈಗಾಗಲೇ ಎರಡು ಬಾರಿ ಹೋಗಿ ಬಂದಿದ್ದಾರೆ. ಇಂಥ ಬರ್ಬರ, ಅಮಾನುಷ, ನಾಗರೀಕತೆಯು ನಾಚತಕ್ಕಂಥ, ಮಾನವೀಯತೆ ಸತ್ತು ಹೋಗತಕ್ಕಂಥ ಘಟನೆ ಏನು ನಡೆದಿದೆ ಇದನ್ನು ಎಲ್ಲಾ ಪಕ್ಷದವರು ಖಂಡಿಸತಕ್ಕಂಥದ್ದು ನಾವು ಈಗಾಗಲೇ ಖಂಡಿಸಿದ್ದೇವೆ. ಇದು ಇನ್ನೊಬ್ಬರು ಮಾಡಿದ ತಪ್ಪು ಎಂದು ಬೆರಳು ತೋರಿಸಿ ಹೇಳತಕ್ಕಂಥದ್ದು ಏನೂ ಉಳಿದಿಲ್ಲ. ಈ ಸದನದ ಮೇಲೆ ಒಂದು ದೊಡ್ಡ ಜವಾಬ್ದಾರಿ ಇದೆ, ಆ ಜವಾಬ್ದಾರಿಯನ್ನು ಗಂಭೀರವಾದ ರೀತಿಯಲ್ಲಿ ನಾವು ನಿರ್ವಹಿಸುತ್ತೇವೆ, ಹಾಗೆ ನಿರ್ವಹಿಸುವಂಥ ಶಕ್ತಿಯನ್ನು ಪಡೆದಿದ್ದೇವೆ ಎನ್ನತಕ್ಕಂಥ ವಿಶ್ವಾಸ ನಮಗಿದೆ. ತಮಗೆ ಯಾವ ರೂಪದಲ್ಲಿ ಈ ವಿಷಯದ ಮೇಲೆ ಚರ್ಚೆಯಾಗಬೇಕು ಎನ್ನುವ ಇರಾದೆ ಇದೆ ಅದಕ್ಕೆ ಸರ್ಕಾರ ಮಣಿಯುತ್ತದೆ.

ಶ್ರೀ ಬಿ.ಸೋಮಶೇಖರ: ಇದು ನಿಲುವಳಿ ಸೂಚನೆ, ಈ ನಮ್ಮ ಪ್ರೊಸೀಡಿಂಗ್ಸ್‌ನಲ್ಲಿ ಹೊಸದೇನಲ್ಲ. ಹಿಂದೆ ಅನೇಕ ಸಾರಿ ನಿಲುವಳಿ ಸೂಚನೆಗೆ ಅವಕಾಶ ಕೊಟ್ಟು ಚರ್ಚೆ ನಡೆದಿದೆ. ಗಾಂಭೀರ್ಯತೆ ಇಲ್ಲದೆ ಇರತಕ್ಕಂಥ ವಿಚಾರಗಳಿಗೆಲ್ಲ ನಾವು ಚರ್ಚೆಗೆ ಅವಕಾಶ ಕೊಟ್ಟಿದ್ದೇವೆ. ತಾವು ಕೂಡ ಈ ವಿಚಾರದ ಬಗ್ಗೆ ಬಹಳ ಖಂಡಿಸಿದ್ದೀರಿ ಇದಕ್ಕಾಗಿ ನಾವು ಸಂತೋಷಪಡುತ್ತೇವೆ. ಯಾರನ್ನು ಬೆರಳು ಮಾಡಿ ತೋರಿಸತಕ್ಕಂಥ ವಿಚಾರವಲ್ಲ. ಎಲ್ಲರೂ ನಾಚಿಕೆಪಡತಕ್ಕಂಥ ವಿಚಾರ. ಇಂಥ ವಿಚಾರವನ್ನು ನಿಲುವಳಿ ಸೂಚನೆ ಮುಖಾಂತರ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟು ಬಿಟ್ಟರೆ ಕಾಲವನ್ನೂ ನಾವು ವ್ಯಯ ಮಾಡುವುದಿಲ್ಲ, ಜೊತೆಗೆ ಎಲ್ಲರಿಗೂ ಅವಕಾಶ ಸಿಗುವುದರಿಂದ ನಾವು ಕೂಡ ಇದರಲ್ಲಿ ಭಾಗವಹಿಸುತ್ತೇವೆ. ತಾವು ಸ್ವಲ್ಪ ದೊಡ್ಡ ಮನಸ್ಸು ಮಾಡಿ ತೋರಿಸ ಬೇಕು.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಒಪ್ಪಿಕೊಂಡು ನಿಲುವಳಿ

ಸೂಚನೆಯ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಆಗಬಹುದು.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಮುಖ್ಯಮಂತ್ರಿಗಳು ಈ ನಿಲುವಳಿ ಸೂಚನೆಯನ್ನು ಒಪ್ಪಿಕೊಂಡು ಚರ್ಚೆಗೆ ಅವಕಾಶ ಮಾಡಿ ಕೊಡಿ ಎಂದು ಹೇಳಿದ್ದಾರೆ, ತಾವು ದಯಮಾಡಿ ನಮಗೆ ಪರ್ಮಿಷನ್ ಕೊಡಬೇಕು.

Mr. Speaker:- Permission is granted ತಾವು ಮಾತನಾಡುವಾಗ ಸರ್ಕಾರದವರು ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಹೇಳಿದ್ದಾರೆ. ನ್ಯಾಯಾಂಗ ತನಿಖೆಗೆ ಧಕ್ಕೆ ಬರದ ಹಾಗೆ ಮಾತನಾಡಬೇಕು ಎಂದು ಸದಸ್ಯರೆಲ್ಲರಲ್ಲೂ ವಿನಂತಿಸುತ್ತೇನೆ.

ಶ್ರೀ ಕೆ.ಕೆ.ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೆ, ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದಾರೆಂದ ಬಳಿಕ ನಾವು ಈ ವಿಷಯವನ್ನು ಮೊಟುಕು ಮಾಡಿ ಮಾತನಾಡುವುದಕ್ಕೆ ಸಾಧ್ಯವೆ?... ಇದಕ್ಕೆ ತೊಂದರೆಯಾಗುತ್ತದೆ ಎಂದು ನೀವು ಹೇಳವುದಾದರೆ ನಾವು ಏಕೆ ನಿಲುವಳಿ ಸೂಚನೆಯನ್ನು ಇಲ್ಲಿ ತರಬೇಕಾಗಿತ್ತು? ಏಕೆ ಈ ವಿಷಯದ ಬಗ್ಗೆ ನಾವುಗಳು ಮಾತನಾಡಬೇಕಾಗಿತ್ತು?

ಅಧ್ಯಕ್ಷರು: ಇದಕ್ಕೆ ಟೈಮ್ ಫಿಕ್ಸ್ ಮಾಡಬೇಕಾಗುತ್ತದೆ. ನಿಯಮ 68ರ ಮೇರೆಗೆ ''ಭಾಷಣಗಳಿಗೆ ಕಾಲ ಮಿತಿ ಮತ್ತು ಚರ್ಚೆಯನ್ನು ಕ್ರಮಗೊಳಿಸುವುದು'' ಚರ್ಚೆ ನಡೆಯುತ್ತಿರುವಾಗ ಯಾವ ಭಾಷಣವಾಗಲಿ ಅಧ್ಯಕ್ಷರ ಅನುಮತಿ ಪಡೆದ ಸಂದರ್ಭದಲ್ಲಿ ಹೊರತು ಬೇರೆ ಸಂದರ್ಭಗಳ ಹದಿನೈದು ನಿಮಿಷಗಳ ಕಾಲಾವಧಿಗಿಂತ ಹೆಚ್ಚಾಗಿರಕೂಡದು'' ಅಂದರೆ ನಾವು ಇಷ್ಟು ಟೈಮ್ ಎಂದು ಫಿಕ್ಸ್ ಮಾಡಿಕೊಳ್ಳುವುದು ಒಳ್ಳೆಯದು.

ಶ್ರೀ ಎಸ್.ಎಂ.ಕೃಷ್ಣ : ಇದಕ್ಕೆ ಟೈಮ್ ಲಿಮಿಟ್ ಏನೂ ಬೇಕಾಗಿಲ್ಲ, ಎಷ್ಟು ಹೊತ್ತು ಬೇಕಾದರೂ ಮಾತನಾಡಲಿ ನಾವು ಸಿದ್ದರಿದ್ದೇವೆ.

ಶ್ರೀ ಜಗದೀಶ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ಒಂದು ಘಟನೆಯ ಬಗ್ಗೆ ಚಿಂತನೆ ನಡೆಯುತ್ತಿರುವಂಥ ಸಂದರ್ಭದಲ್ಲಿ ಈ ಒಂದು ಘಟನೆಯ ಹಿನ್ನೆಲೆಯನ್ನು ಈಗಾಗಲೇ ನಾನು ವಿವರಿಸಿದ್ದೇನೆ. ಇದಕ್ಕೆ ಯಾರು ಕಾರಣಿಕರ್ತರಾಗಿದ್ದಾರೆ? ಇದರ ಹಿನ್ನೆಲೆ ಏನು? ಮೂರು ವರ್ಷದ ಘಟನಾವಳಿಗಳು ಏನು? ಹಿಂದಿನ ದಿವಸ ನಡೆದ ಘಟನೆ ಏನು? ಇದರ ಜೊತೆಗೆ ಇವತ್ತಿನ ಪತ್ರಿಕೆಯಲ್ಲಿ ಎಸ್.ಪಿ.ಯವರು ಏನು ಹೇಳಿಕೆ ಕೊಟ್ಟಿದ್ದಾರೆ, ಪೊಲೀಸ್‌ರ ನಿರ್ಲಕ್ಷ ಮತ್ತು ಜಿಲ್ಲಾ ಆಡಳಿತದ ನಿಲಕ್ಷ್ಯ ಎಂದು

ಕಂಡುಬರುತ್ತದೆ. ಕರ್ನಾಟಕದಲ್ಲಿ ಈ ರೀತಿ ಪೈಶಾಚಿಕ ಕೃತ್ಯ ಬಹುಶಃ ಎಂದೂ ಆಗಿರಲಿಲ್ಲ. ಇಂಥ ಘಟನೆ ನಡೆದಾಗ ಸರ್ಕಾರ ಈ ಸಂದರ್ಭದಲ್ಲಿ ಯಾವ ರೀತಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗಿತ್ತೋ ಅಂಥ ಕ್ರಮ ಕೈಗೊಳ್ಳಲಿಲ್ಲ. ಅಷ್ಟೇ ಅಲ್ಲ ಇವತ್ತು ಏನು ದಲಿತರ ಮತ್ತು ಸವರ್ಣೀಯರ ನಡುವೆ ಏನು ಘರ್ಷಣೆ ನಡೆದಿದೆ ಇದು ನಿನ್ನೆ ಮತ್ತು ಮೊನ್ನೆದು ಅಲ್ಲ. ಈ ರೀತಿ ಘಟನೆಗಳು ಆಗಬಾರದು. ಈ ಘಟನೆಯಲ್ಲಿ ಏಳು ಜನ ದಲಿತರ ಹತ್ಯೆಯಾಗಿದ್ದು ಇದರ ಜೊತೆಗೆ ಸವರ್ಣೀಯರಾದ ಕೃಷ್ಣಾರೆಡ್ಡಿಯವರ ಕೊಲೆಯೂ ಸಹ ಆಗಿದೆ ಇದನ್ನು ಸಹ ನಾನು ಖಂಡಿಸುತ್ತೇನೆ. ಆದುದರಿಂದ, ಇದಕ್ಕೆ ಏನು ಪರಿಹಾರ ಎಂಬುದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಘಟನೆಯಾದ ತಕ್ಷಣ ನಾವು ರಾಜಕಾರಣಿಗಳು, ಮುಖ್ಯಮಂತ್ರಿಗಳು, ಗೃಹಮಂತ್ರಿಗಳು, ಸ್ಥಳಕ್ಕೆ ಭೇಟಿ ನೀಡಿ ಅವರ ದುಃಖದಲ್ಲಿ ಪಾಲ್ಗೊಳ್ಳುತ್ತೇವೆ. ಆದರೆ ದಲಿತರಿಗೆ ಏನಾದರೂ ಪರಿಹಾರ ಕೊಡುವುದಕ್ಕೆ ಸಾಧ್ಯವಿದೆಯೋ ಅಥವಾ ಅವರಿಗೆ ಸುರಕ್ಷಿತವಾಗಿ ವಾಸ ಮಾಡುವುದಕ್ಕೆ ಸಾಧ್ಯವಿದೆಯೇ?

11.40 ಎ.ಎಂ

ಇಲ್ಲಿರತಕ್ಕಂಥ ದಲಿತರಿಗೆ ಬೇರೆ ಕಡೆ ಸ್ಥಳಾಂತರ ಮಾಡುವುದಕ್ಕೆ ನಾವು ಅವಕಾಶ ಮಾಡಿಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಮೊನ್ನೆದಿವಸ ಹೇಳಿಕೆಯನ್ನು ಕೊಟ್ಟಿದ್ದೀರಿ. ಸುಮಾರು ಮೂರು ವರ್ಷಗಳಿಂದ ಈ ಗ್ರಾಮದಲ್ಲಿ ಸವರ್ಣೀಯರಿಗೆ ಮತ್ತು ದಲಿತರ ನಡುವೆ ಪರಸ್ಪರ ಸಂಘರ್ಷಗಳು ನಡೆಯುತ್ತಿವೆ. ಇಂಥ ಒಂದು ಸಂದರ್ಭದಲ್ಲಿ ಅಲ್ಲಿರತಕ್ಕಂಥ ಜಿಲ್ಲಾ ನಾಯಕರು, ರಾಜಕಾರಣಿಗಳು ಅಥವಾ ಜಿಲ್ಲಾಡಳಿತದವರು ಇದಕ್ಕೊಂದು ಖಾಯಂ ಪರಿಹಾರ ಹುಡುಕುವುದಕ್ಕೆ ಏಕೆ ಪ್ರಯತ್ನ ಮಾಡಲಿಲ್ಲ? ಇಬ್ಬರು ಜನಾಂಗದ ಮುಖಂಡರನ್ನು ಕರೆಸಿ ನಿಮ್ಮಲ್ಲಿ ಹಿಂದೆ ನಡೆದಂತಹ ವೈಷಮ್ಯವನ್ನು ಮುಂದೆ ಕಡಿಮೆ ಮಾಡಬೇಕೆಂದು ಹೇಳಿ, ಇದಕ್ಕೊಂದು ಪರಿಹಾರವನ್ನು ಕಂಡು ಹಿಡಿದು ಒಳ್ಳೆಯ ವಾತಾವರಣವನ್ನು ಏಕೆ ನಿರ್ಮಾಣ ಮಾಡಲಿಲ್ಲ? ಇವತ್ತಿನ ದಿವಸ ಯಾವುದೇ ಒಂದು ಗ್ರಾಮದಲ್ಲಿ ಸಂಘರ್ಷಗಳು ನಡೆದಂತಹ ಸಂದರ್ಭದಲ್ಲಿ ಮೊಟ್ಟಮೊದಲು ಊರು ಬಿಟ್ಟು ಹೋಗತಕ್ಕಂಥವರು ದಲಿತರು. ಏಕೆಂದರೆ, ಅವರಿಗೆ ಹೆದರಿಕೆ ಇರುತ್ತದೆ. ಇವತ್ತಿನದಿವಸ ಬಲಾಢ್ಯರು ತೊಂದರೆ ಕೊಡುತ್ತಾರೆಂಬ ಹೆದರಿಕೆ ಇರತಕ್ಕಂಥವರಿಗೆ ರಕ್ಷಣೆ ಕೊಡತಕ್ಕಂಥದು ಸರ್ಕಾರದ ಕರ್ತವ್ಯವಾಗಿದೆ. ಅಲ್ಲಿದ್ದಂಥ ಜಿಲ್ಲಾಡಳಿತ ಮತ್ತು ಜಿಲ್ಲೆಯ ಪೊಲೀಸ್‌ನವರು ಅವರಿಗೆ ರಕ್ಷಣೆ ಕೊಡುವುದರಲ್ಲಿ ವಿಫಲರಾಗಿದ್ದಾರೆ. ನಾವು ಪ್ರತ್ಯಕ್ಷವಾಗಿ ಘಟನೆ ನಡೆದಂಥ ಸ್ಥಳಕ್ಕೆ ಹೋದಂಥ ಸಮಯದಲ್ಲಿ ಅಲ್ಲಿದ್ದಂಥ ದಲಿತ ಮಹಿಳೆಯನ್ನು ಮಾತನಾಡಿಸಿದಾಗ ಆಕೆ ಏನು ಹೇಳಿದರೆಂದರೆ, ಬೆಳಿಗ್ಗೆಯಿಂದ ಪ್ರಮುಖರು ಮತ್ತು ಅನೇಕರು ಬಂದು ನಮಗೆ ಸಮಾಧಾನ ಮಾಡಿ ಹೋಗುತ್ತಾರಷ್ಟೆ. ಆದರೆ ನಾವು ಇಲ್ಲಿ ರಾತ್ರಿ ವೇಳೆ ವಾಸ

ಮಾಡುವುದಕ್ಕೆ ಸಾಧ್ಯವಿಲ್ಲದಂತ ಪರಸ್ಥಿತಿ ಉಂಟಾಗಿದೆ. ಆದ್ದರಿಂದ ರಾತ್ರಿ ಸಮಯದಲ್ಲಿ ನಾವು ಸುರಕ್ಷಿತವಾದ ಗ್ರಾಮಕ್ಕೆ ಹೋಗಬೇಕು ಮತ್ತು ಇವತ್ತಿನದಿವಸ ಗಂಡಸರೆಲ್ಲರೂ ಮನೆ ಬಿಟ್ಟು ಹೋಗಿದ್ದಾರೆಂದು ತನ್ನ ಅಳಲನ್ನು ನಮ್ಮೊಂದಿಗೆ ಹೇಳಿ ಕೊಂಡಳು. ಮೂರು ದಿವಸದಿಂದ ಇಡೀ ಹಳ್ಳಿ ಸ್ಮಶಾನ ಮೌನದಿಂದ ಕೂಡಿದೆ. ಹೆಂಗಸರು ಬೆಳಿಗ್ಗೆ ಬಂದು ಸ್ವಲ್ಪ ಸಮಯದವರೆಗೆ ಅಲ್ಲಿದ್ದು ಮತ್ತೆ ರಾತ್ರಿ ವೇಳೆಗೆ ಬೇರೆ ಕಡೆಗೆ ಹೋಗುತ್ತಿದ್ದಾರೆ. ಒಟ್ಟಿನಲ್ಲಿ ದಲಿತ ಮಹಿಳೆಯರು ಮತ್ತು ಗಂಡಸರು ಊರಿನಲ್ಲಿಲ್ಲ. ಇವತ್ತಿನದಿವಸ ಅಲ್ಲಿ ಸಜೀವ ದಹನವಾಗಿದ್ದು, ಉಳಿದಂತಹ ದಲಿತರಿಗೆ ಅಲ್ಲಿ ರಕ್ಷಣೆ ಇದೆಯೇ? ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಿದೆಯೇ? ಅಥವಾ ಅಲ್ಲಿರತಕ್ಕಂಥ ಜಿಲ್ಲಾಡಳಿತ ಅವರಿಗೆ ಧೈರ್ಯ ಕೊಟ್ಟಿದೆಯ? ಇವರ ರಕ್ಷಣೆಗೋಸ್ಕರ ಏನಾದರು ಕ್ರಮ ಕೈಗೊಳ್ಳಲಾಗಿದೆಯೆ? ಈ ಒಂದು ಘಟನೆಗೆ ಮೂಲಭೂತವಾದ ಕಾರಣಕರ್ತರು ಯಾರು? ಮೃತಪಟ್ಟ ಶ್ರೀರಾಮಪ್ಪ 10ನೇ ತಾರೀಖು ದೂರು ಕೊಟ್ಟಂಥ ಸಂದರ್ಭದ ನಂತರ ಜಿಲ್ಲಾಡಳಿತ, ಜಿಲ್ಲಾ ಎಸ್.ಪಿ.ಯವರು ಅಥವಾ ಅಲ್ಲಿನ ಪೊಲೀಸ್ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡಿದ್ದರೆ ಬಹುಶಃ ಈ ರೀತಿಯಾದ ಘಟನೆ ಆಗುತ್ತಿರಲಿಲ್ಲ. ಮುಂಜಾಗ್ರತ ಕ್ರಮ ತೆಗೆದುಕೊಳ್ಳದೇ ಅಲ್ಲಿನ ಅಧಿಕಾರಿಗಳು ಸುಮ್ಮನೆ ಕುಳಿತರು. 10ನೇ ತಾರೀಖು ಮತ್ತು 11ನೇ ತಾರೀಖು ಬೆಳಿಗ್ಗೆ ನಡೆದ ಸಣ್ಣ ಪುಟ್ಟ ಗಲಾಟೆ ಬಗ್ಗೆ ಪೊಲೀಸ್‌ನವರಿಗೆ ಮಾಹಿತಿ ಗೊತ್ತಿದ್ದು, ಮಧ್ಯಾಹ್ನದವರೆಗೆ ಪೊಲೀಸ್ ಶಸ್ತ್ರಪಡೆಯವರು ಅಲ್ಲಿದ್ದು, ಮಧ್ಯಾಹ್ನದ ನಂತರ ವಾಪಸ್ಸು ತೆಗೆದುಕೊಂಡಿದ್ದಾರೆ. ಅದೇ ದಿನ ಸಾಯಂಕಾಲ ಈ ಘಟನೆ ನಡೆದಿದೆ. ಇದೊಂದು ವ್ಯವಸ್ಥಿತವಾದ ಸಂಚು ಅಥವಾ ಹಲ್ಲೆ ಎಂದು ಹೇಳಬಹುದು. ಆದ್ದರಿಂದ, ಇದರ ಬಗ್ಗೆ ಕೂಲಂಕಷವಾಗಿ ತನಿಖೆ ಆಗಬೇಕು. ಮಾನ್ಯ ಮುಖ್ಯಮಂತ್ರಿ ಹಾಗೂ ಮಾನ್ಯ ಗೃಹ ಮಂತ್ರಿಗಳು ಬಹಳ ಅನುಭವಿ ರಾಜಕಾರಣಿಗಳು. ಆದರೆ, ಇವತ್ತು ರಾಜ್ಯದಲ್ಲಿ ಏನು ಘಟನೆಗಳು ನಡೆಯುತ್ತಿವೆ ಎಂಬುದರ ಬಗ್ಗೆ ಬಹುಶಃ ನಿಮಗೆ ಮಾಹಿತಿ ಬರುತ್ತಿದೆಯೇ ಎಂಬುದು ಅನುಮಾನವಾಗಿದೆ. ನಮ್ಮ ರಾಜ್ಯ ಸರ್ಕಾರದ ಇಂಟೆಲಿಜೆನ್ಸಿ ಅಥವಾ ಕೋಲಾರ ಜಿಲ್ಲಾ ಪೊಲೀಸ್‌ನವರು ಏನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಕಾರಣವೇನಾದರೂ ಹುಡುಕಿದ್ದಾರೋ ಏನೋ ಎಂಬುದರ ಬಗ್ಗೆ ನಾವು ಇವತ್ತು ವಿಚಾರ ಮಾಡಬೇಕಾಗಿದೆ. ಪಿ.ಎಸ್.ಐ., ಸರ್ಕಲ್ ಇನ್‌ಸ್ಪೆಕ್ಟರ್ ಹಾಗೂ ಡಿವೈಎಸ್‌ಪಿ ಮತ್ತು ಕೆಲವು ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಲಾಗಿದೆ ಎಂದು ಅಲ್ಲಿನ ಎಸ್‌ಪಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ, ಕೇವಲ ಕೆಳ ಹಂತದ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿದರೆ ಈ ಸಮಸ್ಯೆ ಮುಗಿದು ಹೋಗುತ್ತದೆಯೇ? ಹಾಗೆಯೆ, ಈ ಜಾಗಕ್ಕೆ ಬೇರೆ ಜಿಲ್ಲೆಯ ಅಧಿಕಾರಿಗಳನ್ನು ವರ್ಗಾವಣೆ ಮಾಡಿದರೆ ಅಥವಾ ಎಸ್.ಪಿ.ಯವರನ್ನು ವರ್ಗಾವಣೆ ಮಾಡಿದರೆ ನ್ಯಾಯ ಸಿಗುತ್ತದೆಯೆ? ಈ ಘಟನೆಗೆ ಜವಾಬ್ದಾರಿಯಾರಾಗುತ್ತಾರೆ? ಇದಕ್ಕೆ ಯಾರಾದರೂಬ್ಬರು ಜವಾಬ್ದಾರಿ

ತೆಗೆದುಕೊಳ್ಳಬೇಕಲ್ಲವೆ? ಇದೇ ರೀತಿ ಘಟನೆ ನಡೆದ ನಂತರ ವರ್ಗಾವಣೆ ಮಾಡುತ್ತಾ ಹೋದರೆ ಇದಕ್ಕೆ ಕೊನೆ ಇರುತ್ತದೆಯೆ? ಇಲ್ಲಿದ್ದಂಥ ಡಿ.ಸಿ. ಮತ್ತು ಕಂದಾಯ ಅಧಿಕಾರಿಗಳು ಹಾಗೂ ವಿಲೇಜ್ ಅಕೌಂಟೆಂಟ್ ಏನು ಮಾಡುತ್ತಿದ್ದರು? ಇವತ್ತಿನದಿವಸ ವಿಲೇಜ್ ಅಕೌಂಟೆಂಟ್ ಊರಿನಲ್ಲಿಯೆ ಇರುವುದಿಲ್ಲ, ಬಹುಶಃ ಘಟನೆಗಳು ನಡೆದಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಿಗೆ, ತಹಸೀಲ್ದಾರ್ ಅಥವಾ ಅಸಿಸ್ಟೆಂಟ್ ಕಮಿಷನರ್‌ರವರಿಗೆ ವಿಲೇಜ್ ಅಕೌಂಟೆಂಟ್ ಮಾಹಿತಿ ಕೊಟ್ಟಿದ್ದರೆ ಬಹುಶಃ ಈ ಘಟನೆ ಆಗುತ್ತಿರಲಿಲ್ಲ. ಇವತ್ತಿನದಿವಸ ಎಲ್ಲಾ ವ್ಯವಸ್ಥೆಗಳು ಮಲಗಿಕೊಂಡಿವೆ ಹಾಗೆಯೆ ಸರ್ಕಾರ ಇವತ್ತು ಮೇಲಿನ ಹಂತದಲ್ಲಿ ಮಲಗಿಕೊಂಡಿದೆ, ಇದೇ ರೀತಿ ಕೋಲಾರ ಜಿಲ್ಲಾ ಪೊಲೀಸ್ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಮಲಗಿಕೊಂಡಿದ್ದರಿಂದ ಇಂಥ ಒಂದು ಘಟನೆ ನಡೆದಿದೆ. ಇದಕ್ಕೊಂದು ಖಾಯಂ ರೂಪದ ಪರಿಹಾರವನ್ನು ನಾವು ಹುಡುಕಬೇಕಾಗಿದೆ. ಕೇವಲ ನಾವು ಸಮಾಧಾನದ ಮಾತುಗಳನ್ನು ಅಥವಾ ಅನುಕಂಪವನ್ನು ತೋರಿದರೆ ಏನು ಪ್ರಯೋಜನವಾಗುವುದಿಲ್ಲ. ಆದ್ದರಿಂದ, ಇದಕ್ಕೊಂದು ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಸರ್ಕಾರ ಚಿಂತನೆ ಮಾಡಿದೆಯೆ? ಈ ಒಂದು ಪೈಶಾಚಿಕ ಕೃತ್ಯಕ್ಕೆ ಕಾರಣರಾದಂಥ ಅಧಿಕಾರಿಗಳ ಮೇಲೆ ಏನಾದರು ಕ್ರಮ ತೆಗೆದುಕೊಳ್ಳಲಾಗಿದೆಯೆ? ಡಿ.ಸಿ., ಎಸ್.ಪಿ.ಯವರನ್ನು ನೀವೇನಾದರು ಅಮಾನತು ಮಾಡಿದ್ದೀರಾ? ಕೇವಲ ಬೇರೆ ಕಡೆಗೆ ಇವರನ್ನು ವರ್ಗಾವಣೆ ಮಾಡಿದರೆ ಎಲ್ಲವೂ ಮುಗಿದುಹೋಗುತ್ತದೆಯೆ? ಇವರಿಗೂ ಶಿಕ್ಷೆ ಎನ್ನುವಂಥದು ಆಗಬೇಕಲ್ಲವೆ? ಪೊಲೀಸ್‌ರಿಗೆ ಮೊದಲೇ ಮಾಹಿತಿ ಗೊತ್ತಿರುವುದು ಮತ್ತು ಸಜೀವ ದಹನ ಆಗುತ್ತಿರುವ ಸಂದರ್ಭದಲ್ಲಿ ಅಗ್ನಿಶಾಮಕ ದಳದವರು ಬೆಂಕಿ ಆರಿಸಲು ಬಂದಾಗ ಅವರಿಗೆ ಅವಕಾಶ ಕೊಡದೇ ಇರುವುದನ್ನು ಮೇಲ್ನೋಟಕ್ಕೆ ನೋಡಿದಾಗ ಇದೊಂದು ವ್ಯವಸ್ಥಿತವಾದ ಸಂಚು ನಡೆದಿದೆ ಎಂದು ಗೊತ್ತಾಗುತ್ತದೆ. ಪೊಲೀಸ್ ಇಲಾಖೆ ಕಣ್ಣು ಮುಚ್ಚಿಕೊಂಡು ಸುಮ್ಮನೆ ಕುಳಿತುಕೊಂಡಿದ್ದಾರೆ, ಯಾರು ಸಹ ಏನು ಕ್ರಮ ತೆಗೆದುಕೊಂಡಿಲ್ಲ. ಇವತ್ತಿನ ದಿವಸ ಪೊಲೀಸ್ ಅಧಿಕಾರಿಗಳಿಗೆ ಜವಾಬ್ದಾರಿ ಇದೆಯೋ ಅಥವಾ ಇಲ್ಲವೋ? ಅಥವಾ ಜವಾಬ್ದಾರಿಯ ಹೊಣೆಯನ್ನು ಅವರ ಮೇಲೆ ಹೊರಿಸಲಾಗಿದೆಯೋ ಅಥವ ಇಲ್ಲವೋ? ಕೇವಲ ವರ್ಗಾವಣೆ ಮಾಡುವುದರಿಂದ ಎಲ್ಲವೂ ಮುಗಿದುಹೋಗುತ್ತದೆಯೆ? ಈ ರೀತಿಯ ವ್ಯವಸ್ಥೆ ಇದ್ದರೆ ಇದಕ್ಕೆ ಖಂಡಿತ ಪರಿಹಾರ ಸಿಗುವುದಿಲ್ಲ. ಅಲ್ಲಿರತಕ್ಕಂಥ ರಾಜಕೀಯ ಪ್ರಭಾವವನ್ನು ತಡೆಹಿಡಿದು ಇವತ್ತಿನದಿವಸ ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದಕ್ಕೆ ಸರ್ಕಾರ ಅವಕಾಶ ಮಾಡಿ ಕೊಡುತ್ತದೆಯೆ? ಇವತ್ತಿನದಿವಸ ಕೋಲಾರ ಜಿಲ್ಲೆಗೆ ಡಿ.ಸಿ. ಅಥವಾ ಎಸ್.ಪಿ.ಯಾಗಲಿ ಹೋಗುವುದಿಲ್ಲವೆಂದು ಹೇಳುತ್ತಾರೆ. ಏಕೆಂದರೆ, ಪ್ರಾಮಾಣಿಕತನ ಹೊಂದಿದ ಅಧಿಕಾರಿಗಳನ್ನು ಎನ್‌ಕರೇಜ್ ಮಾಡದೇ ಇರುವುದರಿಂದ ಈ ರೀತಿಯಾಗುತ್ತಿದೆ.

ಇವತ್ತಿನದಿವಸ ಎಲ್ಲಿ ವಸೂಲಿ ಜಾಸ್ತಿ ಆಗುತ್ತಿದೆ ಅಂಥ ಜಾಗದಲ್ಲಿಯೇ ಉಳಿದುಕೊಳ್ಳುವುದಕ್ಕೆ ಭ್ರಷ್ಟಾಧಿಕಾರಿಗಳು ಪ್ರಯತ್ನ ಮಾಡುತ್ತಾರೆ. ಇವರುಗಳು ಇಂಥ ಸೂಕ್ಷ್ಮವಾದ ಮತ್ತು ರಿಸ್ಕ್ ಇರತಕ್ಕಂಥ ಪ್ರದೇಶಗಳಿಗೆ ಹೋಗುವುದಕ್ಕೆ ತಯಾರಿರುವುದಿಲ್ಲ ಅಥವಾ ಕಾನೂನು ಸುವ್ಯವಸ್ಥೆಯನ್ನು ಕಾಪಾಡತಕ್ಕಂಥ ಪ್ರದೇಶಗಳಿಗೂ ಹೋಗುವುದಕ್ಕೆ ಅವರು ತಯಾರಿರುವುದಿಲ್ಲ. ಹಾಗಾದರೆ ಇದಕ್ಕೆ ಸರ್ಕಾರ ಏನು ಕ್ರಮ ತಗೆದುಕೊಂಡಿದೆ? ಇದಕ್ಕೆ ಜವಾಬ್ದಾರಿ ಯಾರು ಎಂಬುದನ್ನು ಸರ್ಕಾರದವರನ್ನು ಕೇಳುವುದಕ್ಕೆ ಇಚ್ಚಿಪಡುತ್ತೇನೆ. ಈ ಒಂದು ಘಟನೆ ನಡೆದ ನಂತರ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಸಚಿವರು ಸ್ಥಳಕ್ಕೆ ಹೋದಂಥ ಸಂದರ್ಭದಲ್ಲಿ ಘಟನೆ ಬಗ್ಗೆ ತನಿಖೆ ಮಾಡಲು ನ್ಯಾಯಾಂಗ ತನಿಖೆಗೆ ಆದೇಶ ಮಾಡಿದ್ದೀರಿ. ಇದನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ಆದರೆ, ಇವತ್ತು ನ್ಯಾಯಾಂಗ ತನಿಖೆಯಿಂದ ಆಗಿರತಕ್ಕಂಥ ತನಿಖೆಗಳಿಗೆ ಇಲ್ಲಿಯವರಗೆ ನಾವು ಏನು ಪುರುಷಾರ್ಥ ಸಾಧನೆ ಮಾಡಿದ್ದೇವೆ? ಭಟ್ಕಳದಲ್ಲಿ ನಿರಂತರವಾಗಿ ಕೋಮು ಗಲಭೆ ನಡೆದಾಗ ಇದನ್ನು ತನಿಖೆ ಮಾಡಲು ನ್ಯಾಯಾಧೀಶರಾದಂಥ ಶ್ರೀ ಜಗನ್ನಾಥ್‌ಶೆಟ್ಟಿಯವರ ನೇತೃತ್ವದಲ್ಲಿ ನ್ಯಾಯಾಂಗ ತನಿಖಾ ಆಯೋಗ ಕೆಲಸ ಮಾಡಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆ, ಹಾಗೆಯೆ ಡಾ: ಚಿತ್ತರಂಜನ್ ಶಾಸಕರಾಗಿದ್ದಂಥ ಸಂದರ್ಭದಲ್ಲಿ ಅವರ ಕೊಲೆಯಾಯಿತು. ಇದನ್ನು ವಿಚಾರಣೆ ಮಾಡುವ ಸಲುವಾಗಿ ಜಸ್ಟಿಸ್ ರಾಮಚಂದ್ರಯ್ಯ ಅವರ ನೇತೃತ್ವದಲ್ಲಿ ಆಯೋಗ ನೇಮಿಸಲಾಯಿತು. ಇವರು ಒಂದು ವರ್ಷದವರೆಗೆ ತನಿಖೆ ಮಾಡಿ ಒಂದು ಸರಿಯಾದಂಥ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈಗ ಆ ವರದಿಗಳು ಎಲ್ಲಿವೆ ಎಂದು ಮಾನ್ಯ ಗೃಹ ಮಂತ್ರಿಗಳು ಹೇಳಬೇಕು. ಇವತ್ತಿನವರೆಗೆ ಈ ವರದಿಗಳು ನಮ್ಮ ಸಭೆಯ ಮುಂದೆ ಬಂದಿಲ್ಲ. ಆದ್ದರಿಂದ, ಇದು ಕಸದ ಬುಟ್ಟಿಯಲ್ಲಿದೆಯೋ ಅಥವಾ ಎಲ್ಲಿಯಾದರು ಹೋದವೋ? ಕಳೆದ ಸದನದಲ್ಲಿ ಇದನ್ನು ಮಂಡನೆ ಮಾಡಬೇಕೆಂದು ಬಹಳಷ್ಟು ಹೋರಾಟ ಮಾಡಿದರು ಸಹ ಮಂಡನೆ ಮಾಡಲಿಲ್ಲ. ಈ ವರದಿಯ ಆಧಾರದ ಮೇಲೆ ನಿಮ್ಮ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಹುಬ್ಬಳ್ಳಿಯಲ್ಲಿ ಗೋಲಿಬಾರ್ ಆಯಿತು, ಇದರ ತನಿಖೆಗೋಸ್ಕರ ನ್ಯಾಯಾಧೀಶರಾದ ಶ್ರೀ ರಾಜಶೇಖರಯ್ಯರವರ ನೇತೃತ್ವದಲ್ಲಿ ಆಯೋಗ ನೇಮಿಸಿ ನ್ಯಾಯಾಂಗ ತನಿಖೆಯನ್ನು ಒಂದು ವರ್ಷದವರೆಗೆ ನಡೆಸಿ ಅವರ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ವರದಿಯ ಪ್ರಕಾರ ಗೋಲಿಬಾರ್ ಮಾಡಿದ ತಪ್ಪಿತಸ್ಥ ಅಧಿಕಾರಿಗಳ ಮೇಲೆ ನೀವು ಇದುವರೆಗೂ ಏನಾದರು ಕ್ರಮ ತೆಗೆದುಕೊಂಡಿದ್ದೀರಾ? ಇಲ್ಲ ಇದುವರೆಗೆ ತಾವು ಏನನ್ನು ಮಾಡಿಲ್ಲ. ಆದ್ದರಿಂದ, ನ್ಯಾಯಾಧೀಶರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ಮಾಡಿಸಿ ವರದಿ ಕೊಟ್ಟರು. ಸರ್ಕಾರ ಏನು ಕ್ರಮ ತೆಗೆದುಕೊಳ್ಳದಿದ್ದರೆ ನ್ಯಾಯಾಂಗ ತನಿಖೆ ಮಾಡಿಸುವುದರಿಂದ ಏನು ಪ್ರಯೋಜನ ಇದೆ ಎಂದು ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ? ಇದಕ್ಕೆ ಸರ್ಕಾರ ಉತ್ತರ

ಕೊಡಬೇಕು. ಇವೊತ್ತು ಏನಾಗಿದೆ ಎಂದರೆ ನ್ಯಾಯಾಂಗ ತನಿಖೆ ಮಾಡುವುದರಿಂದ ಇವತ್ತು ಯಾವುದೊಂದು ವಿಷಯವನ್ನು ಮುಚ್ಚಿಟ್ಟು, ನ್ಯಾಯಾಂಗ ತನಿಖೆ ನಡೆಯುತ್ತಿರುವುದರಿಂದ ಇದರ ಬಗ್ಗೆ ಚರ್ಚೆ ಬೇಡವೆಂದು ಹೇಳುತ್ತಿದ್ದೀರಿ. ಏಕೆಂದರೆ ಇದರಿಂದ ನಾಳೆದಿವಸ ಯಾರಿಗೂ ಶಿಕ್ಷೆಯಾಗುವುದಿಲ್ಲ. ನ್ಯಾಯಾಂಗ ತನಿಖೆ ಮಾಡಿ ವರದಿ ಕೊಡುತ್ತಾರೆ, ಅದನ್ನು ತಾವು ಯಾವುದೋ ಒಂದು ಕಪಾಟನಲ್ಲಿ ಇಡುತ್ತೀರಿ ಅದು ಹೊರಗೆ ಬರುವುದಿಲ್ಲ, ಯಾರು ತಪ್ಪು ಮಾಡಿದಂಥ ಅಧಿಕಾರಿಗಳಿಗೆ ಶಿಕ್ಷೆಯನ್ನು ಕೊಡುವುದಿಲ್ಲ. ಈ ರೀತಿಯಾದ ಪರಿಸ್ಥಿತಿ ಇರುವಾಗ ನ್ಯಾಯಾಂಗ ತನಿಖೆ ಏಕೆ ಬೇಕು? ಇವತ್ತು ನಾವು ಪ್ರತಿಪಕ್ಷದ ಸ್ಥಾನದಲ್ಲಿ ಕುಳಿತುಕೊಂಡು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಇದೊಂದು ರಾಜಕೀಯ ಹಿನ್ನೆಲೆಯಲ್ಲಿ ನಡೆದಿರತಕ್ಕಂಥ ಘಟನೆ ಹಾಗೂ ಮೂರು ವರ್ಷಗಳಿಂದ ಸತತವಾಗಿ ಎರಡು ಕೋಮುಗಳ ನಡುವೆ ಸಂಘರ್ಷಗಳು ನಡೆದು ಈ ಘಟನೆ ಆಗಿದೆ. ಇದರ ಒಂದು ಪರಿಣಾಮವಾಗಿ ಇವತ್ತು ಪೈಶಾಚಿಕ ಕೃತ್ಯದಿಂದ ದಲಿತರ ಸಜೀವ ದಹನವಾಗಿದೆ. ಆದ್ದರಿಂದ, ಈ ಹಿನ್ನೆಲೆಯಲ್ಲಿ ಕೇವಲ ನ್ಯಾಯಾಂಗ ತನಿಖೆ ಮಾಡಿದರೆ ಎಳ್ಳಷ್ಟು ಸಾಲುವುದಿಲ್ಲ. ಅದಕ್ಕೆ ಈ ಘಟನೆಯನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕೆಂದು ನಾನು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ. ಸಿ.ಬಿ.ಐ. ತನಿಖೆಗೆ ಏಕೆ ಒಪ್ಪಿಸಬೇಕೆಂಬುದಕ್ಕೆ ಒಂದು ಕಾರಣವನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದೇನೆಂದರೆ, ನ್ಯಾಯಾಂಗ ತನಿಖೆಗೆ ಆಗುವಂತಹ ಅಂತರ ಮತ್ತು ಸಿ.ಬಿ.ಐ. ತನಿಖೆಗೆ ಆಗತಕ್ಕಂಥ ಅಂತರಕ್ಕೆ ಬಹಳ ವ್ಯತ್ಯಾಸ ಇದೆ. ಆದೇನೆಂದರೆ, ಇವತ್ತು ನ್ಯಾಯಾಂಗ ತನಿಖೆ ಮಾಡುವುದಕ್ಕೆ ಬೆಂಗಳೂರಿನಲ್ಲಿ ಒಂದು ಕಛೇರಿಯನ್ನು ಕೊಡುತ್ತೀರಿ, ಇಲ್ಲಿ ಸಾಕ್ಷಿದಾರರನ್ನು ಕರೆದು ಸಾಕ್ಷಿ ತೆಗೆದುಕೊಳ್ಳುತ್ತಾರೆ ಹಾಗೆಯೆ ಈ ವಿಷಯದ ಬಗ್ಗೆ ಯಾರಾದರೂ ಸಾಕ್ಷಿ ಹೇಳುವವರಿದ್ದರ ಇಲ್ಲಿಗೆ ಬಂದು ನಮ್ಮ ಮುಂದೆ ಸಾಕ್ಷಿ ಹೇಳಬಹುದೆಂದು ಅವರ ಪತ್ರಿಕೆಯಲ್ಲಿ ಪ್ರಕಟಣೆ ಮಾಡುತ್ತಾರೆ. ನೇರವಾಗಿ ಅವರ ಸ್ಪಾಟ್‌ಗೆ ಹೋಗುವುದಿಲ್ಲ. ಅವರು ಬೆಂಗಳೂರಿನ ಕಛೇರಿಯಲ್ಲಿ ಕುಳಿತುಕೊಂಡು ಎವಿಡೆನ್ಸ್‌ನ್ನು ತೆಗೆದುಕೊಳ್ಳುತ್ತಾರೆ. ಅದು ಯಾರು ಬರಬೇಕು ಅಥವಾ ಯಾರಾದರು ಅವರ ಸಂಬಂಧಿಕರ ಇಂಟರೆಸ್ಟ್ ಇದ್ದವರು ಬರಬೇಕು. ಯಾರೋ ಒಬ್ಬ ಸಾಕ್ಷಿದಾರ ಪ್ರತ್ಯಕ್ಷದರ್ಶಿ ನೋಡಿದವರು ಬಂದು ಅಲ್ಲಿ ಹೇಳುವುದಿಲ್ಲ. ಏಕೆಂದರೆ, ಅವನಿಗೆ ನೂರೆಂಟು ಒತ್ತಡಗಳು ಇದ್ದು, ಅದಕ್ಕಾಗಿ ಅವನು ಬಂದು ಸಾಕ್ಷಿಯನ್ನು ಹೇಳುವುದಿಲ್ಲ. ಇಲ್ಲಿ ಬಂದವರು ಯಾವ ರೀತಿಯಾಗಿ ಸಾಕ್ಷಿಯನ್ನು ಕೊಡುತ್ತಾರೆ, ಅದರ ಆಧಾರದ ಮೇಲೆ ನ್ಯಾಯಾಂಗ ಇಲಾಖೆಯವರು ಒಂದು ವರದಿಯನ್ನು ಕೊಡಬೇಕಾಗುತ್ತದೆ. ಬೆಂಗಳೂರಿನ ನ್ಯಾಯಾಂಗ ಇಲಾಖೆಯ ಕಛೇರಿಗೆ ಬಂದು ಸಾಕ್ಷಿಯನ್ನು ಕೊಡಬೇಕಾಗುತ್ತದೆ. ಆದರೆ ಸಿಬಿಐನವರು ಆ ಒಂದು ಸ್ಪಾಟ್‌ಗೆ ಹೋಗಿ ಅಲ್ಲಿ ಆಗಿರತಕ್ಕಂಥ ಘಟನಾವಳಿಗಳ ಹಿನ್ನೆಲೆಯಲ್ಲಿ ಅಭ್ಯಾಸವನ್ನು ಮಾಡಿ ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಅನುಕೂಲವಾಗುತ್ತದೆ ಅದಕ್ಕಾಗಿ ಇದರ ಹಿನ್ನೆಲೆ ಬಹಳ ಇದ್ದುದರಿಂದ ಇದು

ಕೇವಲ 11ನೇ ತಾರೀಖು ನಡೆದಂತಹ ಘಟನೆಗೆ ಮಾತ್ರವಲ್ಲ, ಇದು ಒಮ್ಮಿಂದ ಒಮ್ಮೆಲೆ ಆದಂತಹ ಘಟನೆಯಲ್ಲ. ಇದರ ಹಿನ್ನೆಲೆ ಬಹಳಷ್ಟು ಇದೆ, ಆದ್ದರಿಂದ ಇದರ ಬಗ್ಗೆ ಸಿಬಿಐಯಿಂದಲೇ ತನಿಖೆಯಾಗಬೇಕೆಂದು ನಾವು ಸರ್ಕಾರವನ್ನು ಒತ್ತಾಯ ಮಾಡುತ್ತೇವೆ. ಬಹುಶಃ ನನಗನಿಸುತ್ತದೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ಕಳಕಳಿ ಇದೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆ, ಮಾನ್ಯ ಖರ್ಗೆಯವರು ಸಹ ಹೇಳಿದ್ದಾರೆ. ಇವರು ತಕ್ಷಣ ಸಿಬಿಐ ತನಿಖೆಗೆ ಒಪ್ಪಿಗೆ ಕೊಡುತ್ತಾರೆಂದು ನನಗೆ ವಿಶ್ವಾಸವಿದೆ. ಅವರು ಸಿಬಿಐ ತನಿಖೆಯನ್ನು ಮಾಡಿಸುತ್ತಾರೆಂಬ ಭರವಸೆಯೊಂದಿಗೆ ನಾನು ಒತ್ತಾಯವನ್ನು ಮಾಡುತ್ತೇನೆ. ಮತ್ತು ಇಷ್ಟೆಲ್ಲಾ ಘಟನಾವಳಿಗಳ ನಂತರ ಕೇವಲ ಕೋಲಾರ ಜಿಲ್ಲೆಯಲ್ಲಿ ನಡೆದಂತಹ ಘಟನೆ ಅಷ್ಟೇ ಅಲ್ಲ, ಇಲ್ಲಿ ಬರ್ಬರ ಪೈಶಾಚಿಕವಾದಂತಹ ಹಾಗೂ ಅಮಾನುಷವಾದಂತಹ ಕೃತ್ಯವಾಯಿತು. ಅದಕ್ಕಾಗಿ ನೈತಿಕವಾದಂತಹ ಜವಾಬ್ದಾರಿಯನ್ನು ನಮ್ಮ ಗೃಹಮಂತ್ರಿಗಳು ತೆಗೆದುಕೊಳ್ಳಬೇಕಾಗುತ್ತದೆ. ಅದರ ಪರವಾಗಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಸಹ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಇದನ್ನು ಕೇವಲ ಗೃಹಮಂತ್ರಿಗಳ ಮೇಲೆ ಬಿಡುವುದಕ್ಕಾಗುವುದಿಲ್ಲ. ಗೃಹಮಂತ್ರಿಗಳಿದ್ದಾರೆ ಅವರು ನೋಡಿಕೊಳ್ಳುತ್ತಾರೆಂದು ಬಿಡುವುದಕ್ಕಾಗುವುದಿಲ್ಲ. ಆದರೆ ಇದರ ಜವಾಬ್ದಾರಿಯನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕಾಗುತ್ತದೆ. ಇಡೀ ನಾಡಿನ ಕಾನೂನು ಸುವ್ಯವಸ್ಥೆಯನ್ನು ಮಾಡವಂಥದ್ದನ್ನು ಅದನ್ನು ನೋಡಿಕೊಂಡು ಹೋಗುವಂತಹ ಮುಖ್ಯಮಂತ್ರಿಗಳು ಹಾಗೂ ಗೃಹಮಂತ್ರಿಗಳು ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ನೈತಿಕ ಹೊಣೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಬಹುಶಃ ನಾನು ಅಂದುಕೊಂಡಿದ್ದೆ, ಮಾನ್ಯ ಖರ್ಗೆಯವರು ಹಿರಿಯರು, ಮುತ್ಸದ್ದಿ ರಾಜಕಾರಣಿಗಳು, ಮಾನ್ಯ ಮುಖ್ಯಮಂತ್ರಿಗಳು ಕೂಡ ಮುತ್ಸದ್ಧಿ ರಾಜಕಾರಣಿಗಳಾಗಿದ್ದಾರೆ, ತಕ್ಷಣ ಇದರ ಬಗ್ಗೆ ನೈತಿಕ ಜವಾಬ್ದಾರಿಯನ್ನು ಹೊತ್ತು ರಾಜೀನಾಮೆಯನ್ನು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೆ: ಅದು ಆಗಲಿಲ್ಲ. ಒರಿಸ್ಸಾ ರಾಜ್ಯದಲ್ಲಿ ಕ್ರಿಶ್ಚಿಯನ್ ಧರ್ಮಪ್ರಚಾರಕನ ಮತ್ತು ಅವನ ಮಕ್ಕಳ ಸಜೀವದಹನವಾಯಿತು. ಆ ಸಂದರ್ಭದಲ್ಲಿ ಕಾಂಗ್ರೇಸ್ ಪಕ್ಷದ ಮುಖಂಡರು, ಅವರು ರಾಜ್ಯದ ಮುಖ್ಯಮಂತ್ರಿಗಳಿಗೆ ರಾಜೀನಾಮೆಯನ್ನು ಕೊಡಬೇಕೆಂದು ಹೇಳಿದರು. ಅಂದು ಅಲ್ಲಿ ಮುಖ್ಯ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟರು, ಆ ನಂತರ ಅಲ್ಲಿ ಮುಖ್ಯಮಂತ್ರಿಗಳ ಬದಲಾವಣೆಯಾಯಿತು. ಅದೇ ರೀತಿಯಲ್ಲಿ ನಮ್ಮ ಕಾಂಗ್ರೆಸ್ ಪಕ್ಷದ ಮುಖ್ಯ ಮಂತ್ರಿಗಳು ಹಾಗೂ ಗೃಹಮಂತ್ರಿಗಳು ಸ್ವತಃ ರಾಜೀನಾಮೆಯನ್ನು ಕೊಟ್ಟರೆ ಒಳ್ಳೆಯದು. ಕಾಂಗ್ರೇಸ್ ಪಕ್ಷದ ಹೈಕಮಾಂಡ್‌ನ ಮುಖಾಂತರ ಮುಖ್ಯಮಂತ್ರಿಗಳ ಗೃಹಮಂತ್ರಿಗಳ ಬದಲಾವಣೆಗೆ ಒತ್ತಾಯ ತರುವಂಥದ್ದು ಆಗಬಾರದು. ಅದಕ್ಕಾಗಿ ನಾನು ದಯವಿಟ್ಟು ಒತ್ತಾಯವನ್ನು ಮಾಡುತ್ತಿದ್ದೇನೆ, ಸರ್ಕಾರದಿಂದ ಈ ಘಟನೆಯ ಬಗ್ಗೆ ಸಿಬಿಐ ತನಿಖೆಯಾಗಬೇಕು,

ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹಮಂತ್ರಿಗಳು ತಕ್ಷಣ ರಾಜೀನಾಮೆಯನ್ನು ಕೊಡಬೇಕೆಂದು ನಾನು ಒತ್ತಾಯ ಮಾಡಿ, ಈ ಒಂದು ಸದನದಲ್ಲಿ ಈ ಘಟನಾವಳಿಯ ನಂತರ ಕೋಲಾರ ಜಿಲ್ಲೆಯ ಕಂಬಾಳಪಲ್ಲಿಯಲ್ಲಿ ಶಾಂತರೀತಿಯ ವಾತಾವರಣವನ್ನು ನಾವು ನಿರ್ಮಾಣ ಮಾಡಬೇಕಾಗಿದೆ. ಅಲ್ಲಿರುವಂತಹ ಜನತೆಗೆ ನಾವು ಕರೆಯನ್ನು ಕೊಡಬೇಕಾಗಿದೆ. ದಯವಿಟ್ಟು ಶಾಂತಿಯನ್ನು ಕಾಪಾಡಿಕೊಂಡು ಹೋಗಿ, ಇವತ್ತು ಸವರ್ಣೀಯರಾಗಿರಬಹುದು, ಅಥವಾ ದಲಿತರಾಗಿರಬಹುದು, ನೀವು ಪರಸ್ಪರ ಕುಳಿತುಕೊಂಡು ನಿಮ್ಮಲ್ಲಿರುವಂತಹ ಭಿನ್ನಮತವನ್ನು ಬಗೆಹರಿಸಿಕೊಳ್ಳಬೇಕು. ಇವತ್ತು ರಾಜಕಾರಣಿಗಳು ಬರುತ್ತಾರೆ, ಹೋಗುತ್ತಾರೆ ಹಾಗೂ ಅಧಿಕಾರಿಗಳು ಬರುತ್ತಾರೆ, ಹೋಗುತ್ತಾರೆ. ಆದರೆ ಅಲ್ಲಿ ಜೀವನ ನಡೆಸುವವರು ಆ ಗ್ರಾಮದ ಸವರ್ಣೀಯರು ಹಾಗೂ ದಲಿತರು ಅವರು ಪರಸ್ಪರ ಅಣ್ಣತಮ್ಮಂದಿರಿದ್ದಂತೆ. ಅವರು ಪರಸ್ಪರ ತಿಳುವಳಿಕೆಯಿಂದ ಹೋದರೆ ಅದರ ಬಗ್ಗೆ ಚರ್ಚೆ ಮಾಡುವಂತಹ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅದಕ್ಕಾಗಿ ಇವತ್ತು ದಲಿತರ ರಕ್ಷಣೆಯಾಗಬೇಕಾಗಿದೆ. ಅವರು ನಿಜವಾಗಿಯೂ ಇವತ್ತು ಈ ಒಂದು ರಾಜ್ಯದಲ್ಲಿ ಹಾಗೂ ಆ ಒಂದು ಜಿಲ್ಲೆಯಲ್ಲಿ ಸುರಕ್ಷಿತವಾಗಿ, ಶಾಂತರೀತಿಯಿಂದ ತಮ್ಮ ಜೀವನವನ್ನು ನಡೆಸಿಕೊಂಡು ಹೋಗಬೇಕಾಗಿದೆ. ಅದಕ್ಕಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ರಾಜ್ಯ ಸರ್ಕಾರ ಮನಸ್ಸು ಮಾಡಬೇಕು, ಅಲ್ಲಿ ಇದ್ದಂತಹ ಜಿಲ್ಲೆಯ ಆಡಳಿತ, ಜಿಲ್ಲೆಯ ರಾಜಕಾರಣಿಗಳಿಗೆ ದಯವಿಟ್ಟು ನಾನು ಅವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ದಯವಿಟ್ಟು ಎಲ್ಲರನ್ನು ಕುಳ್ಳಿರಿಸಿಕೊಂಡು ಮಾತುಕತೆಯನ್ನು ಮಾಡಿಸಿ ಒಂದು ಸೌಹಾರ್ದ ರೀತಿಯ ವಾತಾವರಣವನ್ನು ನಿರ್ಮಾಣಮಾಡಿ ಎಲ್ಲರಿಗೂ ಅಲ್ಲಿ ಸೌಹಾರ್ದ ರೀತಿಯಿಂದ ಬದುಕುವುದಕ್ಕೆ ಅವಕಾಶವನ್ನು ಮಾಡಿಕೊಟ್ಟು ಅಲ್ಲಿ ಪರಸ್ಪರ ಶಾಂತಿಯನ್ನು ಕಾಪಾಡುವ ಸಲುವಾಗಿ ಎಲ್ಲರೂ ಪ್ರಯತ್ನವನ್ನು ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಹೃತ್ಪೂರ್ವಕವಾದಂತಹ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಸನ್ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ಇವತ್ತು ನಮ್ಮ ಕರ್ನಾಟಕ ರಾಜ್ಯ, ರಾಷ್ಟ್ರದಲ್ಲಿ ನಾವೆಲ್ಲರೂ ತಲೆತಗ್ಗಿಸತಕ್ಕಂತಹ ಈ ಒಂದು ಘಟನೆ ನಡೆದಿರತಕ್ಕಂಥದ್ದು, ಮನುಷ್ಯತ್ವ ಇರತಕ್ಕಂತಹ ನಮ್ಮೆಲ್ಲರಿಗೂ ಸಹಿತ ನೋವನ್ನು ತಂದಿರತಕ್ಕಂತಹ ಘಟನೆಯು ಇದಾಗಿದೆ. ಇಂತಹ ಒಂದು ಪೈಶಾಚಿಕ ಕೃತ್ಯದ ಬಗ್ಗೆ ನಮ್ಮ ಸಮಾಜ ತಲುಪಿರತಕ್ಕಂಥದ್ದು ಅತ್ಯಂತ ಗಂಭೀರವಾಗಿರತಕ್ಕಂತಹ ವಿಚಾರವಾಗಿದೆ. ಇದನ್ನು ಅರಿತು ಮೊದಲನೆಯದಾಗಿ ಸಭಾನಾಯಕರು, ಘಟನೆ ನಡೆದ ತಕ್ಷಣವೇ ತಮ್ಮ ಕಾರ್ಯಕ್ರಮವನ್ನು ರದ್ದು ಮಾಡಿ ಆ ಸ್ಥಳಕ್ಕೆ ಹೋಗಿದ್ದಾರೆ. ಮಾನ್ಯ ಗೃಹಮಂತ್ರಿಗಳು ಕೂಡ ಅಲ್ಲಿಗೆ ಭೇಟಿಯನ್ನು ಕೊಟ್ಟಿದ್ದಾರೆ. ಉನ್ನತ ಪೊಲೀಸ್

ಅಧಿಕಾರಿಗಳು ಕೂಡ ಆ ಸ್ಥಳಕ್ಕೆ ಭೇಟಿಯನ್ನು ಕೊಟ್ಟಿದ್ದಾರೆ. ನಡೆದಿರತಕ್ಕಂತಹ ಘಟನಾವಳಿಗಳ ಮಹತ್ವವನ್ನು ಅರಿತು ಇದರ ಬಗ್ಗೆ ಎಷ್ಟು ಸಮಯ ಬೇಕಾದರೂ ಚರ್ಚೆ ನಡೆಯಲೆಂದು ಮಾನ್ಯ ಮುಖ್ಯಮಂತ್ರಿಗಳು ಸಲಹೆಯನ್ನು ಮಾಡಿದ್ದಾರೆ. ಅದರ ಪ್ರಕಾರವಾಗಿ ಈ ವಿರೋಧಪಕ್ಷದ ಕಡೆಗೆ ಕುಳಿತಿರತಕ್ಕಂತಹ ನಾವುಗಳು ನಿಲುವಳಿ ಸೂಚನೆಯನ್ನು ತಮಗೆ ಒಪ್ಪಿಸಿರುತ್ತೇವೆ. ಅದಕ್ಕೆ ಅನುಮತಿಯನ್ನು ಕೊಟ್ಟು, ಚರ್ಚೆಗೆ ಅವಕಾಶ ಮಾಡಿಕೊಟ್ಟರತಕ್ಕಂಥದ್ದು, ವಿಷಯದ ಗಂಭೀರತೆಯ ಅರಿವು ನಮ್ಮೆಲ್ಲರಿಗೆ ಇದೆ ಎನ್ನತಕ್ಕಂಥದ್ದು. ಈ ಮಧ್ಯೆದಲ್ಲಿ ಕೋಲಾರ ಜಿಲ್ಲೆ ಒಂದು ವಿಶೇಷವಾಗಿ ಸೂಕ್ಷ್ಮವಾದಂತಹ ಪ್ರದೇಶವಾಗಿದೆ. ಆ ಜಿಲ್ಲೆಯ ಒಂದು ರಾಜಕಾರಣದಲ್ಲಿ ಒಂದು ವಿಶೇಷವಾದ ಸ್ಥಾನಮಾನ ತಮ್ಮ ಮನೆತನಕ್ಕಿದೆ. ತಾವು ಸಹ ಅಲ್ಲಿಗೆ ಹೋಗಿ ಅಲ್ಲಿಯ ಸೂಕ್ಷ್ಮತೆಯನ್ನು ಅರ್ಥಮಾಡಿಕೊಂಡು ಪರಿಸ್ಥಿತಿಯನ್ನು ಖಂಡನೆ ಮಾಡಿ ಬಂದಿರುತ್ತೀರಿ. ಬಿಜೆಪಿ ವಿರೋಧಪಕ್ಷದ ನಾಯಕರು ಹಾಗೂ ಮುಖಂಡರು ಹೋಗಿ ಬಂದಿದ್ದಾರೆ. ನಮ್ಮ ಪಕ್ಷದ ಅಧ್ಯಕ್ಷರಾದ ಶ್ರೀಮಾನ್ ಬೈರೇಗೌಡರು ಹಾಗೂ ಬಿ.ಸೋಮಶೇಖರ್‌ರವರು ಹೋಗಿ ಬಂದಿದ್ದಾರೆ. ಸಮಾಜಕಲ್ಯಾಣ ಸಚಿವರು ಎರಡು ದಿನಗಳ ಕಾಲ ಅಲ್ಲಿಯೇ ಇದ್ದು ಅನೇಕ ಸೂಚನೆಯನ್ನು ಕೊಟ್ಟಿದ್ದನ್ನು ನಾನೂ ಕೂಡ ಕೇಳಿದ್ದೇನೆ. ಘಟನೆಯು ನಡೆದ ನಂತರ ಸರ್ಕಾರ ಕೆಲಸ ಮಾಡಿರತಕ್ಕಂಥದ್ದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅದರ ಬಗ್ಗೆ ನಮ್ಮದೇನು ತಕರಾರು ಇಲ್ಲ. ನ್ಯಾಯಾಂಗ ತನಿಖೆಯನ್ನು ತಾವು ಮಾಡಿಸುತ್ತೇವೆಂದು ಹೇಳಿದ್ದೀರಿ. ಅದನ್ನು ಸಹಿತ ನಾವು ಸ್ವಾಗತ ಮಾಡುತ್ತೇವೆ. ಇದರಲ್ಲಿ ತಮಗೆ ಕಳಕಳಿಯಿಲ್ಲ ಎನ್ನತಕ್ಕಂತಹ ಮಾತನ್ನು ನಾವು ಯಾರು ಸಹಿತ ಹೇಳುವುದಿಲ್ಲ. ಆದರೆ ಈ ಬರ್ಬರ ನರಮೇಧದ ಒಂದು ವಿಚಾರದಲ್ಲಿ, ಈ ರೀತಿ ಆಗಲಿಕ್ಕೆ ಕಾರಣವೇನು? ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಗೃಹಮಂತ್ರಿಗಳು ಹೋಗಿ ಬಂದ, ಅವತ್ತಿನ ರಾತ್ರಿ ಶ್ರೀಮಾನ್ ಚೌಡರೆಡ್ಡಿಯವರು ಅಲ್ಲಿಯೇ ಇದ್ದರು. ಅವರು ಆ ಕ್ಷೇತ್ರದ ಗೌರವಾನ್ವಿತ ಶಾಸಕರಾಗಿದ್ದಾರೆ. ಅವರ ಜೊತೆಯಲ್ಲಿ ನಾವು ಕೂಡ ಮಾತನಾಡಿದ್ದೇವೆ. ನನಗೆ ಹಾಗೂ ಭೈರೇಗೌಡರಿಗೆ ಮಧ್ಯಾಹ್ನ 3-30ಕ್ಕೆ ವಿಷಯ ತಿಳಿಯಿತು, ತಕ್ಷಣ ನಾವು ಸಾಯಂಕಾಲ 7 ಗಂಟೆಯೊಳಗಾಗಿ ಆ ಸ್ಥಳಕ್ಕೆ ಹೋದೆವು. ಪತ್ರಿಕೆಗಳಲ್ಲಿ ಪ್ರಚಾರ ತೆಗೆದುಕೊಳ್ಳಬೇಕು ಮತ್ತು ದೂರದರ್ಶನದಲ್ಲಿ ಮಿಂಚಬೇಕು ಎನ್ನುವ ದೃಷ್ಟಿಯಿಂದ ನಾವು ಹೋಗಲಿಲ್ಲ. ಇದರ ಬಗ್ಗೆ ನಮ್ಮ ಕರುಳು ಕಿತ್ತು ಬರುತ್ತಿದೆ, ಪ್ರತಿಯೊಬ್ಬರ ಹೃದಯ ಕೂಡ ಮಿಡಿಯುತ್ತಿದೆ. ಅಲ್ಲಿ ಹೋಗಿ ನೋಡಿದಾಗ ಆ 7 ಜನರ ಕರಕಲು ದೇಹದ ವಾಸನೆ ಮತ್ತು ಸ್ಮಶಾನಮೌನ ನೋಡಿ ಯಾರು ಕೂಡ ಮನೆಯಿಂದ ಹೊರಗೆ ಬರುವುದಕ್ಕೆ ತಯಾರಿಲ್ಲ. ಆ ಮನೆಯ ಮುಂದೆ ಒಬ್ಬ 80 ವರ್ಷದ ವಯೋವೃದ್ಧ ತನ್ನ ಹೆಂಡತಿಯ ಜೊತೆ ಕುಳಿತುಕೊಂಡಿದ್ದ, ನಾನು ಹಾಗೂ ಭೈರೇಗೌಡರು ಹೋಗಿ ಏನು ನಡೆಯಿತು ಎಂದು ಕೇಳಿದರೆ, ಅವನು ಹೇಳುವುದಕ್ಕೆ ತಯಾರಿಲ್ಲ. ಒಳಗಡೆ ನಾನು

ಬೀಗಹಾಕಿಕೊಂಡಿದ್ದೆ, ಹೊರಗಡೆ ಏನು ನಡೆಯಿತು ಎಂಬುದು ನನಗೆ ಗೊತ್ತಿಲ್ಲವೆಂದು ಹೇಳಿದನು. ಊರಿನಲ್ಲಿ ಒಂದು ನರಪಿಳ್ಳೆಯು ಸಹ ಇರಲಿಲ್ಲ. ನಾಯಿಗಳು ಮಾತ್ರ ಬೊಗಳುತ್ತಿದ್ದವು, ಅಲ್ಲಿ ಒಂದು ರುದ್ರಮಶಾಣಮೌನ ಆವರಿಸಿದ್ದನ್ನು ನಾವು ನೋಡಿದೆವು. ಉನ್ನತ ಪೋಲೀಸ್ ಅಧಿಕಾರಿಗಳು ಸಹ ಆ ಸ್ಥಳದಲ್ಲಿ ಇದ್ದರು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಮಂತ್ರಿಗಳು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ಕೊಟ್ಟಂತಹ ಎಲ್ಲಾ ವಿಚಾರಗಳನ್ನು ನಮಗೂ ಸಹಿತ ಅವರು ಸೌಜನ್ಯತೆಯಿಂದ ತಿಳಿಸಿದರು. ಮಾನ್ಯ ಅಧ್ಯಕ್ಷರೆ, ನನಗೆ ಒಂದು ಆಶ್ಚರ್ಯ ಕಾದಿತ್ತು, ಉನ್ನತ ಪೊಲೀಸ್ ಅಧಿಕಾರಿಗಳು ಕೇಳುತ್ತಾರೆ ಅಲ್ಲಿದ್ದಂತಹ ಒಬ್ಬ ಅಧಿಕಾರಿಯ, ಕೆಎಸ್‌ಆರ್‌ಪಿಯ ವಾಹನವನ್ನು ನೀವು ಏಕೆ ವಾಪಸ್ಸು ಕರೆಸಿಕೊಂಡಿರಿ ಎಂದು ಕೇಳುತ್ತಾರೆ. ಕೆಎಸ್‌ಆರ್‌ಪಿಯು ವಾಹನವನ್ನು 10ನೇ ತಾರೀಖು ಬೆಳಿಗ್ಗೆ ಏಕೆ ವಾಪಸ್ಸು ಕರೆಸಿಕೊಂಡಿದ್ದೀರಿ ಎಂದು ಅಲ್ಲಿರುವಂತಹ ಒಬ್ಬ ಉನ್ನತ ಅಧಿಕಾರಿಯು ಸರ್ಕಲ್ ಇನ್ಸ್‌ಪೆಕ್ಟರ್‌ನ್ನು ಏಕೆ ಕರೆಸಿಕೊಂಡಿದ್ದೀರಿ ಎಂದು ನಮ್ಮ ಎದುರಿನಲ್ಲೇ ಕೇಳಿದರು. ಘಟನೆಯು ನಡೆದು 24 ಘಂಟೆಯಾಗಿದೆ, ಉನ್ನತ ಅಧಿಕಾರಿಗಳಿಗೂ ಸಹಿತ ಇದನ್ನು ಏಕೆ ವಾಪಸ್ಸು ಕರೆಸಿಕೊಂಡರು ಎನ್ನುವುದು ಅವರಿಗೆ ಗೊತ್ತಿಲ್ಲ. ಎಲ್ಲಿ ಸರ್ಕಾರದ ವೈಫಲ್ಯವಾಗಿದೆ, ಎಲ್ಲಿ ತಪ್ಪಾಗಿದೆ ಎನ್ನತಕ್ಕಂಥದ್ದು ತಿಳಿಯಬೇಕಾಗಿದೆ, ಇವತ್ತು ಸತ್ತಿರತಕ್ಕಂತಹ ರಾಮಪ್ಪ, ಅಂಜನಪ್ಪ, ಅವನ ತಾಯಿ ರಾಮಕ್ಕ, ಸುಬ್ಬಮ್ಮ ಪಾಪಮ್ಮ, ನರಸಿಂಹ ಮತ್ತು ಪಾಪಣ್ಣ ಇವರು ಸಾವನ್ನು ಅಪ್ಪಿದ್ದು ಅವರನ್ನು ಮತ್ತೆ ಬದುಕಿಸುವುದಕ್ಕೆ ನಮಗೆ ಸಾಧ್ಯವಿಲ್ಲ. ಅದರ ಜೊತೆಯಲ್ಲಿಯೇ ಕೃಷ್ಣಾರೆಡ್ಡಿಯ ಕೊಲೆಯು ಸಹ ಆಗಿದೆ. ಅದನ್ನು ಸಹ ನಾನು ಖಂಡಿಸುತ್ತೇನೆ. ಕೃಷ್ಣಾರೆಡ್ಡಿಯ ಕೊಲೆಯ ಜೊತೆಯಲ್ಲಿಯೆ ಆಗಿರತಕ್ಕಂತಹ ಈ ಬರ್ಬರ ಕೃತ್ಯವನ್ನು ಅದು ನಮ್ಮ ಸಮಾಜದಲ್ಲಿ ಎಲ್ಲ ಕಡೆಗಳಲ್ಲಿಯೂ ಇರತಕ್ಕಂಥದ್ದು ಎನ್ನುವುದನ್ನು ಇಡೀ ಈ ಸದನ ಬಹಳ ಗಂಭೀರವಾಗಿ ಕುಳಿತು ಏಕೆ ಈ ಸ್ಥಿತಿಗೆ ಬಂದಿದೆ ಎನ್ನತಕ್ಕಂಥದ್ದರ ಬಗ್ಗೆ ನಾವು ವಿಚಾರಮಾಡಬೇಕಾಗಿದೆ. ನಾವು ಬಹಳ ದೊಡ್ಡ ಮಾತುಗಳನ್ನು ಹೇಳುತ್ತೇವೆ. ಈ ಪೈಶಾಚಿಕತೆಯ ಪರಾಕಾಷ್ಠೆಯನ್ನು ಮುಟ್ಟಿರತಕ್ಕಂತಹ ಈ ನರಮೇಧವನ್ನು ಖಂಡಿಸುವುದಕ್ಕೆ ಶಬ್ದಗಳೇ ಇಲ್ಲದಿರತಕ್ಕಂತಹ ಸಂದರ್ಭದಲ್ಲಿ ಹಿಂದೂಸ್ಥಾನದ ಎಲ್ಲಾ ಪತ್ರಿಕೆಗಳು ಸಹಿತ ತಮ್ಮ ಸಂಪಾದಕೀಯದಲ್ಲಿ ಬರೆದಿದ್ದಾರೆ. ಬಿಹಾರದ ಮಾದರಿಯಲ್ಲಿ ಕರ್ನಾಟಕ ರಾಜ್ಯವು ಹೋಗುತ್ತಿದೆ, ಹಾಗೆ ಹೋಗಬಾರದು ಎನ್ನುವಂಥದ್ದು ಎಲ್ಲರ ಬಯಕೆಯಾಗಿದೆ. ಕಾರಣ ಕರ್ನಾಟಕವೊಂದು ಸಂಮೃದ್ಧಿಯಾಗಿರತಕ್ಕಂತಹ ಒಂದು ನಾಡಾಗಿದೆ. ಕರ್ನಾಟಕ ರಾಜ್ಯವು ಹಣಕಾಸಿನ ದೃಷ್ಟಿಯಿಂದಾಗಿ ಸಂಪತ್ತಿನ ದೃಷ್ಟಿಯಿಂದಾಗಿ, ಮಾನವೀಯ ಮೌಲ್ಯಗಳನ್ನು ನಾವು ಎತ್ತಿ ಹಿಡಿಯುವ ದೃಷ್ಟಿಯಿಂದಾಗಿ ಭವ್ಯವಾದ ಪರಂಪರೆಯಿರುವ ಸಂಸ್ಕೃತಿ ಇರತಕ್ಕಂತಹ ಈ ನಾಡಿನಿಲ್ಲ ಇಷು ಆಗಬಾರದು ಎನ್ನತಕ್ಕಂಥದ್ದು ನಮ್ಮೆಲ್ಲರ ಆಶಯವಾಗಿದೆ. ಆದರೆ ಈ

ಮಾನವೀಯ ಮೌಲ್ಯಗಳಿಗೆ ಸವಾಲನ್ನು ತರತಕ್ಕಂಥ ಈ ಹರಿಜನರ ಒಂದು ನರಮೇಧ ಏನು ಇದೆ, ಇದರ ಬಗ್ಗೆ ಸ್ವಲ್ಪ ನಾವು ಯೋಚನೆ ಮಾಡೋಣ. ಇವತ್ತು ಎಲ್ಲಾ ಜಾತಿಗಳಲ್ಲಿಯೂ ಸಹಿತ ಶಕ್ತಿ ಇದೆ, ಇದನ್ನು ನಾವು ಅರ್ಥಮಾಡಿಕೊಳ್ಳಬೇಕು. ಇದು ಬುದ್ಧ ಹುಟ್ಟಿದಂತಹ ನಾಡು, ಬುದ್ಧ ಯಾವ ಒಂದು ಸಮಾನತೆಯನ್ನು ಹೇಳಿ ಬಿಟ್ಟು ಹೋದ ಅದಕ್ಕೋಸ್ಕರ ತ್ಯಾಗ, ಬಲಿದಾನವನ್ನು ಮಾಡಿದ, ಕರ್ನಾಟಕ ಯಾವ ಬಸವಣ್ಣನ ನಾಡು ಹಾಗೂ ಡಾ: ಅಂಬೇಡ್ಕರ್‌ರ ವಿಚಾರವನ್ನು ಎತ್ತಿಹಿಡಿಯಬೇಕೆಂದು ಹೇಳುತ್ತೇವೆ, ಈ ಎಲ್ಲಾ ವಿಚಾರಗಳಿಗೂ ಸಹಿತ ತಿಲಾಂಜಲಿಯನ್ನು ಇಟ್ಟಿರತಕ್ಕಂತಹ ಈ ಒಂದು ಸಂದರ್ಭಕ್ಕೆ ನಾವು ತಲುಪಿದ್ದೇವೆ. ಮಾನ್ಯ ಅಧ್ಯಕ್ಷರೆ, ಇದಕ್ಕೆ ನಾವೆಲ್ಲಾ ಕಾರಣಕರ್ತರಾಗಿದ್ದೇವೆ, ಸಮಾಜದ ಒಳಗಡೆ ಇವತ್ತು ನಾವು ಓಟಿನ ಬೇಟೆಯನ್ನು ಬಿಡುವುದಕ್ಕೆ ಹೊರಟ್ಟಿದ್ದೇವೆ. ಯಾರು ತುಳಿತಕ್ಕೆ ಒಳಗಾಗಿದ್ದಾರೆ, ಯಾರು ಅಸ್ಪೃಶ್ಯರಿದ್ದಾರೆ, ಆ ಅಸ್ಪೃಶ್ಯರನ್ನು ಒಳಗಡೆ ತೆಗೆದುಕೊಳ್ಳುವುದಕ್ಕೆ ನಮ್ಮ ಸಮಾಜ ಒಪ್ಪುತ್ತಿಲ್ಲ. ಇದು ವಾಸ್ತವಾಂಶವಾಗಿದೆ, ಇದನ್ನು ಅರಿತು ನಾವು ಮಾತನಾಡಬೇಕಾಗುತ್ತದೆ. ನಾನು ಸಹಿತ ಸಮಾಜಕಲ್ಯಾಣ ಮಂತ್ರಿಯಾಗಿ, ಕೆಲಸಮಾಡಿದ್ದೇನೆ, ಗೃಹಮಂತ್ರಿಯಾಗಿ ಕೆಲಸಮಾಡಿದ್ದೇನೆ, ನಾನು 10- 12 ವರ್ಷ ಮಂತ್ರಿಯಾಗಿ ಕೆಲಸವನ್ನು ಮಾಡಿರಬಹುದು. ಆದರೆ ಇವತ್ತು ನಮ್ಮ ಸಮಾಜದಲ್ಲಿರತಕ್ಕಂತಹ ವಾಸ್ತವಾಂಶವನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಮಾನ್ಯ ಖರ್ಗೆಯವರೆ, ತಮ್ಮ ನೋವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ, ಆದರೆ ತಾವು ನಮ್ಮ ಸ್ಥಾನದಲ್ಲಿ ಕುಳಿತುಕೊಂಡಿದ್ದಾಗ ಏನೇನು ಹೇಳಿದ್ದೀರಿ ಎನ್ನುವುದಕ್ಕೆ ಇಲ್ಲಿಯ ನಡವಳಿಕೆಯ ಪುಟಗಳನ್ನು ನಾವು ತೆಗೆದುನೋಡ ಬಹುದು. ಮಾನ್ಯ ಕಾಗೋಡು ತಿಮ್ಮಪ್ಪನವರು ನೀವು ದೊಡ್ಡ ಹೋರಾಟಗಾರರು, ನಿಮ್ಮ ಬಗ್ಗೆ ನನಗೆ ಬಹಳ ಅಭಿಮಾನಿವಿದೆ, ಆದರೆ ಆಗಿರತಕ್ಕಂಥದ್ದು ಏನು? ನಾವು ತಲೆ ತಗ್ಗಿಸುವುದಕ್ಕಿಂತ ಹೆಚ್ಚಾಗಿ ಆಡಳಿತ ನಡೆಸತಕ್ಕಂತಹ ನಿಮ್ಮ ಆತ್ಮಕ್ಕೆ ಏನು ಹೇಳುತ್ತಿದೆ ಎನ್ನುವ ವಿಚಾರದ ಬಗ್ಗೆ ತಾವು ಇವತ್ತು ಯೋಚನೆ ಮಾಡಬೇಕಾಗಿದೆ. ಸಮಾಜವನ್ನು ನಾವು ಒಡೆದಿದ್ದೇವೆ, ಓಟಿಗೋಸ್ಕರ ನಾವು ಎಲ್ಲರನ್ನು ಎತ್ತಿಕಟ್ಟತಕ್ಕಂತಹ ಕೆಲಸವನ್ನು ಮಾಡುತ್ತೇವೆ. ಆರು ತಿಂಗಳುಗಳ ಹಿಂದೆ ಪೊಲೀಸ್ ಇಲಾಖೆಯ ಮಂತ್ರಿಯಾಗಿರತಕ್ಕಂತಹ ನಾನು ಇವತ್ತು ಈ ಕಡೆ ಬಂದಿದ್ದೇನೆಂದು ಹೇಳಿ, ಪೊಲೀಸ್ ಇಲಾಖೆಯ ಮೇಲೆ ಎಲ್ಲಾ ಜವಾಬ್ದಾರಿಯನ್ನು ಹೊರಿಸಿ, ಪೊಲೀಸ್‌ನವರದು ಸರಿ, ಪೋಲೀಸ್‌ರು ಎಪ್ಪು ಎಂದು ತೀರ್ಮಾನ ಕೊಡುವುದಕ್ಕೆ ನಾನು ತಯಾರಾಗಿಲ್ಲ. ಇದಕ್ಕೆ ಮೂಲಭೂತವಾಗಿರತಕ್ಕಂತಹ ಕಾರಣವೇನು? ಇದರ ಹಿಂದೆ ಇರತಕ್ಕಂತಹ ಶಕ್ತಿಗಳು ಯಾವುವು? ಅಧಿಕಾರಕ್ಕೋಸ್ಕರ ಹಾಗೂ ಹಣಕ್ಕೋಸ್ಕರ ಬಡವರನ್ನು ಶೋಷಣೆ ಮಾಡತಕ್ಕಂತಹ ಜನಗಳು ನಾವು, ಇವತ್ತು ಪ್ರತಿಯೊಬ್ಬರು ಸಹಿತ ಆತ್ಮ ವಿಮರ್ಶೆಯನ್ನು ಮಾಡಿಕೊಳ್ಳುವ ಕಾಲ ಬಂದಿದೆ. ಕೋಲಾರ ಜಿಲ್ಲೆಯ ಕಂಬಾಲಪಲ್ಲಿಯಲ್ಲಿ

ನಡೆದಿರತಕ್ಕಂತಹ ಘಟನೆಗಳು ಈ ಒಂದು ಸಮಾಜದಲ್ಲಿ ಪರಾಕಾಷ್ಠತೆಯ ಮಟ್ಟವನ್ನು ಮುಟ್ಟಿರತಕ್ಕಂಥದ್ದನ್ನು ಇವತ್ತು ಆನವು ನೋಡುತ್ತಿದ್ದೇವೆ. ಇಂತಹ ಘಟನೆಗಳು ಮತ್ತೇ ಆಗತಕ್ಕಂತಹ ಸಂಭವಗಳು ಎಲ್ಲ ಕಡೆ ಇವೆ. ಇದನ್ನು ತಪ್ಪಿಸಲಿಕ್ಕೆ ಏನು ಮಾಡಬೇಕೆನ್ನುವುದರ ಬಗ್ಗೆ ನಾವು ವಿಚಾರ ಮಾಡಬೇಕು. ಇವತ್ತು ದಕ್ಷಿಣ ಭಾರತದಲ್ಲಿ ಮೊಲನೆಯಬಾರಿಗೆ ಈ ಕೃತ್ಯ ಆಗಿರತಕ್ಕಂಥದ್ದು, ಇವತ್ತು ಬಹಳ ಜನ ದಲಿತ ನಾಯಕರು ಆಡಳಿತ ಪಕ್ಷದಲ್ಲಿದ್ದಾರೆ. ನಿಮ್ಮ ರಾಜಕೀಯ ಸ್ಥಾನಮಾನಗಳಿಗೆ ಇವತ್ತು ಭದ್ರತೆ ಇದೆಯೇ ಎನ್ನುವ ಬಗ್ಗೆ ಯೋಚನೆ ಮಾಡಿ, ಅದರಲ್ಲಿಯೂ ವಿಶೇಷವಾಗಿ ಕಾಂಗ್ರೆಸ್ ಪಕ್ಷದ ಮುಖಂಡರುಗಳು ನಿಮ್ಮ ಒಂದು ಬೆಂಬಲ ಏನಿದೆ ನಿಮ್ಮ ಯಾವ ಒಂದು ಅಭಿಮಾನದ ಬಗ್ಗೆ ಜನ ಓಟು ಹಾಕಿ ಕಳುಹಿಸಿದ್ದಾರೆ. ನಾವು ತಪ್ಪು ಮಾಡಿದ್ದೇವೆ, ಜಗಳವನ್ನು ಆಡಿದ್ದೇವೆ ಇವತ್ತು ಜನರು ನಿಮಗೆ ಯಾವ ಅಭಿಮಾನದಿಂದ ಜನರು ಓಟನ್ನು ಕೊಟ್ಟು ಕಳುಹಿಸಿದ್ದಾರೆ, ಯಾವ ವರ್ಗದ ಜನರು ನಿಮಗೆ ಓಟನ್ನು ಹಾಕಿದ್ದಾರೆ, ಯಾರು ನಿಮ್ಮ ಕೈಗೆ ಅಧಿಕಾರವನ್ನು ಕೊಟ್ಟಿದ್ದಾರೆ ಅಂಥವರನ್ನು ರಕ್ಷಣೆ ಮಾಡುವುದಕ್ಕೆ ನಿಮ್ಮ ಕೈಯಿಂದ ಆಗಿದೆಯೇ? ದಯವಿಟ್ಟು ಇದರ ಬಗ್ಗೆ ತಾವು ವಿಚಾರ ಮಾಡಿ ಡಿಎಸ್‌ಎಸ್ ಕಾರ್ಯಕರ್ತನ ಕೊಲೆಯಾಗುತ್ತದೆ, ಮಾನ್ಯ ಅಧ್ಯಕ್ಷರೆ, ನನಗೆ ಅರ್ಥವಾಗುತ್ತಿಲ್ಲ, ಇದಕ್ಕೆ ಕಾರಣವಿದೆ. ಇದರಲ್ಲಿ ರಾಜಕೀಯ ಮುಖಂಡತ್ವದ ಜವಾಬ್ದಾರಿ ಇದೆ, ನಿಮ್ಮಲ್ಲಿರುವಂತಹ ಹಿಂದುಳಿದ ವರ್ಗದ ನಾಯಕರುಗಳಿಗೆ ನಿಮ್ಮ ಪಕ್ಷದಲ್ಲಿರತಕ್ಕಂತಹ ದಲಿತನಾಯಕರುಗಳಿಗೆ ನಿಮ್ಮ ಸ್ಥಾನಮಾನಗಳ ಬಗ್ಗೆ ಇವತ್ತು ಭದ್ರತೆ ಇಲ್ಲ. ಇದು ಬಹಳ ಮುಖ್ಯವಾಗಿರತಕ್ಕಂತಹ ದುರ್ದೈವಾದಂಥ ವಿಚಾರ. ಮತ್ತೊಂದು ವಿಚಾರದ ಬಗ್ಗೆ ನನಗೆ ಆಶ್ಚರ್ಯವಾಗುತ್ತದೆ, ತಮ್ಮ ಜೊತೆಯಲ್ಲಿ ನಾವು ಪ್ರಸ್ತಾಪವನ್ನು ಮಾಡಿದ್ದೇವೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬಂದಾಗ ಈ ರೀತಿಯ ಘಟನಾವಳಿಗಳು ಜಾಸ್ತಿಯಾಗುತ್ತಿದೆ. ದಯವಿಟ್ಟು ತಾವು ಯಾರು ತಪ್ಪು ತಿಳಿದು ಕೊಳ್ಳಬೇಡಿ. ನಡೆದಿರತಕ್ಕಂತಹ ಘಟನಾವಳಿಗಳ ಬಗ್ಗೆ ಮಾತ್ರ ನಾನು ಹೇಳಲಿಕ್ಕೆ ಬಯಸುತ್ತೇನೆ. 1989ರಲ್ಲಿ ಶ್ರೀಮಾನ್ ವೀರೇಂದ್ರಪಾಟೀಲರು ಮುಖ್ಯ ಮಂತ್ರಿಗಳಾದರು, ಇದಕ್ಕಿಂತಲೂ ಹೆಚ್ಚಾಗಿ ಅಲ್ಪಸಂಖ್ಯಾತರು, ದಲಿತರು ನಿಮಗೆ ಬೆಂಬಲವನ್ನು ಕೊಟ್ಟರು. 189 ಸೀಟುಗಳಲ್ಲಿ ನೀವು ಗೆದ್ದು ಅಧಿಕಾರಕ್ಕೆ ಬಂದಿದ್ದೀರಿ. ರಾಮನಗರದಲ್ಲಿ ಗಲಭೆಯಾಯಿತು, ಚನ್ನಪಟ್ಟಣದಲ್ಲಿ ಗಲಭೆಯಾಯಿತು ಭಟ್ಕಳದಲ್ಲಿ ವರ್ಷದಲ್ಲಿ ಆರು ತಿಂಗಳುಗಳ ಕಾಲ ಶಾಶ್ವತವಾಗಿ ಕರ್ಫ್ಯೂವನ್ನು ಹಾಕುತ್ತಿದ್ದೀರಿ. ಹುಬ್ಬಳ್ಳಿ ಈದ್ಗಾ ಮೈದಾನದ ಸಮಸ್ಯೆಯನ್ನು ನೀವು ಬಗೆಹರಿಸುವುದಕ್ಕೆ ನಿಮಗೆ ಆಗಿರಲಿಲ್ಲ. ಪ್ರತಿ ಜನವರಿ 26, ಮತ್ತು ಆಗಸ್ಟ್ 15ರಂದು ಪೊಲೀಸರ ಬಂದೋಬಸ್ತನ್ನು ಹಾಕುತ್ತಿದ್ದಿರಿ. 16 ಜನರು ಪ್ರಾಣವನ್ನು ಕಳೆದುಕೊಂಡರು. ಏಕೆ ಈ ರೀತಿಯ ಘಟನೆಗಳು ನಿಮ್ಮ ಕಾಲದಲ್ಲಿ ಆಗುತ್ತಿವೆ ಎನ್ನತಕ್ಕಂಥದ್ದು ನನಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ನೀವು ಸ್ವಲ್ಪ ಯೋಚನೆ ಮಾಡಬೇಕು. ಆ ಶಕ್ತಿಗಳಿಗೆ

ನೀವು ಏನಾದರೂ ಕುಮ್ಮಕ್ಕು ಕೊಡುತ್ತಿದ್ದೀರಾ? ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಕುಮ್ಮಕ್ಕು ಕೊಡುವ ಬಗ್ಗೆ ಇದಕ್ಕೆ ಕಾರಣವೇನು? ಇದರ ವಿಶ್ಲೇಷಣೆ ಬಹಳ ಅಗತ್ಯವಿದೆ. ಇದೇ ರೀತಿಯ ಘಟನೆಗಳು ನಿಮ್ಮ ಆಡಳಿತದ ಸಂದರ್ಭದಲ್ಲಿ ಮೈಸೂರಿನ ನಂಜನಗೂಡಿನ ಉಮ್ಮತ್ತೂರು, ಬದನವಾಳುವಿನಲ್ಲಿ ಇದೇ ರೀತಿಯಾದ ಘಟನೆ ನಡೆಯಿತು. ಬಳ್ಳಾರಿ ಜಿಲ್ಲೆಯ ಸಂಗನಕಲ್ಲಿನಲ್ಲಿ 200 ಗುಡಿಸಲುಗಳನ್ನು ಸುಟ್ಟುಹಾಕಿದರು. ಇದು ತಮಗೆ ಗೊತ್ತಿದೆ ತಾವು ಸಹಿತ ಆ ಸಮಯದಲ್ಲಿ ಮಂತ್ರಿ ಮಂಡಲದಲ್ಲಿ ಇದ್ದೀರಿ. ಹೆಚ್.ಡಿ.ಕೋಟೆ ತಾಲ್ಲೂಕಿನ ಸರಗೂರು ಮತ್ತು ಅಂಚಿಪುರ ಇದೇ ರೀತಿಯ ದೌರ್ಜನ್ಯ ಹರಿಜನರ ಮೇಲೆ ಆಯಿತು. ಇದಕ್ಕೆ ಕಾರಣವೇನು? ಎಲ್ಲೋ ಒಂದು ಕಡೆ ನೀವು ಎಡವಿದ್ದೀರಿ, ಇದರ ಬಗ್ಗೆ ನೀವು ವಿಮರ್ಶೆ ಮಾಡಬೇಕು. ಇವತ್ತು ಮಾನ್ಯ ಕೃಷ್ಣಾರವರೇ ಇಡೀ ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷ ಕುಗ್ಗುತ್ತಿದೆ ನೀವು ಕಾಂಗ್ರೆಸ್ ಪಕ್ಷಕ್ಕೆ ಸೇರಿರತಕ್ಕಂತಹ 4-5 ಜನ ಮುಖ್ಯಮಂತ್ರಿಗಳಿದ್ದೀರಾ, ಕರ್ನಾಟಕದವರೊಬ್ಬರು ರಾಷ್ಟ್ರಮಟ್ಟದಲ್ಲಿ ಒಬ್ಬರು ನಾಯಕರಾಗುತ್ತಾರೆಂದರೆ ನಮಗೆ ಹೆಮ್ಮೆ ಇದೆ. ನಿಮ್ಮ ವ್ಯಕ್ತಿತ್ವಕ್ಕೆ ಮತ್ತು ನಿಮ್ಮ ನಾಯಕತ್ವಕ್ಕೆ ಇದೊಂದು ಕಳಂಕ ತಂದಿದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇದು ಹೇಗೆ? ಪೊಲೀಸರು ನಾವು ಹೇಳಿದಂತೆ ಕೇಳುತ್ತಾರೆ. ಮಾನ್ಯ ಮಂತ್ರಿಗಳು ರಮಾನಾಥರೈರವರು ಮತ್ತು ನಾನು ಒಳ್ಳೆಯ ಸ್ನೇಹಿತರು, ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ಆಗಿರತಕ್ಕಂತಹ ಘಟನಾವಳಿಗಳೂ ನಿಮ್ಮ ಪಕ್ಷಕ್ಕೆ ಮತ್ತು ನಿಮ್ಮ ಸರ್ಕಾರಕ್ಕೆ ಗೌರವವನ್ನು ತರತಕ್ಕಂಥ ವಿಚಾರದಲ್ಲಿ, ಒಬ್ಬರು ಮಂತ್ರಿಯಾಗಿರತಕ್ಕಂಥವರು ಸಚಿವಸಂಪುಟದಲ್ಲಿರತಕ್ಕಂತಹ ನೀವು ಆ ರೀತಿಯಾಗಿ ನಡೆದುಕೊಳ್ಳುತ್ತೀರೆಂದು ಪತ್ರಿಕೆಯಲ್ಲಿ ವರದಿಯಾದಾಗ ಪೊಲೀಸರು ಏನು ಮಾಡುತ್ತಾರೆ? ಇವರ ಮೇಲೆ ಇವತ್ತು ಪೊಲೀಸರು ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಿದ್ದಾರೆ. ಇದರ ಬಗ್ಗೆ ಪೊಲೀಸರು ಏನು ಅಂದು ಕೊಳ್ಳುತ್ತಾರೆ, ಯಾವ ರೀತಿಯಾದ ಕ್ರಮವನ್ನು ಪೊಲೀಸರು ತೆಗೆದುಕೊಳ್ಳಬೇಕು, ಇವತ್ತು ಅದೇ ರೀತಿಯಲ್ಲಿ ನಿನ್ನೆ ದಿನ ರಾಜ್ಯಸಭಾ ಚುನಾವಣೆಯ ಸಲುವಾಗಿ ಇದರ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿರತಕ್ಕಂತಹ ವಿಚಾರವನ್ನು ಮಾತ್ರ ನಾನು ಹೇಳುತ್ತಿದ್ದೇನೆ. ಪತ್ರಿಕೆಗಳಲ್ಲಿ ವರದಿಯಾದಂತೆ, ನಮ್ಮ ಸಹಕಾರ ಮಂತ್ರಿಗಳಾಗಿರತಕ್ಕಂತಹ ಮಾನ್ಯ ಶ್ರೀ ಡಿ.ಕೆ.ಶಿವಕುಮಾರ್‌ರವರು ನಿಮ್ಮ ಪಕ್ಷದ ಆಂತರಿಕ ವ್ಯವಹಾರ ಇರಬಹುದು, ಇದು ನಮಗೆ ಸಂಬಂಧವಿಲ್ಲ. ಆದರೆ ಏತಕ್ಕೆ ನಾನು ಇದ ಹೇಳುತ್ತಿದ್ದೇನೆಂದರೆ, ಆ ವಿಷಯಕ್ಕೆ ನಾನು ಬರುತ್ತೇನೆ. ಘಟನೆ ನಡೆದಿರತಕ್ಕಂಥದ್ದು ಚುನಾವಣಾಧಿಕಾರಿಗಳ ಕಛೇರಿಯಲ್ಲಿ ಚುನಾವಣಾಧಿಕಾರಿಗಳ ಕಛೇರಿ ಕಾಂಗ್ರೆಸ್ ಪಕ್ಷದ ಕಛೇರಿಯಾಗಿತ್ತು, ಅವರನ್ನು ಹೊರಗಡೆ ಎಳೆದುಕೊಂಡು ಬಂದರು ಎನ್ನುವ ವರದಿ ಪತ್ರಿಕೆಯಲ್ಲಿ ಬಂದಿದೆ. ಅದರ ಸತ್ಯಾಸತ್ಯತೆಯ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆ ಎಂದು ಹೇಳಿದರೆ, ನೀವು ಅವರನ್ನು

ಎಳೆದಿಲ್ಲ, ಈ ಘಟನೆ ನಡೆದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಶಿವಕುಮಾರ್‌ರವರು ಯಾರು ಹೇಳಿಲ್ಲ. ಆದ್ದರಿಂದ ಇದು ನಡೆದಿದೆ ಎಂದು ನಾನು ಭಾವಿಸುತ್ತೇನೆ. ಪೊಲೀಸರಿಗೆ ಯಾವ ರೀತಿಯ ಒಂದು ಸೂಚನೆ ಹೋಗುತ್ತದೆ; ಎನ್ನುವ ಬಗ್ಗೆ ತಾವು ವಿಚಾರ ಮಾಡಿ.

12.10 ಪಿ.ಎಂ

ನಿಮ್ಮ ಕಾಲದಲ್ಲಿ ಮಾತ್ರ ಈ ರೀತಿಯ ಘಟನಾವಳಿಗಳು ಏಕೆ ನಡೆಯುತ್ತವೆ? ಶ್ರೀಮತಿ ಇಂದಿರಾಗಾಂಧೀಯವರು ಬದುಕಿದ್ದ ಸಂದರ್ಭದಲ್ಲಿ ಶ್ರೀ ಕರ್ಪೂರಿಠಾಕೂರ್ ಬಿಹಾರದಲ್ಲಿ ಅಂದು ಮುಖ್ಯಮಂತ್ರಿಗಳಾಗಿದ್ದರು. ಬಿಹಾರದಲ್ಲಿ ಹರಿಜನರ ನರಮೇಧ ನಡೆದಂತಹ ಆ ಸಂದರ್ಭದಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಈ ದೇಶಕ್ಕೆ ಒಂದು ಸಂದೇಶವನ್ನು ಕೊಡಬೇಕೆಂಬ ಆಸೆಯ ಮೇಲೆ ಬಿಹಾರದ ಬೆಲ್ಜಿಗೆ ಹೋದರು. ನಾನು ನೀವು ಹೆಲಿಕಾಪ್ಟರ್‌ನಲ್ಲಿ ಹೋಗಿರುವುದನ್ನು ಟೀಕೆ ಮಾಡುತ್ತಿಲ್ಲ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, What is the direction it gives to the police officers? ನೀವು ಯಾರ ಮೂಲಕವಾಗಿ ಮತವನ್ನು ಪಡೆದಿದ್ದೀರಿ, ಯಾರ ಬೆಂಬಲದಿಂದ ಇವತ್ತು ನೀವು ಅಧಿಕಾರಕ್ಕೆ ಬಂದಿದ್ದೀರಿ ನೀವು ಆ ವರ್ಗದ ಜನರನ್ನು ರಕ್ಷಣೆ ಮಾಡತಕ್ಕ ವಿಚಾರದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ. ನಿಮ್ಮ ರಾಜಕೀಯ ಇತಿಹಾಸದಲ್ಲಿ ಇದೊಂದು ಕಪ್ಪು ಚುಕ್ಕೆ ಎನ್ನತಕ್ಕದ್ದನ್ನು ತಾವು ತಿಳಿದುಕೊಳ್ಳಬೇಕು. ಇಡೀ ಕರ್ನಾಟಕ ರಾಜ್ಯಕ್ಕೆ ಆಗಿರತಕ್ಕ ಒಂದು ಅವಮಾನದ ಜೊತೆಗೆ ನಿಮ್ಮ ರಾಜಕೀಯ ನೇತೃತ್ವ, ನಿಮ್ಮ ಪಕ್ಷದ ನೇತೃತ್ವವನ್ನು ಇವತ್ತು ವಿಚಾರ ಮಾಡಬೇಕಾಗಿದೆ. ಏಕೆ ಹೀಗಾಗಿದೆ? ಎಲ್ಲೋ ನೀವು ಎಡವಿದ್ದೀರಿ ಇದನ್ನು ಹೇಗೆ ಸರಿಮಾಡುವುದು? ಈ ರೀತಿಯ ಶಕ್ತಿಗಳನ್ನು ಹೇಗೆ ತಡೆಗಟ್ಟುವುದು? ನೀವು ಅಧಿಕಾರಕ್ಕೆ ಅಕ್ಟೋಬರ್ 11, 1999ರಲ್ಲಿ ಬಂದಿದ್ದೀರಿ. ಐದಾರು ತಿಂಗಳು ಆಯಿತು. ಮಾರ್ಚ್ ವರೆಗೆ ಯಾವುದೇ ಪೋಲೀಸ್ ಅಧಿಕಾರಿಗಳನ್ನು ವರ್ಗ ಮಾಡುವುದಿಲ್ಲವೆಂದು ಹೇಳಿದಿರಿ. ಆದರೆ ತಾವು ಮಾಡಿರುವುದು ಏನು ಎನ್ನುವುದು ನನಗೆ ಗೊತ್ತಿದೆ. ನಮ್ಮ ಕರ್ನಾಟಕರಾಜ್ಯದ ಪೋಲೀಸ್ ಇಲಾಖೆಯ ಅಧಿಕಾರಿಗಳು ಯಾರಿಗೂ ಕಡಿಮೆಯಿಲ್ಲ. But, have you given the permission to them? ಇವತ್ತು ಅವರುಗಳು ಏನು ಮಾಡಬೇಕೆನ್ನುವ ಬಗ್ಗೆ ಎಲ್ಲ ಕಾಯುತ್ತಿದ್ದಾರೆ. ಯಾರಯಾರ pressure ತರಬೇಕು, ಯಾವ ಯಾವ ಜಾತಿಯವರನ್ನು ಹಿಡಿಯಬೇಕು, ಯಾರ್‍ಯಾರನ್ನು ಹಿಡಿಯಬೇಕು, ಹೇಗೆ ಹಿಡಿಯಬೇಕು ಆಯಕಟ್ಟಿನ ಜಾಗಗಳಿಗೆ ಹೋಗುವುದು ಹೇಗೆ ಎಂಬುದನ್ನು ಅವರು ಈಗ ವಿಚಾರ ಮಾಡುತ್ತಿದ್ದಾರೆ. ನೀವು ಮಾಡುವುದಿಲ್ಲ. ತಾವು 150 ಸರ್ಕಲ್ ಇನ್ಸ್‌ಪೆಕ್ಟರುಗಳನ್ನು ವರ್ಗಾವಣೆ ಮಾಡಿದ್ದೀರಿ ಯಾವ ಕಾರಣಕ್ಕೋಸ್ಕರ ಮಾಡಿದ್ದೀರಿ? ಪೋಲೀಸ್‌ನವರಿಗೆ ಏನು ಮಾಡಬೇಕೆಂದು ಯೋಚನೆಯಾಗಿದೆ. ಪೋಲೀಸರನ್ನು

ಸಂಪೂರ್ಣವಾಗಿ ಹಾಳು ಮಾಡುವುದಕ್ಕೆ ಇದನ್ನು ಮಾಡಿದ್ದೀರಿ ಎಂದು ನಾನು ಇಲ್ಲಿ ಹೇಳಬೇಕಾಗುತ್ತಿದೆ, ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ನಡೆದಂತಹ ವಿಚಾರಗಳನ್ನು ಮುಚ್ಚಿಟ್ಟಿದ್ದೀರಿ. ಇವತ್ತು ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಗ್ರಾಮಪಂಚಾಯಿತಿ ಚುನಾವಣೆಯನ್ನು ನಡೆಸಿದ್ದಾರೆ. ಪೋಲೀಸ್ ಇಲಾಖೆಯ ಆಡಳಿತದಲ್ಲಿ ಹಸ್ತಕ್ಷೇಪ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಪ್ರತ್ಯೇಕವಾಗಿ ಮಾತನಾಡೋಣ. ಇಲ್ಲಿ ಮಾತನಾಡಿದರೆ ವಿಷಯದ ಗಾಂಭೀರ್ಯತೆ ಹೊರಟುಹೋಗುತ್ತದೆ. ಪೋಲೀಸರ ನೈತಿಕ ಧೈರ್ಯ, ಸ್ಥೈರ್ಯ ಹಾಳು ಮಾಡುವುದಕ್ಕೆ ತಾವುಗಳು ಹೊರಟ್ಟಿದ್ದೀರಿ. ಇವತ್ತು ಪತ್ರಿಕೆಗಳಲ್ಲಿ ಏನು ಬರುತ್ತಿದೆ? ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಒಂದೇ ಕಡೆ ಇದ್ದರೂ ಸಹ ಅವರಲ್ಲಿ ಹೊಂದಾಣಿಕೆಯಿಲ್ಲ ಎನ್ನತಕ್ಕ ರೀತಿಯಲ್ಲಿ ವರದಿಗಳು ಬರುತ್ತಿವೆ. ಇವತ್ತು ಸರ್ಕಲ್ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್‌ಗಳಿಗೆ ಯಾವ ತರಹ ಟ್ರೈನಿಂಗ್ ಕೊಟ್ಟಿದ್ದಾರೆ ಅದನ್ನು ವಿಚಾರ ಮಾಡಬೇಕು. ನಾನು ಹೆಗ್ಗಡದೇವನಕೋಟೆಗೆ ಹೋಗಿದ್ದೆ. ಅಲ್ಲಿನ ಜನ ನನಗೆ ಒಂದು ಪ್ರಶ್ನೆ ಹಾಕಿದ್ದರು. ಮಾನ್ಯ ಶ್ರೀ ವೀರಪ್ಪಮೊಯಿಲಿಯವರ ಕಾಲದಲ್ಲಿ ಅವರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಎಸ್.ಎಂ.ಕೃಷ್ಣಾರವರು ಉಪ ಮುಖ್ಯಮುಖ್ಯಮಂತ್ರಿ ಆಗಿದ್ದರು ಶ್ರೀ ಎಸ್.ಎಂ.ಕೃಷ್ಣಾರವರು ಮುಖ್ಯಮಂತ್ರಿಗಳು ಆದಾಗ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಏಕೆ ಉಪ ಮುಖ್ಯಮಂತ್ರಿಗಳಾಗಬಾರದು? ಈ ಪ್ರಶ್ನೆ ಅಷ್ಟೆ ಸೂಕ್ಷ್ಮವಾಗಿದೆ. ಪತ್ರಿಕೆಗಳಲ್ಲಿ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಒಂದೇ ಕಡೆ ಇರುವ ಫೋಟೋ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವಿಷಯದ ಗಾಂಭೀರ್ಯತೆಯನ್ನು ಹೊರಟುಹೋಗುವಂತೆ ಮಾಡುತ್ತಿದ್ದಾರೆ. ಪೋಲೀಸ್ ವರ್ಗಾವಣೆ ಬಗ್ಗೆ ಮತ್ತು ಉಪ ಮುಖ್ಯಮಂತ್ರಿ ಮಾಡುವುದು, ಮುಖ್ಯಮಂತ್ರಿ ಮಾಡುವುದು ಅದು ಆಮೇಲೆ ನೋಡೋಣ. ಈ ವಿಷಯದ ಬಗ್ಗೆ ತಮಗೆ ಕಳಕಳಿ ಇದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ತಾವು ಈ ಇಲಾಖೆಯನ್ನು ವಹಿಸಿಕೊಂಡು ಕೆಲಸ ಮಾಡಿದ್ದಿರಿ. ಜೊತೆಗೆ ತಾವು ಅನೇಕ ಇಲಾಖೆಗಳಲ್ಲಿ ಸಚಿವರಾಗಿ ಕೆಲಸ ಮಾಡಿದ್ದೀರಿ. ನಾಲ್ಕೈದು ತಿಂಗಳ ಹಿಂದೆ ಈ ಇಲಾಖೆಯ ಜವಾಬ್ದಾರಿ ನಿಮ್ಮ ಹತ್ತಿರವಿತ್ತು. ತಮಗೂ ಆ ಇಲಾಖೆಯ ಅನುಭವವಿದೆ. ಈಗ ನಾವೇನು ಮಾಡಬಹುದು, ಏನು ಮಾಡುವುದರಿಂದ ಸಮಸ್ಯೆಯನ್ನು ಬಗೆಹರಿಸಬಹುದು, ಯಾವ ವ್ಯವಸ್ಥೆಯನ್ನು ಜಾರಿಗೆ ತರಬೇಕು, ನಮ್ಮ ಕೈಯಿಂದ ಏನಾಗಬೇಕು ಅದನ್ನು ಹೇಳಿ. ನಾನು ಮಂತ್ರಿ ಪದವಿಯನ್ನು ತ್ಯಾಗ ಮಾಡುವುದರಿಂದ ಎಲ್ಲವೂ ಸರಿಹೋಗುತ್ತದೆಂದು ನೀವು ಹೇಳುವುದಾದರೆ ನಾನು ಸಿದ್ಧನಿದ್ದೇನೆ. ನಾನು ಹಿಂದೆಮುಂದೆ

ಮಾತನಾಡುವುದಿಲ್ಲ. ಅದರಿಂದ ಸಮಸ್ಯೆ ಬಗೆಹರಿಯುತ್ತದೆನ್ನುವ ಎಲ್ಲರ ವಾದ ಇದ್ದರೆ ಅದನ್ನು ಮಾಡೋಣ. ಪೋಲೀಸ್ ಇನ್ಸ್‌ಪೆಕ್ಟರ್ ಟ್ರಾನ್ಸ್‌ಫರ್ ಅದನ್ನೆಲ್ಲ ಹೇಳಿಕೊಳ್ಳುತ್ತಾ ಹೋದರೆ ಈ ವಿಷಯವನ್ನು ಡೈಲ್ಯೂಟ್ ಮಾಡಿದಹಾಗೆ ಆಗುತ್ತದೆ. ಅದು ತಮಗೆ ಗೊತ್ತಿದೆ. 47ಜನ ಡಿವೈಎಸ್‌ಪಿಗಳಿಗೆ ಪ್ರಮೋಷನ್ ಕೊಟ್ಟಾಗ ಆಟೋಮೆಟಿಕ್ ಆಗಿ 70 ಜನರಿಗೆ ಟ್ರಾನ್ಸ್‌ಫರ್ ಮಾಡಲೇ ಬೇಕಾಗುತ್ತದೆ. ಆಗಿದ್ದು ಆಗಿ ಹೋಗಿದೆ ಈಗ ನಡೆದಿರುವ ಘಟನೆಯ ಬಗ್ಗೆ ಬೆಳಕು ಚೆಲ್ಲಿಯೆಂದು ನಾನು ಕಳಕಳಿಯ ಮನವಿಯನ್ನು ತಮ್ಮಲ್ಲಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ ನಾನು ವಿಷಯವನ್ನು ಡೈಲ್ಯೂಟ್ ಮಾಡಬೇಕೆಂದು ಮಾತನಾಡಲಿಲ್ಲ. ಏಕೆ ಮಾತನಾಡಿದ್ದೇನೆಂದರೆ, ಹೋಮ್ ಸೆಕ್ರೆಟರಿಯಿಂದ ಹಿಡಿದು ಒಬ್ಬ ಎಸ್‌ಪಿಯವರೆಗೆ ಡೈರೆಕ್ಷನ್‌ಗೋಸ್ಕರ ಕಾಯುತ್ತಾರೆ. ನಿಮಗೆ ದಿನದ 24ಗಂಟೆಯಲ್ಲಿ ಎಷ್ಟು ಡಕಾಯಿತಿ ಆಯಿತು, ಎಷ್ಟು ಮರ್ಡರ್ ಆಯಿತು ಎಷ್ಟು ಪರಿಶಿಷ್ಟಜಾತಿ ಮತ್ತು ವರ್ಗದವರ ಮೇಲೆ ಅಟ್ರಾಸಿಟಿ ಆಯಿತು ಏನೇನು ಸಮಸ್ಯೆ ಇದೆ ಅದರ ಬಗ್ಗೆ ರಿಪೋರ್ಟ್ ಬರುತ್ತದೆ. ಅದು 24ಗಂಟೆಗೆ ಒಂದು ಸಾರಿ ಬರುತ್ತದೆ. ಯಾವ ಮುಖ್ಯಮಂತ್ರಿಗಳು ಇಂಟಲಿಜೆನ್ಸ್ ಅನ್ನು ಬೇರೆಯವರಿಗೆ ಕೊಡುವುದಿಲ್ಲ. ಅವರ ವಿರುದ್ಧ ಕೆಲಸ ಮಾಡುತ್ತಾರೆಂದು ಕೊಡುವುದಿಲ್ಲ. ನಿಮ್ಮದೇ ಆಗಿರತಕ್ಕ ಇಂಟಲಿಜೆನ್ಸ್ ಸ್ಪೆಷಲ್ ಬ್ರಾಂಚ್ ಇದೆ. ಆ ರಿಪೋರ್ಟನ್ನು ಓದುವುದಕ್ಕೆ ನಿಮಗೆ ಟೈಮ್ ಇರಬೇಕು. ನಾನು ಓದಿದ್ದೇನೆ. ಇದನ್ನು ಹೇಳಿದರೆ ಬೇಜಾರು ಆಗುತ್ತದೆ. ಇಂಟಲಿಜೆನ್ಸ್ ವಿಂಗನ್ನು ಸ್ಟ್ರೆಂತನ್ ಮಾಡಬೇಕು. There are Officers with highest integrity in Karnataka Police ಅಂಥ ಅಧಿಕಾರಿಗಳನ್ನು ಪೋಸ್ಟ್ ನೀವು ಮಾಡಬೇಕು. ಟ್ರಾನ್ಸ್‌ಫರ್‌ಗೂ ಇದಕ್ಕೂ ಸಂಬಂಧವಿಲ್ಲ. ಪೊಲೀಸ್ ಇಲಾಖೆ ಡೀಮಾರಲೈಸ್ ಆದರೆ ರಾಂಗ್ ರಿಪೋರ್ಟ್ ಕಳುಹಿಸುತ್ತಾರೆ. ಅದು ಸ್ವಾಭಾವಿಕ. ಘಟನೆಗಳು. ಅದರ ಬಗ್ಗೆ ಮಾನ್ಯ ಜಗದೀಶಶೆಟ್ಟರ್‌ರವರು ಹೇಳಿದ್ದಾರೆ. ನಮ್ಮ ಪಕ್ಷದ ಮಾನ್ಯ ಸೋಮಶೇಖರ್ ಮತ್ತು ಬೈರೇಗೌಡರು ಮಾತನಾಡುತ್ತಾರೆ. ಘಟನೆಗಳ ವ್ಯವಸ್ಥೆಯ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಘಟನೆಗಳ ಬಗ್ಗೆ ರಿಪೋರ್ಟ್ ಇರಲಿಲ್ಲವೆ? ತಾವು ಗೃಹಮಂತ್ರಿಗಳಾಗಿ ನಾಲ್ಕೈದು ತಿಂಗಳುಗಳಾಗಿದೆ. ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಯಾವುದು ಸೂಕ್ಷ್ಮ ಪ್ರದೇಶವಿದೆ, ಎಲ್ಲಿ ಹಿಂದೂಮುಸ್ಲಿಂ ಗಲಾಟೆಗಳಾಗುತ್ತವೆ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರ ಮೇಲೆ ಆಗತಕ್ಕ ಅಟ್ರಾಸಿಟಿ ಅದರ ಬಗ್ಗೆ ವರದಿಯನ್ನು ಪೋಲೀಸ್‌ನವರು ಕಳುಹಿಸುತ್ತಾರೆ. ಪೊಲಿಟಿಕಲ್ ಇಂಟಲಿಜೆನ್ಸ್ ಹೈಯೆಸ್ಟ್ ಆರ್ಡರ್‌ನಲ್ಲಿದೆ ಇಂಟರ್‌ನ್ಯಾಷನಲ್ ಲೆವಲ್‌ನಲ್ಲಿ ಇದೆ ಅದು ಚೀಫ್‌ಮಿನಿಸ್ಟರ್‌ಗೆ ಹೋಗುತ್ತದೆ. ಬಾಕಿಯದು ನಿಮಗೆ ಬರುತ್ತದೆ. ಪೋಲೀಸ್‌ನವರು ಡೀಮಾರಲೈಸ್ ಆಗಿ ನಿಮಗೆ ರಾಂಗ್ ರಿಪೋರ್ಟ್ ಕೊಟ್ಟಿದ್ದಾರೆಯೆ? ಏಕೆಂದರೆ

ಅವರಿಗೆ ಭಯ. ಆ ಭಯದಿಂದ ಆಡಳಿತ ಪಕ್ಷವನ್ನು ಮೆಚ್ಚಿಸಬೇಕೆಂದು ಹೇಳುತ್ತಾರೆ. ಭಯದಿಂದ ಇದನ್ನು ಹೇಳಿದ್ದಾರೆಯೇ ಹೊರತು, ನಾನು ವಿಷಯದ ಗಾಂಭೀರ್ಯತೆಯನ್ನು ಡೈಲ್ಯೂಟ್ ಮಾಡಬೇಕೆಂದು ಹೇಳಲಿಲ್ಲ. ಸಿಆರ್‌ಐ ಸೆಲ್‌ನವರು ಎಷ್ಟು ಸಾರಿ ಆ ಸ್ಥಳಕ್ಕೆ ಹೋಗಿದ್ದಾರೆ? ತಾವು ಅಧಿಕಾರಕ್ಕೆ ಬಂದು 5ತಿಂಗಳು ಆಯಿತು ರಿವ್ಯೂ ಮಾಡಿದ್ದೀರಾ? ಈಗ ರಾಜ್ಯ ಸರ್ಕಾರದ ವಶದಲ್ಲಿ ಎರಡು ಹೆಲಿಕಾಪ್ಟರ್‌ಗಳಿವೆ. ಒಂದು ಗುಂಡೂರಾಯರ ಕಾಲದ್ದು ಮತ್ತೊಂದು ಮಾನ್ಯ ಶ್ರೀ ಪಟೇಲರ ಕಾಲದ್ದು. ತಾವು ಹೋಮ್‌ಮಿನಿಸ್ಟರ್ ಆದಮೇಲೆ 27ಜಿಲ್ಲೆಗಳಿಗೆ ಹೋಗಿ ರಿವ್ಯೂ ಮಾಡಿದ್ದೀರಾ? ಆ ಭಾಗದ ಎಂಎಲ್‌ಎಗಳನ್ನು ಕರೆದಿದ್ದಾರೆಯೆ? ಆಡಳಿತ ಪಕ್ಷದ ಎಂಎಲ್‌ಎಗಳನ್ನು ಕೇಳಿದ್ದೀರಾ? ಅಟ್ರಾಸಿಟಿಯಾಗತಕ್ಕ ಸಂದರ್ಭಗಳು ಇವೆ. ಈ ಸಮಾಜದಲ್ಲಿ ಯಾರನ್ನು ದೂಷಣೆ ಮಾಡುವುದಲ್ಲ. ನಮ್ಮ ಮನಸ್ಸಿನಲ್ಲಿ ನಾವು ವಿಚಾರ ಮಾಡೋಣ. ಸಮಾಜ ಆ ರೀತಿ ಇದೆ. ಅದನ್ನು ಬಿಟ್ಟು ಐಸೊಲೇಟೆಡ್ ಆಗಿ ಕೇಸುಗಳನ್ನು ಹಾಕುವುದಲ್ಲ. ಸಿಆರ್‌ಇ ಸೆಲ್‌ನವರು ಎಷ್ಟು ಕೇಸುಗಳನ್ನು ಬುಕ್ ಮಾಡಿದ್ದಾರೆ? ಏನು ಮಾಡಿದ್ದಾರೆ ಅವರು? ನಾನು ಅಧಿಕಾರದಲ್ಲಿದ್ದಾಗ ಒಂದು ಆರ್ಡರ್‌ನ್ನು ಮಾಡಿದ್ದೇನೆ. ಸಿಆರ್‌ಇ ಸೆಲ್‌ನವರು ಕೇವಲ ಕೇಸುಗಳನ್ನು ಬುಕಿಂಗ್‌ಮಾಡುವುದು ಅಷ್ಟೆ ಅಲ್ಲ, ಎನ್‌ಕ್ವಾಯರಿ ಮಾಡತಕ್ಕದ್ದು ಕೇಸ್ ಬುಕ್ ಮಾಡುವುದಕ್ಕೆ ಅವಕಾಶವಿದೆ. ಎಷ್ಟು ಕೇಸುಗಳನ್ನು ಇಲ್ಲಿಯವರೆಗೆ ಬುಕ್ ಮಾಡಿದ್ದಾರೆ? ಏನು ಮಾಡುತ್ತಿದೆ ಸಿಆರ್‌ಇ ಸೆಲ್, ನಿಮಗೇನಾದರೂ ರಿಪೋರ್ಟ್ ಕಳುಹಿಸಿದ್ದಾರಾ? ಕೋಲಾರ ಜಿಲ್ಲೆಯ ಬಗ್ಗೆ ಏನು ರಿಪೋರ್ಟ್ ಇದೆ. ಈ ಘಟನೆ 11ನೇ ತಾರೀಖು ಆಯಿತು. ಹಿಂದಿನ ದಿನಗಳಲ್ಲಿ 7, 8, 9, 10ನೇ ತಾರೀಖು ಸ್ಪೆಷಲ್ ರಿಪೋರ್ಟ್ ಏನು ಬಂದಿದೆ? ಆ ವರದಿಯ ಮಾಹಿತಿ ನಿಮ್ಮಲ್ಲಿ ಇಲ್ಲವೆ? ನೀವು ಸಹ ನಮ್ಮ ಹಾಗೆ ಹೃದಯವಂತರು. ಆ ಘಟನೆಯನ್ನು ನೋಡಿದಾಗ ನೀವು ಅತ್ತಿದ್ದೀರಿ. ನಾನು ಅದನ್ನು ಪ್ರಶ್ನೆ ಮಾಡುತ್ತಿಲ್ಲ. ಮೂರು ದಿವಸಗಳ ಹಿಂದೆ ಘಟನೆ ನಡೆಯುವುದಕ್ಕೆ ಮುಂಚೆ ನಿಮಗೆ ರಿಪೋರ್ಟ್ ಬಂದಿರಲಿಲ್ಲವೆ? ಮೂರು ತಿಂಗಳ ಹಿಂದೆ ಸರ್ಕಲ್ ಇನ್‌ಸ್ಪೆಕ್ಟರ್ ಅವರು ರಿಹ್ಯಾಬಿಲಿಟೇಟ್ ಮಾಡುತ್ತೇವೆ, ಕಾಂಪ್ರಮೈಸ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಹಾಗಾದರೆ ಪೊಲಿಟಿಕಲ್ ಲೀಡರ್‌ಶಿಪ್ ಇದ್ದು ಕೂಡ ತಾವು ಏನು ಮಾಡಿದ್ದೀರಿ? ಕೋಲಾರ ಜಿಲ್ಲೆಯ ಉಸ್ತುವಾರಿ ಮಂತ್ರಿ ಯಾರು, ಅವರು ಏನು ಮಾಡಿದರು? ಕೋಲಾರ ಜಿಲ್ಲೆಯ ಉಸ್ತುವಾರಿ ಮಂತ್ರಿಗಳ ಮಾತನ್ನು ಎಸ್.ಪಿ.ಯವರು ಕೇಳುವುದಿಲ್ಲವೇನು? ಕೋಲಾರ ಜಿಲ್ಲೆ ಉಸ್ತುವಾರಿ ಮಂತ್ರಿಗಳ ಮಾತನ್ನು ಡಿ.ಸಿ.ಯವರು ಕೇಳುವುದಿಲ್ಲವೇನು? ಏಕೆ ಏನೂ ಮಾಡಲಿಲ್ಲ? Why did you not take preventive action? ಇದು ಒಂದು ಕಡೆಯಾದರೆ, ನಿಮ್ಮ ಕಾಗೋಡು ತಿಮ್ಮಪ್ಪನವರು ಈಗ ಹೋಗಿದ್ದಾರೆ. ಅವರು ಹೋಗಿ ಸೂಚನೆ ಕೊಟ್ಟಿದ್ದಾರೆ ಎಂದು ನಮಗೆ ಗೊತ್ತಾಗಿದೆ. ಈ ಹರಿಜನರಿಗೆ ಏನು ಮಾಡುವುದಕ್ಕೆ

ಸಾಧ್ಯವಿದೆ ಅದನ್ನು ಮಾಡಬೇಕೆಂದು ಹೇಳಿದ್ದಾರೆ. ಅವರು ಹತ್ತು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋಗಿದ್ದರು. ಆದರೆ ಅದನ್ನು ಯಾರಿಗೆ ಕೊಡುವುದು ಎಂದು ನಿಮಗೆ ಗೊತ್ತಿಲ್ಲ. ಕೊಡುವುದಕ್ಕೆ ಅಲ್ಲಿ ಯಾರೂ ಉಳಿದಿಲ್ಲ. ದುಡ್ಡು ಕೊಡುವುದಕ್ಕೆ ಆಗಿಲ್ಲವೆಂದು ವಾಪಾಸ್ಸು ತೆಗೆದುಕೊಂಡು ಬಂದಿದ್ದೀರಿ. ಚಿಂತಾಮಣಿ ತಾಲ್ಲೂಕಿನ ಈ ಕಂಬಾಲಪಲ್ಲಿ ಪೊಲೀಸ್ ಸ್ಟೇಷನ್ ಏರಿಯಾ ಬಹಳ ಸೂಕ್ಷ್ಮವಾದ ಪ್ರದೇಶ. ಹರಿಜನ-ಗಿರಿಜನರಿಗೂ, ಸವರ್ಣೀಯರಿಗೂ ವ್ಯತ್ಯಾಸ ಇರತಕ್ಕಂಥ ಪ್ರದೇಶ. ಎಷ್ಟು ಸಾರಿ ನಿಮ್ಮ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಅಧಿಕಾರಿ ಭೇಟಿ ನೀಡಿದ್ದಾರೆ. ನೀವು ಎಷ್ಟು ಸಾರಿ ಕೋಲಾರಕ್ಕೆ ಹೋಗಿದ್ದೀರಿ? ಗುಲ್ಬರ್ಗಾಕ್ಕೆ ಎಷ್ಟು ಸಾರಿ ಹೋಗಿದ್ದೀರಿ? ಬೀದರ್‌ಗೆ ಎಷ್ಟು ಸಾರಿ ಹೋಗಿದ್ದೀರಿ? ಚಾಮರಾಜನಗರಕ್ಕೆ ಎಷ್ಟು ಸಾರಿ ಹೋಗಿದ್ದೀರಿ? ನಿಮ್ಮ ಜಿಲ್ಲಾಧಿಕಾರಿಗಳು ಈ ಸೂಕ್ಷ್ಮವಾದ ಪ್ರದೇಶಕ್ಕೆ ಈ ಆರು ತಿಂಗಳಲ್ಲಿ ಎಷ್ಟು ಸಾರಿ ಭೇಟಿ ಕೊಟ್ಟಿದ್ದಾರೆ ಎಂದು ದಯವಿಟ್ಟು ತಾವು ಹೇಳಿ. ನನಗೆ ತಿಳಿದ ಹಾಗೆ ಅವರು ಭೇಟಿ ಕೊಟ್ಟಿಲ್ಲ ಸ್ವಾಮಿ. ನಿಮ್ಮ ಡಿಸ್ಟ್ರಿಕ್ಟ್ ಆಫೀಸರ್‌ಗೂ, ಪೊಲೀಸರಿಗೂ, ಸಿ.ಆರ್.ಇ. ಸೆಲ್‌ಗೂ ಯಾವ ರೀತಿಯಾದ ಸಂಬಂಧವಿಲ್ಲ. ಅವರು ಇವರ ಮಾತನ್ನು ಕೇಳುವುದಿಲ್ಲ. ರಿಪೋರ್ಟನ್ನು ಸಹಿತ ಕೇಳುವುದಿಲ್ಲ. ಈಗ ಅಲ್ಲಿರುವ ಜನರನ್ನು ಶಿಫ್ಟ್ ಮಾಡುತ್ತೇವೆ, ರಿಹ್ಯಾಬಿಲಿಟೇಟ್ ಮಾಡುತ್ತೇವೆ ಎಂದು ಹೇಳುತ್ತೀರಿ. ಅವರ ರಿಹ್ಯಾಬಿಲಿಟೇಶನ್ ಸತ್ತವರ ಗೋರಿಯೊಳಗೆ ಆಗಿ ಬಿಟ್ಟಿದೆ. ಇನ್ನು ಏನು ರಿಹ್ಯಾಬಿಲಿಟೇಶನ್ ನೀವು ಮಾಡುತ್ತೀರಿ? ಕೊನೆಯಪಕ್ಷ ಇನ್ನು ಮುಂದೆ ಆ ರೀತಿ ಘಟನಾವಳಿಗಳು ನಡೆಯದಹಾಗೆ ನೋಡಿಕೊಳ್ಳುವುದು ಬಹಳ ಅಗತ್ಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರನ್ನು ಸಿಂಗಾಪುರ ಮಾಡುವ ಮಾತನ್ನು ಹೇಳುತ್ತಾರೆ. ನಿಮ್ಮ ಹೈಟೆಕ್ನಾಲಜಿ ಮೂಲಕ ರಿಮೋಟ್ ಸೆನ್ಸಿಂಗ್ ಪ್ರದೇಶವೆಂದು ಗೊತ್ತಾಗಿರಲಿಲ್ಲವೇನು? ಈ ದೇಶ ಸಾಮಾಜಿಕವಾಗಿ ಅನೇಕ ಸ್ತರಗಳನ್ನು ಹೊಂದಿರತಕ್ಕದ್ದು ಇದೆ. Therefore, there is bound to be a rupture because of the economic and also social conditions prevaling in the society. ಅದನ್ನು ತಾವು ಅರ್ಥಮಾಡಿಕೊಳ್ಳಬೇಕು. ಕರ್ನಾಟಕದಲ್ಲಿ ರಣಭೀರ ಸೇನೆ ಬರಬಾರದು, ಕರ್ನಾಟಕದಲ್ಲಿ ನಕ್ಸಲಿಸಂ ಬರಬಾರದು, ಎಲ್.ಟಿ.ಟಿ.ಇ.ಯವರೂ ಇರಬಾರದು. ಈ ರೀತಿಯ ಚಟುವಟಿಕೆಗಳು ಇಲ್ಲಿವೆ ಎಂದರೆ ಅದಕ್ಕೆ ಏನು ಮಾಡಬೇಕು? ಇದನ್ನು ನಿಮ್ಮ ಸರ್ಕಾರದವರು ವಿಚಾರ ಮಾಡಿದೆಯಾ? ಓಟಿಗೋಸ್ಕರ ಮಾತೆತ್ತಿದರೆ ಹರಿಜನರು, ಹಿಂದುಳಿದವರು, ಅಲ್ಪಸಂಖ್ಯಾತರು ಇವರುಗಳ ಬಗ್ಗೆ ಹೇಳುತ್ತೀರಿ. ಇದನ್ನು ಬಿಟ್ಟು ಬೇರೆ ಮಾತು ನೀವು ಏನು ಆಡುತ್ತೀರಿ? ಮಾನ್ಯ ಜೆ.ಎಚ್.ಪಟೇಲರು ಅಲ್ಲಿ ಕುಳಿತಿದ್ದರು. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಇಂತಹ ಘಟನೆಗಳು ನಡೆದಿಲ್ಲ ಸ್ವಾಮಿ. ಇಂತಹ ಪ್ರಕರಣ ನಡೆದಾಗ ನಾವು ತೆಗೆದುಕೊಂಡಿದ್ದ ಕ್ರಮ ಸರಿಯೆನ್ನತಕ್ಕ

ಮಾತನ್ನು ತಾವು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಜಿಲ್ಲೆಗಳ ವಿಸಿಟ್ ಮಾಡಿದ್ದೇನೆ, ರಿವ್ಯೂ ಮಾಡಿದ್ದೇನೆ ಎಂದು ಹೇಳುತ್ತಾರೆ. ಆದರೆ ನನಗೆ ಗೊತ್ತಿರುವ ಹಾಗೆ ಅನೇಕ ಕಡೆಗಳಲ್ಲಿ because of the paucity of time. ಟೈಮ್ ಇಲ್ಲವೆಂದು ಹೇಳಿ ರಿವ್ಯೂ ಮಾಡುವುದನ್ನು ಕ್ಯಾನ್ಸಲ್ ಮಾಡಿದ್ದಾರೆ. ನೀವು ಗೃಹಮಂತ್ರಿಗಳು ಆಗಿರುವವರು 27 ಜಿಲ್ಲೆಗಳಿಗೆ ಹೋಗಿ ಏನು ಆದೇಶ ಕೊಟ್ಟಿದ್ದೀರಿ? ರಿಕಾರ್ಡ್ಸ್ ತರಿಸಿನೋಡಿದರೆ ಡಿ.ಜಿ.ಪಿ, ಪೊಲೀಸ್ ಕಮಿಷನರ್‌ರವರು ಪೊಲೀಸ್‌ನವರಿಗೆ ಬರಿ ಡೈರೆಕ್ಷನ್ಸ್ ಕೊಡುತ್ತಿದ್ದಾರೆ. ಆದರೆ ಇಲ್ಲಿ ಸಮಾಜದಲ್ಲಿ ರಫ್ಚರ್ ಆಗುವಂಥ ಸೂಕ್ಷ್ಮವಾದ ಪ್ರದೇಶಗಳು ಇವೆ. ಇದರ ಬಗ್ಗೆ ಎಚ್ಚರಿಕೆ ತೆಗೆದುಕೊಂಡು, ಅದನ್ನು ಸರಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ಬಿಟ್ಟು ಬಾಕಿ ಎಲ್ಲ ಸಹಿತ ನೀವು ಮಾಡಿದ್ದೀರಿ. ನಿಮ್ಮಿಬ್ಬರ ಮಧ್ಯೆ ಹೊಂದಾಣಿಕೆ ಇಲ್ಲ. ಎಸ್.ಪಿ.ಗೆ ಏನು ಭಯ ಎಂದರೆ, ತಾವು ಹೋಮ್ ಮಿನಿಸ್ಟರ್ ಜತೆಯಲ್ಲಿ ಕ್ಲೋಸ್ ಆಗಿದ್ದೇನೆ ಎಂದು ಗೊತ್ತಾದರೆ ತಮ್ಮನ್ನು ಎತ್ತಂಗಡಿ ಮಾಡಿಬಿಡುತ್ತಾರೆ ಎನ್ನುವ ಭಯ ಇದೆ. ಇದರ ಪರಿಣಾಮ ಪೊಲೀಸ್ ಕಾರ್ಯದಕ್ಷತೆಯಲ್ಲಿ ವಿಫಲತೆ.

ಡಾ. ವೈ.ನಾಗಪ್ಪ: ಅದನ್ನು ನೀವು ಕ್ರಿಯೇಟ್ ಮಾಡುತ್ತಿದ್ದೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಆದ್ದರಿಂದ ಮಾನ್ಯ ಅಧ್ಯಕ್ಷರೆ, ಅಡ್ಮಿನಿಸ್ಟ್ರೇಶನ್‌ನಲ್ಲಿ ಸಂಪೂರ್ಣವಾಗಿ ಇಂಟರ್‌ಫಿಯರ್ ಆಗಿದ್ದಾರೆ. ಮಾನ್ಯ ನಾಗಪ್ಪನವರು ನನ್ನ ಒಳ್ಳೆಯ ಸ್ನೇಹಿತರು. ಅವರಿ ಅನುಕೂಲ ಆಗಬೇಕು ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನೀವು ಭದ್ರವಾಗಿ ಐದುವರ್ಷ ಕಾಲ ಇಲ್ಲಿ ಕುಳಿತುಕೊಳ್ಳಿ ಎಂದು ನಾನು ಹೇಳುತ್ತಿದ್ದೇನೆ.

ಡಾ: ವೈ ನಾಗಪ್ಪ: ನಾವು ಐದುವರ್ಷ ಇದ್ದೇ ಇರುತ್ತೇವೆ. ಇದರಲ್ಲಿ ಯಾವ ರೀತಿಯಾದ ಅನುಮಾನ ಬೇಡ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಅವರು ನನ್ನ ಒಳ್ಳೆಯ ಸ್ನೇಹಿತರು. ಇವತ್ತು ಇಡೀ ಕಾಂಗ್ರೆಸ್ ಪಕ್ಷದಲ್ಲಿ ಒಂದು ಕಾನ್‌ಸ್ಪಿರೆಸಿ ಇದೆ. I am repeating this. There is bound to be differences and that is going to effect the poor people of this State.

ಅಧ್ಯಕ್ಷರು: ಪಾರ್ಟಿ ವಿಷಯ ಇಲ್ಲಿ ಏಕೆ ಹೇಳುತ್ತಿದ್ದೀರಿ?

ಶ್ರೀ ವಿಜಯಕುಮಾರ ಶೆಟ್ಟಿ: ತಾವೇ ಕಾನ್‌ಸ್ಪಿರೆಸಿ ಮಾಡಿ ಯಾವ ಗತಿ ಮುಟ್ಟಿದ್ದೀರೆಂದು ರಾಜ್ಯದ ಜನತೆಗೆ ತೋರಿಸಿಕೊಟ್ಟಿದ್ದೀರಿ.

ಶ್ರೀ ಎಂ.ಚಂದ್ರಪ್ಪ: ಕುಂಬಳಕಾಯಿ ಕಳ್ಳ ಎಂದರೆ ಏಕೆ ಹೆಗಲುಮುಟ್ಟಿ ನೋಡಿಕೊಳ್ಳುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು: ಪಾರ್ಟಿ ವಿಷಯವನ್ನು ದಯವಿಟ್ಟು ಇಲ್ಲಿ ಹೇಳಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ: ಸಿಂಧ್ಯಾರವರೇ, ನಿಮ್ಮ ಮಾತಿನ ಧಾಟಿ ಬೇರೆ ಕಡೆಗೆ ಹೋಗುತ್ತಿದೆ. ಇದೇ ಚಿಂತಾಮಣಿಯ ಹಳ್ಳಿಯೊಂದರಲ್ಲಿ ಇನ್ನೊಬ್ಬನ ಕೊಲೆಯಾಯಿತು. ಹಾಗಾದರೆ ನಿಮ್ಮ ಅಧಿಕಾರ ಅವಧಿಯಲ್ಲಿ ಇದೆಲ್ಲ ನಡೆದಿಲ್ಲವೇನು?

ಅಧ್ಯಕ್ಷರು: ಚರ್ಚೆ ಬಹಳ ಗಂಭೀರವಾಗಿ ನಡೆಯುತ್ತಿತ್ತು. ನೀವು ಪಾರ್ಟಿವಿಷಯವನ್ನು ಎತ್ತಿದ್ದಕ್ಕೆ ಎಲ್ಲರಿಗೂ ಕೋಪ ಬಂದಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅವರಿಗೆ ನಾನು ಏನು ಹೇಳುತ್ತಿದ್ದೇನೆ ಎಂದರೆ, ಅವರು ನಮ್ಮ ಸ್ನೇಹಿತರು. ಮೊದಲು ನಮ್ಮ ಪಾರ್ಟಿಯಲ್ಲಿ ಇದ್ದರು. ಹೊಸದಾಗಿ ಈಗ ಆ ಪಾರ್ಟಿಗೆ ಹೋಗಿದ್ದಾರೆ.

(ಗೊಂದಲ)

ಅಧ್ಯಕ್ಷರು: ಸಿಂಧ್ಯಾರವರೇ, ನೀವು ಮುಂದುವರೆಸಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ವಿಷಯದ ಗಂಭೀರತೆಯನ್ನು.....

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಸಿಂಧ್ಯಾರವರೇ, ಆಡಳಿತವನ್ನು ಹೊಲಸು ಮಾಡಿದವರು ತಾವು. ಅದನ್ನು ನಾವು ಈಗ ಸರಿಮಾಡುತ್ತಿದ್ದೇವೆ.

Mr. Speaker: I have not allowed you to talk. ನಿಮ್ಮಿಷ್ಟಕ್ಕೆ ನೀವು ಮಾತನಾಡಿದರೆ ಅದು ಸರಿಹೋಗುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಬಿ.ಆರ್.ನೀಲಕಂಠಪ್ಪನವರು ನನ್ನ ಸ್ನೇಹಿತರು. ಈಗ ಅವರು ಹೊಸದಾಗಿ ಕಾಂಗ್ರೆಸ್‌ಗೆ ಹೋಗಿರುವುದರಿಂದ he should be more loyal than the king himself. ಆದ್ದರಿಂದ ಅವರ ಮಾತನಾಡುತ್ತಿದ್ದಾರೆ, ಅವರು ಮಾತನಾಡಲಿ. ಅವರಿಗೆ ಬಹಳ ಆಸೆ ಇದೆ ಮುಂದಿನ ಬೆಂಚ್‌ಗೆ ಬರಬೇಕು ಎಂದು.

ಅಧ್ಯಕ್ಷರು: ನೀವು ಮುಂದುವರೆಸಿ. ಕಾಲ ಬಹಳ ಕಡಿಮೆ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಪಕ್ಷದ ವಿಚಾರ ಏನೂ ಮಾತನಾಡುವುದಿಲ್ಲ. ನಾನು ಏನು ಹೇಳಿದೆಯೆಂದರೆ ಅವರು ನಮ್ಮ ಜತೆಯಲ್ಲಿ ಇದ್ದರು. ನನ್ನ ಒಳ್ಳೆಯ ಸ್ನೇಹಿತರು ಕೂಡ. 30 ವರ್ಷಗಳು ನಮ್ಮ ಜತೆಯಲ್ಲಿದ್ದುಕೊಂಡು ಹೋರಾಟ ಮಾಡಿದರು. ಈಗ ಆಕಸ್ಮಿಕವಾಗಿ ಆ ಕಡೆಗೆ ಹೋಗಿದ್ದಾರೆ. ಆದ್ದರಿಂದ ಅವರು ಡಿಫೆಂಡ್ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ he should be more loyal than the king.

MR.SPEAKER: Please do not yield to other members ನೀವು ನನ್ನ ಕಡೆಗೆ ನೋಡಿ ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಇವತ್ತು ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಪಾರ್ಟಿ ಹೆಸರುಗಳಿಸಿರತಕ್ಕಂತಹದ್ದು ನಿಜ. I stand by that. I don't go back. ಕರ್ನಾಟಕದ ಮಟ್ಟಿಗೆ ಆಡಳಿತ ಪಕ್ಷ ಎಂದು ಹೇಳೋಣ. ಕಾಂಗ್ರೆಸ್ ಎಂದು ಹೇಳಿದ ತಕ್ಷಣ ನಮ್ಮ ಸ್ನೇಹಿತರಿಗೆ ಕೋಪ ಬರುವುದಾದರೆ ಕರ್ನಾಟಕದ ಆಡಳಿತ ಪಕ್ಷದ ಎಂದು ಹೇಳೋಣ. ನಿನ್ನೆ ಮುಖ್ಯಮಂತ್ರಿಗಳು ದಿವಂಗತ ಮಲ್ಲಣ್ಣನವರಿಗೆ ಸಂತಾಪ ಸೂಚನೆ ಮಾಡತಕ್ಕ ಸಂದರ್ಭದಲ್ಲಿ, ನಿಮಗೆ ರಾಜ್ಯಸಭೆ ಟಿಕೆಟ್ ಬೇಕಾದರೆ ದಯಪಿಟ್ಟು ಡೆಲ್ಲಿಗೆ ಹೋಗಿ ಎಂದು ಹೇಳಿದೆಯೆಂದು ಅವರೇ ಹೇಳಿದರು. ಅದಕ್ಕೆ ನಾನು ಹೇಳುತ್ತಾ ಇದ್ದೆ. ಆಡಳಿತ ಪಕ್ಷಕ್ಕೆ ಇವತ್ತು ಕೆಟ್ಟ ಹೆಸರು ಬಂದಿರುವುದು ಅಷ್ಟೇ ಅಲ್ಲ. ಕರ್ನಾಟಕದಲ್ಲಿ ಬಿಟ್ಟು, ಇಡೀ ದಕ್ಷಿಣ ಭಾರತದಲ್ಲಿ ಎಲ್ಲಾದರೂ ಇಂತಹ ಘಟನೆ ನಡೆದಿದೆಯೇ? ಅಂಥಾದ್ದು ಇದ್ದರೆ ತಾವು ಕೋಟ್ ಮಾಡಿ. ಮತ್ತೆ ನೀವು ಅಧಿಕಾರದಲ್ಲಿ ಉಳಿಯಬೇಕೆಂದು ಹೇಳುತ್ತೀರಿ. ಅಧಿಕಾರದಲ್ಲಿ ಏಕೆ ಉಳಿಯಬೇಕೆಂಬುದನ್ನು ನಿಮ್ಮ ಆತ್ಮಕ್ಕೆ ನೀವೇ ಪ್ರಶ್ನೆ ಹಾಕಿ ಕೊಳ್ಳಿ. ಯಾವ ವರ್ಗದ ಜನರು, ಯಾವ ಬಡವರು, ಯಾವ ಹಿಂದುಳಿದವರು ನಿಮಗೆ ಅಧಿಕಾರ ಕೊಟ್ಟಿದ್ದಾರೋ ಅಂತಹವರ ರಕ್ಷಣೆ ಮಾಡದೇ ಹೋದರೆ, ನೀವು ಏತಕ್ಕೋಸ್ಕರ ಅಧಿಕಾರದಲ್ಲಿ ಇರುತ್ತೀರಿ? ನೀವು ಹತ್ತಾರು ವರ್ಷಗಳ ಕಾಲ ಅಧಿಕಾರ ಅನುಭವಿಸಿದವರು. ಕಳೆದ ಆರು ತಿಂಗಳಿಂದ ಜನರಿಗೆ ಮೋಸ ಮಾಡಿದ್ದೀರಿ. ಇದನ್ನು ನೀವು ಯಾವಾಗ ಸರಿಮಾಡಿಕೊಳ್ಳುವುದು? ಇದು ನನಗೆ ಅರ್ಥವಾಗುತ್ತಾ ಇಲ್ಲ. ಇದರಿಂದಾಗಿ ಕರ್ನಾಟಕದಲ್ಲಿ ಪಿ.ಡಬ್ಲ್ಯು.ಜಿ. ನಕ್ಸ್ಲೈಟ್, ರಣಬೀರ್ ಸೇನೆ ಇಂತಹ ಸಂಸ್ಥೆಗಳು ಹುಟ್ಟಬಾರದು. ಈ ಸರ್ಕಾರದವರು ಹರಿಜನ ಗಿರಿಜನರು, ಬಡವರು, ದುರ್ಬಲ ವರ್ಗದವರ ಹೆಸರನ್ನು ಹೇಳಿ ಅಧಿಕಾರಕ್ಕೆ ಬಂದು, ಇವತ್ತು ಅವರಿಗೆ ಮೋಸ ಮಾಡಿದ್ದಾರೆ, ವಂಚನೆ ಮಾಡಿದ್ದಾರೆ. ಇವರ ರಕ್ಷಣೆ ಮಾಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ನಮ್ಮ ಸ್ನೇಹಿತರಾಗಿದ್ದ ಆಸ್ನೋಟಿಕರ್ ಇವತ್ತು ನಮ್ಮ ಜೊತೆಯಲ್ಲಿ

ಇಲ್ಲ, ಪಾಪ ಅವರು ಸತ್ತರು. ಅವರು ಯಾವ ಕಾರಣದಿಂದ ಸತ್ತರು, ಇದನ್ನು ನಾನು ಸೋಮವಾರ ಮಾತನಾಡುವಾಗ ಹೇಳುತ್ತೇನೆ. ಇದರ ಬಗ್ಗೆ ಸರ್ಕಾರ ವಿಚಾರ ಮಾಡುವುದಕ್ಕೆ ತಯಾರಿಲ್ಲ. What are the circumstances which have led to his murder? What are the circumstances which have led to the assassination, brutal killing of these 7 persons? ಇದನ್ನು ನಾವು ವಿಶ್ಲೇಷಣೆ ಮಾಡಬೇಕು. ಸತ್ತರೆ ದುಡ್ಡು ಕೊಡುವುದು, ಪುನರ್ ವಸತಿ ಮಾಡುವುದು ಬೇರೆ. ಆದರೆ ಉಪಯೋಗ ಏನಾಯಿತು? ನ್ಯಾಯಾಂಗ ವಿಚಾರಣೆ ಮಾಡಿ, ವರದಿಯನ್ನು ತೆಗೆದುಕೊಂಡು ಸುಡಿ, ಅದನ್ನು ಏನು ಮಾಡುತ್ತೀರಿ? ಅದರಿಂದ ಏನೂ ಉಪಯೋಗವಾಗುವುದಿಲ್ಲ. ಅದಕ್ಕೋಸ್ಕರವಾಗಿ ನಾವು ಇವತ್ತು ಕೇಳುತ್ತಿದ್ದೇವೆ. ನ್ಯಾಯಾಂಗ ವಿಚಾರಣಾ ವರದಿ ಬರುವುದು ಎರಡು ಮೂರು ವರ್ಷಗಳಾಗುತ್ತವೆ. ಅಂದರೆ ನಮ್ಮ ಸಮಾಜ ಆ ರೀತಿ ಇದೆ. ಸಾಕ್ಷಿಗಳು ಯಾರೂ ಮುಂದೆ ಬರುವುದಿಲ್ಲ. ನೀವು ಜಿಲ್ಲಾ ಉಸ್ತುವಾರಿ ಮಂತ್ರಿ ಮಾಡಿದ್ದೀರಿ, ಅವರೂ ಕೂಡ ದಿಗ್ಭ್ರಾಂತಿಯಾಗಿದ್ದಾರೆ. ಇನ್ನೊಬ್ಬರು ಆಡಳಿತ ಪಕ್ಷದ ಮುಖಂಡರು ಮೂಕರಾಗಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಏನೂ ತೋಚುತ್ತಾ ಇಲ್ಲ. ಅಂದರೆ, ಇದರ ಅರ್ಥ ಏನು, ಇದರ ನಿಗೂಢತೆ ಏನು? ಆರು ಸಾರಿ ಸಸ್ಪೆಂಡ್ ಆಗಿದ್ದ ಸಬ್ ಇನ್‌ಸ್ಪೆಕ್ಟರನ್ನು ಅಲ್ಲಿಗೆ ಪೋಸ್ಟ್ ಮಾಡುವುದಕ್ಕೆ ಡಿ.ಜಿ.ಪಿ. ಕಾರಣವೇ? ಯಾರು ಕಾರಣ? ಯಾರು ಕಾಗದ ಬರೆದಿದ್ದರು. ಯಾರ ಒತ್ತಡದ ಮೇಲೆ ಅವರನ್ನು ಅಲ್ಲಿಗೆ ಹಾಕಿದ್ದೀರಿ? ಎಸ್.ಪಿ. ರಜೆ ಮೇಲೆ ಇದ್ದಾರೆ. ಇದಕ್ಕೆಲ್ಲಾ ಹೋಮ್ ಸೆಕ್ರಟರಿ ಅಥವಾ ಡಿ.ಜಿ.ಪಿ. ಕಾರಣರೇ? ಅಂದರೆ, ಯಾವರೀತಿ ಅಡ್ಮಿನಿಸ್ಟ್ರೇಷನ್ ರನ್ ಆಗುತ್ತಿದೆ ಎಂದು ಗೊತ್ತಾಗುತ್ತದೆ. ಅದಕ್ಕೋಸ್ಕರವಾಗಿ ಇದು ಸಿ.ಬಿ.ಐ. ತನಿಖೆಯಾಗಬೇಕು. ಏಕೆ ಆಗಬೇಕೆಂದು ಹೇಳಿದರೆ, you have totally demoralised and you want to politicise the police administration. That is the reason. ಅದಕ್ಕೋಸ್ಕರ ಸಿ.ಬಿ.ಐ. ವಿಚಾರಣೆಯಾಗಬೇಕೆಂದು ನಾವು ಕೇಳುತ್ತಿದ್ದೇವೆ. ಇದು ಒಂದಾದರೆ, ಇನ್ನೊಂದು ಸಿ.ಆರ್.ಇ.ಸೆಲ್ ಇದೆ. ಈ ಸಿ.ಆರ್.ಇ. ಸೆಲ್‌ನ್ನು ಯಾವರೀತಿ ಶಕ್ತಿಯುತವಾಗಿ ಮಾಡಬೇಕು? ನಮ್ಮಲ್ಲಿ ಬಹಳ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಒಳ್ಳೆಯ ಸಲಹೆಗಳನ್ನು ಕೊಡುತ್ತಾರೆ. ಆದರೆ, ಆ ಸಲಹೆಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ಅಂದರೆ ನಮ್ಮ ಆಡಳಿತದ ವ್ಯವಸ್ಥೆ ಆ ರೀತಿ ಇದೆ. ಅದಕ್ಕಾಗಿ ಸಮಾಜದಲ್ಲಿ ಇಂತಹ ಶಕ್ತಿಗಳನ್ನು ಸಂಪೂರ್ಣವಾಗಿ ದಮನ ಮಾಡುವುದಕ್ಕೆ ಸರ್ಕಾರದವರು ವಿಚಾರ ಮಾಡಬೇಕು. ಇವತ್ತು ಅಸ್ಪೃಶ್ಯರು ಯಾರ ಹತ್ತಿರ ಹೋಗುತ್ತಾರೆ. ಬಸವಣ್ಣನವರು,ಬುದ್ಧ ಮತ್ತು ಅಂಬೇಡ್ಕರ್‌ರವರುಗಳು ಏನು ಹೇಳಿದರೋ ಆ ಎಲ್ಲಾ ವಿಚಾರಗಳನ್ನೂ ನಾವು ಮರೆತಿದ್ದೇವೆ. ಇವತ್ತು ಆ ಕರಕಲ ದೇಹಗಳನ್ನು ನೋಡಿದಾಗ ಈ ವ್ಯವಸ್ಥೆ ಏಕೆ ಬೇಕೆಂದು ಅನಿಸುತ್ತದೆ. ಈ ವ್ಯವಸ್ಥೆಯನ್ನು

ನಾವು, ನೀವು ಸೇರಿ ಸರಿ ಮಾಡಬೇಕು. ನಮ್ಮ ಅಧ್ಯಕ್ಷರು, ಮುಖ್ಯಮಂತ್ರಿಗಳು ಕೇಳಿದಾಗ ಈಗಾಗಲೇ ಹೇಳಿದ್ದಾರೆ. ಸರ್ಕಾರಕ್ಕೆ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ನಾವು ಸಹಕಾರ ಕೊಡುತ್ತೇವೆ ಕರ್ನಾಟಕದಲ್ಲಿ ಸೂಕ್ಷ್ಮವಾದ ಜಿಲ್ಲೆಗಳನ್ನು ಗುರುತು ಮಾಡಬೇಕು. ಇದರಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರ ಪಾತ್ರ ಬಹಳ ದೊಡ್ಡದಿದೆ. ಸಮಾಜ ಕಲ್ಯಾಣ ಇಲಾಖೆಯ ಕಾರ್ಯಗಳನ್ನು ಸರಿಯಾಗಿ ಮಾಡಬೇಕು. ಹೋಮ್ ಡಿಪಾರ್ಟ್‌ಮೆಂಟ್ ಮತ್ತು ಸಮಾಜಕಲ್ಯಾಣ ಇಲಾಖೆಯಲ್ಲಿ ಸಹಕಾರ ಇರಬೇಕು. ಈ ಘಟನೆಗಳನ್ನು ಪ್ರಿವೆಂಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕಾಗಿ ನ್ನದೊಂದು ಡಿಮ್ಯಾಂಡ್ ಇದೆ. ಒಂದು ಪರ್ಮನೆಂಟ್ ಕಮೀಷನ್ ಮಾಡಬೇಕು. ಈ ಕಮಿಷನ್ ರಾಜ್ಯದಲ್ಲಿ ಈ ರೀತಿ ಎಲ್ಲೆಲ್ಲಿ ಇದೆ ಎಂಬುದನ್ನು ನೋಡಬೇಕು. ಕೋಲಾರ ಜಿಲ್ಲೆಯಲ್ಲಿ ಸತ್ತಿರತಕ್ಕ ಕೃಷ್ಣಾರೆಡ್ಡಿ ಒಬ್ಬರೇ ಅಲ್ಲ. ಅವನೇನೂ ಸಾಹುಕಾರ ಅಲ್ಲ. ಅವನೊಬ್ಬ ನೀರು ಬಿಡುವ ಕೆಲಸ ಮಾಡಿಕೊಂಡಿದ್ದು, ಇನ್ನೂರು ರೂಪಾಯಿಗಳ ಸಂಬಳ ತೆಗೆದುಕೊಂಡು ಕಾಲ ಕಳೆಯುತ್ತಿದ್ದ ವ್ಯಕ್ತಿ. ಅವರನ್ನು ಮರ್ಡರ್ ಮಾಡಿದ್ದಾರೆ. ಸಮಾಜದಲ್ಲಿರತಕ್ಕ ಭಾವನೆಗಳನ್ನು ಸರಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು, ಯಾವರೀತಿ ಸರಿ ಮಾಡಬೇಕು ಎಂಬುದರ ಚಿಂತನೆ ಆಗಬೇಕು. ಮಾತುಕತೆ ಮೂಲಕ, ಸಮಾಜದಲ್ಲಿ ಏನು ಸಮಸ್ಯೆಗಳಿವೆ, ಅವುಗಳನ್ನು ಗುರುತು ಮಾಡುವುದಕ್ಕೆ ಕ್ರಮ ತೆಗೆದು ಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಬಾಕಿ ವಿಚಾರಗಳನ್ನು ಮುಖ್ಯಮಂತ್ರಿಗಳು ಮತ್ತು ನಿಮ್ಮ ನೈತಿಕತೆಗೆ ಬಿಡುತ್ತೇನೆ. ನಾವು ಅಧಿಕಾರದಲ್ಲಿರುವಾಗ 6 ಜ ಸತ್ತಿದ್ದಾರೆ, ನಿಮ್ಮ ಕಾಲದಲ್ಲೂ ಇದು ನಡೆಯುತ್ತಿತ್ತು, ಇನ್ನೂ 18 ಜನ ಸಾಯಲಿ. ನಮಗೆ 5 ವರ್ಷ ಅಧಿಕಾರ ಕೊಟ್ಟಿದ್ದಾರೆ, ನಾವು ನಡೆಸಿಕೊಂಡು ಹೋಗುತ್ತೇವೆಂದು ಹೇಳಿದರೆ ನಮ್ಮದೇನೂ ತಕರಾರು ಇಲ್ಲ ಆದರೆ, ನೈತಿಕತೆ ಪ್ರಶ್ನೆ ಮಾಡಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ವಿಶ್ವಾಸಕ್ಕೆ ತೆಗೆದುಕೊಂಡಿದ್ದರೆ ಇಂತಹ ಘಟನೆಗಳು ಆಗುವುದಕ್ಕೆ ಸಾಧ್ಯವಿರಲಿಲ್ಲ. There is a difference. ಅದಕ್ಕೋಸ್ಕರ, ಪೋಲೀಸ್ ಇಲಾಖೆ ಡಿ-ಮಾರಲೈಸ್ ಆಗಿದೆ. ಎಸ್.ಪಿ., ಅಡಿಷನಲ್ ಎಸ್.ಪಿ.ಯವರನ್ನು ವರ್ಗಾವಣೆ ಮಾಡಿದ್ದಾರೆ. ಇದರಿಂದ ಏನು ಉಪಯೋಗ? ಆಗಿರತಕ್ಕ ಘಟನೆ ಆಗಿಹೋಗಿದೆ. ನಿಮ್ಮಿಬ್ಬರಲ್ಲಿರತಕ್ಕ ವ್ಯತ್ಯಾಸಗಳನ್ನು ಸರಿ ಮಾಡಿಕೊಳ್ಳಿ. ಇದು ಬಹಳ ಮುಖ್ಯವಾದ ವಿಚಾರ. ಏಕೆಂದರೆ ಜನ ಕೇಳುತ್ತಾರೆ, ಏಕೆ ಈ ಸರ್ಕಾರದಲ್ಲಿ ಇಷ್ಟೆಲ್ಲಾ ಮಾತನಾಡಿದರೂ ಖರ್ಗೆಯವರನ್ನು ಉಪ ಮುಖ್ಯಮಂತ್ರಿ ಮಾಡಲಿಲ್ಲ ಎಂದು. ಮಾನ್ಯ ವೀರಪ್ಪ ಮೊಯ್ಲಿಯವರು ಇದ್ದಾಗ, ಅವರೇ ಉಪಮುಖ್ಯಮಂತ್ರಿ ಇದ್ದರೆಂದು ಪ್ರಶ್ನೆ ಮಾಡುತ್ತಾರೆ. ಅದರಿಂದಾಗಿ ಈ ವಿಚಾರವನ್ನು ಹೇಳಿದ್ದೇನೆ. ತಾವು ನ್ಯಾಯಾಂಗ ತನಿಖೆಗೆ ಆದೇಶ ಮಾಡಿದ್ದೀರಿ. ಇದನ್ನು ಮುಂದುವರಿಸಿಕೊಂಡು ಹೋಗಬೇಕು. ಆದರೆ, ಸಿ.ಬಿ.ಐ. ವಿಚಾರಣೆಯನ್ನು ಒಂದು

ಲಿಮಿಟೆಡ್ ಪರ್ಪಸ್‌ಗೆ ಮಾಡಿ, ವಿಚಾರಣೆ ಮಾಡಲೇ ಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ನೀವು ಮಾಡಿರತಕ್ಕ ಭಾಷಣಗಳನ್ನು ನಾನು ಓದುವುದಕ್ಕೆ ಪ್ರಾರಂಭ ಮಾಡಿದ್ದೇನೆ. ನಾವೇನಾದರೂ ಈ ಸಂದರ್ಭದಲ್ಲಿ ಆಡಳಿತದಲ್ಲಿ ಇದ್ದರೆ ಇಷ್ಟುಹೊತ್ತಿಗೆ ನಮ್ಮನ್ನು ಬಾಣಲಿಯಲ್ಲಿ ಹಾಕಿ ಹುರಿದು ಬಿಡುತ್ತಿದ್ದಿರಿ. ನಾವು ಕೇವಲ 12 ವರ್ಷಗಳ ಕಾಲ ಸರ್ಕಾರವನ್ನು ನಡೆಸಿದಂತಹವರು. ಆದರೂ ಕೂಡ ನಿಮ್ಮಹಾಗೆ ನಡೆದುಕೊಳ್ಳುವುದಕ್ಕೆ ತಯಾರಿಲ್ಲ. ನಾವು ಮಾತಾನಾಡುವಾಗ ತೂಕ ಮಾಡಿ, ಇದು ಸರಿಯೋ, ತಪ್ಪೋ ಎಂದು ವಿಚಾರ ಮಾಡುತ್ತೇವೆ. ಈ ರೀತಿಯ ಘಟನೆಗಳು ಆಗದಿರುವುದಕ್ಕೆ ಈ ಸದನದ ಎಲ್ಲಾ ಸದಸ್ಯರು ಮತ್ತು ಈ ರಾಜ್ಯದ ಎಲ್ಲಾ ಮುಖಂಡರುಗಳು ವಿಚಾರ ಮಾಡಬೇಕಾಗುತ್ತದೆ.

12.40 ಪಿ.ಎಂ

ಯಾರು ನಿಮಗೆ ಮತವನ್ನು ಕೊಟ್ಟರು, ಅವರ ಕೊಲೆಯಾಗಿದೆ. ಕೊಲೆ ಮಾಡಿದವರ ಬಗ್ಗೆ ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳಿ, ಆ ವರ್ಗದ ಜನರಲ್ಲಿ ಮತ್ತೆ ನಿಮ್ಮ ಮೇಲೆ ವಿಶ್ವಾಸ ಬರಬೇಕಾದರೆ ಸಿ.ಬಿ.ಐ. ವಿಚಾರಣೆಯನ್ನು ಮಾಡಿ. ಉಳಿದಿದ್ದು ಎಲ್ಲೂ ಏನೂ ಆಗಿಲ್ಲ ಎಂದು ಹೇಳಿ ತಾವು ನುಣಚಿಕೊಳ್ಳಬೇಡಿ. ಈ ರಾಷ್ಟ್ರದಲ್ಲಿ ಇಂತಹ ಘಟನೆಗಳು ಆದಾಗ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿರತಕ್ಕಂಥ ಪ್ರಸಂಗಗಳು ಇವೆ. ಶ್ರೀಮಾನ್ ರಾಮರಾಯರು ರಾಜೀನಾಮೆಯನ್ನು ಕೊಟ್ಟಿರತಕ್ಕಂಥಾದ್ದು, ಶ್ರೀ ನಿಜಲಿಂಗಪ್ಪನವರ ಕಾಲದಲ್ಲಿ. ಲಾಲ್‌ಬಹದ್ದೂರ್ ಶಾಸ್ತ್ರಿಯವರು ರಾಜೀನಾಮೆ ಕೊಟ್ಟಿರುವುದು ಇದೆ. ಆ ಬಗ್ಗೆ ನಾನು ಇಲ್ಲಿ ಮಾತನಾಡಿದರೆ ಬಹಳ ಸಣ್ಣವನಾಗುತ್ತೇನೆ. ಅವರು ಬಹಳ ದೊಡ್ಡ ವ್ಯಕ್ತಿ. ಮೊನ್ನೆ ಶ್ರೀ ನಿತೀಶ್‌ಕುಮಾರ್ ಅವರು ರಾಜೀನಾಮೆ ಕೊಟ್ಟರು. ನಾನು ಇಷ್ಟು ಹೇಳಿ ತಾವು ಯಾವುದೇ ಕಾರಣದಿಂದ ನೈತಿಕವಾಗಿ ಅಧಿಕಾರದಲ್ಲಿ ಉಳಿಯಲು ಸಾಧ್ಯವಿಲ್ಲ. ಬಿಹಾರದಲ್ಲಿ ತಾವು 24 ಜನ ಗದ್ದು, ಅವರ ಬಾಲ ಹಿಡಿದುಕೊಂಡು ಹೋಗಿದ್ದೀರಿ. ನಾನು ಈಗ ಆ ವಿಷಯವನ್ನು ಮಾತನಾಡುವುದಿಲ್ಲ. ಆ ವಿಷಯ ಮಾತನಾಡಿದರೆ ಈಗ ಈ ವಿಷಯದ ಗಂಭೀರತೆ ಹೋಗುತ್ತದೆ. ಆದ್ದರಿಂದ ಸರ್ಕಾರ ಈ ವಿಷಯವನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸಬೇಕು. ಆಡಳಿತ ಪಕ್ಷದ ಕೈಗೊಂಬೆಗಳಾಗಿ ಪೋಲಿಸಿನವರು ವರ್ತನೆ ಮಾಡತಕ್ಕಂಥಾದ್ದನ್ನು ಈ ಕ್ಷಣದಲ್ಲಾದರೂ ನಿಲ್ಲಿಸಬೇಕು. ಇಲ್ಲದಿದ್ದರೆ ಆಡಳಿತವೆ ಹಾಳಾಗಿ ಹೋಗುತ್ತದೆ. ನಾನು ಆಡಳಿತವನ್ನು ಯಾವ ರೀತಿ ನಡೆಸಿದ್ದೇವೆಂದು ತಾವು ಬೇಕಾದರೆ ಪೋಲಿಸಿನವರನ್ನು ಕೇಳಿ ಪ್ರೈವೇಟಾಗಿ. ತಮಗೇನೂ ಹೊಸದಲ್ಲ. ನಿಮಗೆ ನೈತಿಕವಾಗಿ ಅಧಿಕಾರದಲ್ಲಿ ಉಳಿಯುವುದಕ್ಕೆ. ಮಾತ್ರ ಸ್ಥೈರ್ಯ ಇಲ್ಲ ಏಕೆಂದರೆ ಯಾವ ಜನ ನಿಮಗೆ ಮತ ಕೊಟ್ಟರು, ಯಾರಿಂದ ನೀವು

ಅಧಿಕಾರವನ್ನು ಅನುಭವಿಸುತ್ತಿದ್ದೀರಾ, ಅವರ ರಕ್ಷಣೆ ಮಾಡುವುದಕ್ಕೆ ಆಗದೆ ಇರತಕ್ಕಂಥಾ ಜನ ನೀವು, ಇನ್ನು ಏನು ಗೌರವ ಇಟ್ಟುಕೊಂಡು ಅಧಿಕಾರದಲ್ಲಿ ಉಳಿಯಬೇಕು ಎನ್ನುವುದಕ್ಕೆ ಆತ್ಮವಿಮರ್ಶೆಯನ್ನು ನೀವೇ ಮಾಡಿಕೊಳ್ಳಿ. ನನ್ನ ಅಭಿಪ್ರಾಯದಲ್ಲಿ ಇಡೀ ಸರ್ಕಾರ ಅಧಿಕಾರದಲ್ಲಿ ಉಳಿಯುವುದಕ್ಕೆ ನೈತಿಕವಾದ ಸ್ಥೈರ್ಯವನ್ನು ಕಳೆದುಕೊಂಡಿದ್ದೀರಾ, ಆಡಳಿತ ಪಕ್ಷಕ್ಕೆ ಮತ್ತು ಸರ್ಕಾರಕ್ಕೆ ಕೃಷ್ಣಾರವರ ವ್ಯಕ್ತಿತ್ವಕ್ಕೆ ಕರ್ನಾಟಕ ರಾಜ್ಯಕ್ಕೆ ಶಾಶ್ವತವಾಗಿ ಕಳಂಕವನ್ನು ತರತಕ್ಕಂಥ ಕೆಲಸವನ್ನು ಇಷ್ಟು ಬೇಗ ನೀವು ಮಾಡಿದ್ದೀರಾ, ಇದು ದುರ್ದೈವ ಅಂತ ಹೇಳಿ ಈ ನಿಲುವಳಿ ಸೂಚನೆ ಮೇಲೆ ಮಾತನಾಡಿ ನನ್ನ ವಿಚಾರಗಳನ್ನು ತಮ್ಮ ಮುಂದೆ ಇಡಲು ಅವಕಾಶ ಮಾಡಿ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ತಾವು ವಿಷಯದ ಗಾಂಭೀರ್ಯತೆಯನ್ನು ಅರಿತು ಅದರ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡಿರತಕ್ಕಂಥವರು ತಾವು, ತಕ್ಷಣ ತಾವು ಅಲ್ಲಿಗೆ ಹೋಗಿದ್ದೀರಾ, ಅವರಿಗೆ ಸಾಂತ್ವನ ಹೇಳುತ್ತೀರಿ, ನಮಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ಅದಕ್ಕೆ ಮತ್ತೊಮ್ಮೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಅಧ್ಯಕ್ಷರೆ, ಈ ಸಭೆಯ ಮುಂದಿರುವ ನಿಲುವಳಿ ಸೂಚನೆಯ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿ ಕೊಟ್ಟಿದ್ದೀರಿ ಬಹಳ ಸಂತೋಷ. ಈಗಾಗಲೇ ನಮ್ಮ ವಿರೋಧಪಕ್ಷದ ನಾಯಕರು ಮಾತನಾಡಿದ್ದಾರೆ. ಮಾನ್ಯ ಸದಸ್ಯರಾದ ಸಿಂಧ್ಯಾರವರು ಮಾತನಾಡಿದ್ದಾರೆ. ಅವರು ಕೆಲವು ವಿಚಾರಗಳನ್ನು ಬಹಳ ಹೆಚ್ಚಿಗೆ ತಿಳಿದುಕೊಂಡು ನಮ್ಮ ಊರಿಗೆಲ್ಲಾ ಬಂದು, ಅಲ್ಲಿ ನೊಂದಿರತಕ್ಕಂಥ ಜನಗಳ ಬಗ್ಗೆ, ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಬಂದು ಹೇಳಿದ್ದಾರೆ. ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು.....

ಅಧ್ಯಕ್ಷರು: ಮಾನ್ಯ ಚೌಡರೆಡ್ಡಿಯವರೇ ಒಂದುನಿಮಿಷ. ಮಾತನಾಡುವವರ ಸಂಖ್ಯೆ ಜಾಸ್ತಿ ಇರುವುದರಿಂದ 2-00 ಗಂಟೆಗೆ ವಿರಾಮ ಪುನ. 3-00 ಗಂಟೆಗೆ ಸೇರಿ ಮುಂದುವರಿಸೋಣ. ಈಗ ತಾವು ಮಾತನಾಡಿ.

ಶ್ರೀ ಚೌಡರೆಡ್ಡಿ: ಮಾನ್ಯ ಗೃಹಸಚಿವರು ಬಂದಿದ್ದರು. ಆಗ ನಾನೂ ಸಹ ಅವರ ಜೊತೆಯಲ್ಲಿದ್ದೆ. ಎಲ್ಲಾ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ನೊಂದಿರುವವರಿಗೆ ಅನೇಕ ಪರಿಹಾರಗಳನ್ನು ಈಗಾಗಲೇ ತಿಳಿಸಿದ್ದಾರೆ. ಅದಕ್ಕಾಗಿ ನಾನು ನನ್ನ ಕ್ಷೇತ್ರದ ಜನರ ಪರವಾಗಿ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇಲ್ಲಿ ವಾಸ್ತವಾಂಶ ಏನು ಎನ್ನುವುದನ್ನು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ನಮ್ಮ ಮಾನ್ಯ ಸದಸ್ಯರಾದ ಸಿಂಧ್ಯಾರವರು ಹೇಳುತ್ತಿದ್ದರು. 1998ರಲ್ಲಿ ಒಬ್ಬ ವೆಂಕಟರಮಣಪ್ಪ ಎನ್ನುವವರು ಸತ್ತು ಹೋದರು ಅಂತ. ಆ ಘಟನೆ ಏಕೆ ಆಯಿತು? ಹೇಗೆ ಆಯಿತು

ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಅವರು ಸತ್ತು ಹೋಗದರು, ಕೆಲವರ ಮೇಲೆ ಕೆಲವು ಕೇಸ್‌ಗಳನ್ನು ಹಾಕಿದರು. ಅವರು ಪುನಃ ಕೋರ್ಟ್‌ಗೆ ಹೋದರು ಜಾಮೀನು ಮೇಲೆ ಬಿಡಿಸಿಕೊಂಡು ಬಂದರು. ಪುನಃ ಅದು ಏನಾಯಿತು ಎಂದು ಹೇಳಿ ಯಾರೂ ಕೂಡ ತಲೆಗೆ ಹಾಕಿಕೊಳ್ಳಲಿಲ್ಲ. ನಾನು ಸಹ ಕೆಲವು ದಿನ ಗೃಹ ಸಚಿವನಾಗಿದ್ದೆ. ಆದರೆ ನಮ್ಮ ಪ್ರಜಾಪ್ರಭುತ್ವದಲ್ಲಿ ಯಾವ ರೀತಿಯ ವ್ಯವಸ್ಥೆ ಇದೆ ಅಂದರೆ ಯಾವುದೋ ಒಂದು ಘಟನೆಯಾಗುತ್ತದೆ ಅದರ ಬಗ್ಗೆ ಪೋಲಿಸಿನವರು ಕೆಲವು ಕೇಸ್‌ಗಳನ್ನು ಹಾಕುವುದು, ಪುನಃ ಮರೆತು ಹೋಗುವುದು. ಮತ್ತೆ ಬಿಲ್ಲಾಂಡನಹಳ್ಳಿಯ ಬಗ್ಗೆ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದರು. ಇದಕ್ಕೆಲ್ಲಾ ಏನು ಕಾರಣ ಏಕೆ ಈ ಘಟನೆಗಳು ಆಗುತ್ತವೆ? ಇದನ್ನು ಯಾವ ರೀತಿ ಸರಿ ಮಾಡಬೇಕು? ಇದರಲ್ಲಿ ಸರ್ಕಾರದವರ ಜವಾಬ್ದಾರಿ ಏನು ಎನ್ನುವುದನ್ನು ನಿಜವಾಗಿಯಾ ನಾವು ಮರೆತಿದ್ದೇವೆಂದು ಹೇಳಿದರೆ ತಪ್ಪಾಗಲಾರದು. 1998ರಲ್ಲಿ ಶ್ರೀ ವೆಂಕಟರಮಣಪ್ಪನವರು ಸತ್ತಾಗ ನನಗೆ ತಿಳಿದ ಮಟ್ಟಿಗೆ ನಾನು ಶಾಸಕನಾಗಿರಲಿಲ್ಲ. ಆತ ಕೆಲವರಿಗೆ ಕುರಿಗಳನ್ನು ಮೇಯಿಸಲು ಕೊಟ್ಟಿದ್ದರು.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದರಲ್ಲಿ ಇಷ್ಟು ಕುರಿಗಳು ನಿಮಗೆ, ಇಷ್ಟು ಕುರಿಗಳು ನಮಗೆ ಎಂದು ಹೇಳಿ ಕೊಟ್ಟಿದ್ದರು. ಅವರಿಗೆ ಸೇರಬೇಕಾದ ಕುರಿಗಳನ್ನು ಆತ ಮಾರಿಕೊಂಡ ಆಗ ಅವರಿಬ್ಬರಲ್ಲಿ ವೈಷಮ್ಯ ಬೆಳೆಯಿತು ಅಂತ ಹೇಳುತ್ತಾರೆ. ಆದರೆ ಅದುವರೆಗೂ ಯಾವುದೇ ವೈಷಮ್ಯ ಇರಲಿಲ್ಲ. ನಾನು ಹಿಂದೆ 5 ವರ್ಷಗಳ ಕಾಲ ಶಾಸಕನಾಗಿದ್ದಾಗ ಆ ಹಳ್ಳಿಗೆ ಅನೇಕ ಸಲ ಭೇಟಿ ಕೊಟ್ಟಿದ್ದೇನೆ. ಆ ಊರಿನ ಮಧ್ಯೆ ಈ ಕಡೆ ಒಂದು ಕಾಲೋನಿ ಇದೆ, ಕಡೆ ಒಂದು ಕಾಲೋನಿ ಇದೆ. ಆ ಕಡೆ ಒಂದು ಕಾಲೋನಿ ಇದೆ. ಆ ಕಾಲೋನಿಯಲ್ಲಿರುವ ಮುಕ್ಕಾಲು ಭಾಗದ ಮನೆಗಳನ್ನು ನಮ್ಮ ಕಾಲದಲ್ಲಿಯೇ ಕಟ್ಟಿಸಿಕೊಟ್ಟಿದ್ದು. ಆಗ ಅವರಲ್ಲಿ ಯಾವ ತರಹದ ದ್ವೇಷ ವೈಷಮ್ಯ ಇರಲಿಲ್ಲ. 1998ರಲ್ಲಿ ಕುರಿಗಳನ್ನು ಮೇಯಿಸುತ್ತಿರುವಾಗ ಆ ಕುರಿಗಳನ್ನು ಇವರು ಮಾರಾಟ ಮಾಡಿಕೊಂಡರು ಅಂದರೆ ಸವರ್ಣೀಯರ ಕುರಿಗಳನ್ನು ಸಹ ಇವರು ಮಾರಾಟ ಮಾಡಿಕೊಂಡರು ಎನ್ನುವ ದ್ವೇಷ ಬಂದು ಅಲ್ಲಿ ಆಗ ಜಗಳ ಶುರುವಾಗಿ, ಆಗ ಒಬ್ಬರನ್ನು ಸಾಯಿಸಿಬಿಟ್ಟರು. ರಾಮಪ್ಪ ಎನ್ನುವವರ ಅಣ್ಣ ವೆಂಕಟರಮಣಪ್ಪ ಎನ್ನುವವರನ್ನು ಹರಿಜನರು ಸಾಯಿಸಿ ಬಿಟ್ಟರು. ಆಗ ಕೇಸ್‌ಗಳು ದಾಖಲಾಯಿತು ಆಮೇಲೆ ಅದು ಯಾವ ರೀತಿ ಆಯಿತು ಅಂದರೆ, ಆ ಊರಿನವರು ಆಮೇಲೆ ಯಾರಲ್ಲಿಯೂ ಸಹ ಸೇರಲಿಲ್ಲ. ಪಕ್ಕದಲ್ಲಿ ಅನೇಕ ಊರುಗಳು ಇವೆ. ಸಂಬಂಧಿಕರು ಇದ್ದಾರೆ, ನಾವು ಇದ್ದೇವೆ, ಹಿಂದೆ ಮಂತ್ರಿಗಳಾಗಿದ್ದ ಕೃಷ್ಣಾರೆಡ್ಡಿಯವರು ಇದ್ದರು, ಆದರೂ ಅವರು ಯಾರ ಜೊತೆ ಸೇರಲಿಲ್ಲ. ಅವರು

ಒಬ್ಬಂಟಿಗರಾಗಿಯೇ ಇದ್ದರು. ಅವರು ಅವರ ಊರಿಗೆ ಸಂಬಂಧಪಟ್ಟಂತೆ ಅವರ ಕಷ್ಟಗಳು ಏನು, ಅವರ ಗಲಾಟೆಗಳು ಏನು ಎನ್ನುವುದನ್ನು ಎರಡೂ ಕಡೆಯವರು ಬಹಳ ಜೋರಾಗಿ ವೈಷಮ್ಯವನ್ನು ಬೆಳೆಸಿಕೊಂಡರು. ಈ ವೆಂಕಟರಮಣಪ್ಪನವರ ತಮ್ಮ ರಾಮಪ್ಪ ಎನ್ನುವವರು ಆ ಊರು ಬಿಟ್ಟುಬಿಟ್ಟರು. ಅವರು ಸುಮಾರು ಎರಡು ವರ್ಷಗಳ ಕಾಲ ಆ ಊರಿನಲ್ಲಿ ಇರಲಿಲ್ಲ. ಅವರು ಸುಮಾರು 4 ತಿಂಗಳ ಹಿಂದೆ ಆ ಊರಿಗೆ ಹೋದರು. ಅದುವರೆಗೂ ಅವರು ಚಿಂತಾಮಣಿಯಲ್ಲಿಯೇ ಇದ್ದುಬಿಟ್ಟಿದ್ದರು. ಅವರು ಹಾಗೆಯೇ ಚಿಂತಾಮಣಿಯಲ್ಲಿಯೇ ಇದ್ದಿದ್ದರೆ ಈ ಘಟನೆಯಾಗುತ್ತಿರಲಿಲ್ಲ. ಮೊನ್ನೆ ಪಾರ್ಲಿಮೆಂಟ್ ಚುನಾವಣೆಗಿಂತ ಹಿಂದೆ ಒಂದು ಪಾರ್ಲಿಮೆಂಟ್ ಚುನಾವಣೆ ಆಯಿತು. ಆಗ ಆ ಊರಿನವರೆಲ್ಲಾ ಈ ಪಾರ್ಟಿ, ಆ ಪಾರ್ಟಿ ಅಂತ ಏನೂ ಇರಲಿಲ್ಲ. ಸವರ್ಣೀಯರು ಅವರೆಲ್ಲರೂ ಕೂಡ ಚುನಾವಣೆಯಲ್ಲಿ ಮತ ಚಲಾವಣೆಗೆ ಹೋಗಲಿಲ್ಲ. ಕಾರಣ ನಮಗೆ ರಕ್ಷಣೆ ಇಲ್ಲ, ಇಲ್ಲಿ ನಮ್ಮನ್ನು ಯಾರೂ ಕೇಳುವವರು ಇಲ್ಲ. ಅದಕ್ಕೋಸ್ಕರ ನಾವ್ಯಾರು ಮತ ಚಲಾವಣೆಗೆ ಹೋಗುವುದಿಲ್ಲ ಎಂದು ಹೇಳಿ ಅವರು ಚುನಾವಣೆಯಿಂದ ದೂರ ಉಳಿದುಬಿಟ್ಟರು. ಅವತ್ತು ಅವರು ಯಾರೂ ಮತ ಚಲಾವಣೆಗೆ ಹೋಗಲಿಲ್ಲ. ನಾನು ಅನೇಕ ಸಲ ಪ್ರಯತ್ನ ಮಾಡಿದೆ. ಆ ಊರಿನಲ್ಲಿ ಕೆಲವರು ನಮ್ಮ ಪಕ್ಷದವರು ಇದ್ದಾರೆ. ನಾನು ಅವರನ್ನು ಕರೆದು ಕೇಳಿದಾಗ ಅವರು ಹೇಳಿದರು ಸಾರ್ ದಯವಿಟ್ಟು ನೀವು ಇದಕ್ಕೆ ಕೈ ಹಾಕಬೇಡಿ, ಇದು ನಮ್ಮ ನಮ್ಮ ಮಧ್ಯೆ ಇರತಕ್ಕಂಥ ವಿಷಯ. ಊರಿನ ವಿಷಯ. ನಾವು ನಿಮ್ಮ ಹತ್ತಿರ ಯಾವ ತರಹದ ಸಹಾಯಕ್ಕೆ ಬರುವುದಿಲ್ಲವೆಂದು ಹೇಳಿದರು. ನಾನು ಮೊನ್ನೆ ಅಸೆಂಬ್ಲಿ ಚುನಾವಣೆ ಬಂದಾಗ ಸುಮ್ಮನೆ ಹೋಗಿ ಕೇಳಿದೆ. ಇಲ್ಲಾ ಸಾರ್ ತಾವು ಇಲ್ಲಿಗೆ ಬರಬೇಡಿ ಎಂದು ಹೇಳಿದರು ಆಗ ನಾನು ಸುಮ್ಮನೆ ಆದೆ. ಗ್ರಾಮ ಪಂಚಾಯತಿ ಚುನಾವಣೆ ನಡೆದಾಗ ನಾನು ಆ ಊರಿಗೆ ಹೋಗಲಿಲ್ಲ. ಈ ತರಹ ಅವರು ಒಬ್ಬಂಟಿಗರಾಗಿಯೇ ಇದ್ದುಬಿಟ್ಟರು. ಆ ಊರಿನ ವಿಷಯವಾಗಿ ಸವರ್ಣೀಯರೆಲ್ಲರೂ ಒಂದಾದರು. ಇವರೆಲ್ಲರೂ ಒಂದು ಕಡೆ ಇದ್ದರು. ಈ ರೀತಿಯಾಗಿ ಈ ಒಂದು ದುರ್ಘಟನೆ ಸಂಭವವಾಗಿದೆ. ಇನ್ನೊಂದು ವಿಷಯ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಬಟ್ಲಹಳ್ಳಿ, ಒಂದು ಕಡೆ ಇನ್ನೊಂದು ಕಡೆ ಚಿಲಕಲನೆಲಪು ಅದು ಬಾರ್ಡರ್ ಏರಿಯಾ. ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿದೆ. ಅಲ್ಲಿ ಬಹಳ ದುರ್ಘಟನೆಗಳು ಯಾವ ರೀತಿ ಆಗುತ್ತವೆಂದರೆ ಅದನ್ನು ನಾವು ಊಹೆ ಮಾಡುವುದಕ್ಕೆ ಆಗುವುದಿಲ್ಲ. ಅವರು ಚನ್ನಾಗಿಯೇ ಇರುತ್ತಾರೆ. ಇದ್ದಕಿದ್ದಂತೆ ಜಗಳವಾಡಿ ವಿಪರೀತವಾಗಿ ಹೊಡೆದಾಡಿಕೊಳ್ಳುತ್ತಾರೆ. ನಾನು ತಮಗೆ ಹೇಳುವುದಾದರೆ ಈ 5 ವರ್ಷಗಳಿಂದ ಹೆಚ್ಚಿನ ಘಟನೆಗಳು ಆ ಏರಿಯಾದಲ್ಲಿ ಆಗಿವೆ. ಕಳೆದ ಎರಡು ವರ್ಷಗಳ ಹಿಂದೆ ಎನಮಲಪಾಡಿಯಲ್ಲಿ ಒಬ್ಬ ಹೆಂಗಸನ್ನು ಅಮಾನುಷವಾದ ರೀತಿಯಲ್ಲಿ ಕೊಲೆ ಮಾಡಿದರು. ಅದರ ಬಗ್ಗೆ ನಾವು ಅನೇಕ ಸಲ ಹೋರಾಟ ಮಾಡಿದೆವು. ಅದಾದ ಮೇಲೆ

ಬಿಲ್ಲಾಂಡನಹಳ್ಳಿ ಘಟನೆ. ಇದನ್ನೆಲ್ಲಾ ನಾವು ಸೂಕ್ಷ್ಮವಾಗಿ ನೋಡಿಕೊಂಡು ಇಂತಹ ಏರಿಯಾದಲ್ಲಿ ಒಂದು ಪೋಲಿಸ್ ಠಾಣೆಯನ್ನು ಮಾಡಬೇಕೆಂದು ನಾನು ಅನೇಕ ಸಲ ಪ್ರಯತ್ನ ಮಾಡಿದೆ, ನಾನು ಗೃಹ ಮಂತ್ರಿಯಾಗಿದ್ದಾಗ ಸಹ ಪ್ರಯತ್ನ ಮಾಡಿದೆ ಆದರೂ ಇದುವರೆಗೂ ಆಗಲಿಲ್ಲ. ಅಲ್ಲಿ ಒಂದು ಪೋಲಿಸ್ ಠಾಣೆ ಆಗಿದ್ದರೆ ಇಂತಹ ದುರ್ಘಟನೆಯನ್ನು ತಪ್ಪಿಸಬಹುದಿತ್ತು. ಆ ಗ್ರಾಮಕ್ಕೆ ಕಂಬಾರಲಪಲ್ಲಿ ಪೋಲಿಸ್ ಠಾಣೆ ಸುಮಾಮರು 40 ಕಿಲೋಮಿಟರ್ ದೂರದಲ್ಲಿದೆ. ಅದು ಬಹಳ ಸೂಕ್ಷ್ಮವಾದಂತಹ ಏರಿಯಾ. ಅಲ್ಲಿ ಸರಿಯಾದ ಪೋಲೀಸ್ ಸಬ್ ಇನ್ಸ್‌ಪೆಕ್ಟ್‌ರ್‌ನ್ನು ಹಾಕಬೇಕಾದಂಥಾದ್ದು ಬಹಳ ಮುಖ್ಯವಾದುದ್ದು. ಎಂದು ನಾನು ಒಂದು ಸಂದರ್ಭದಲ್ಲಿ ನಮ್ಮ ಗೃಹ ಮಂತ್ರಿಗಳಿಗೆ ತಿಳಿಸಿದ್ದೆ. ಏಕೆಂದರೆ ಈ ವೆಂಕಟರಮಣಪ್ಪ ಎನ್ನುವವರನ್ನು ಕಳೆದ ಎರಡು ತಿಂಗಳ ಹಿಂದೆ ಅಲ್ಲಿಗೆ ಪೋಸ್ಟ್ ಮಾಡಿದರು. ಯಾರ ಒಂದು ಒತ್ತಡದಿಂದ ಅಂದರೆ ಮಾನ್ಯ ಸಚಿವರಾದ ವಿ.ಮುನಿಯಪ್ಪನವರು, ಅವರು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿದ್ದಾರೆ. ಅವರು 26-10-1999ರಂದು ಒಂದು ಪತ್ರವನ್ನು ಬರೆದು ಈ ವೆಂಕಟರಮಣಪ್ಪನವರನ್ನು ಅಲ್ಲಿಗೆ ಹಾಕಿ ಎಂದು ಕೇಳಿಕೊಂಡಿದ್ದರಂತೆ. ನನಗೆ ಆದು ಆ ಮೇಲೆ ಗೊತ್ತಾಯಿತು. ಹೀಗೆ ಅವರನ್ನು ಅಲ್ಲಿಗೆ ಟ್ರಾನ್ಸ್‌ಫರ್ ಮಾಡಿ ಹಾಕಿದಾಗ ನಾನು ಮಂತ್ರಿಯವರನ್ನು ಭೇಟಿ ಮಾಡಿ ಹೇಳಿದೆ. ಅವರು ನಮ್ಮ ತಾಲ್ಲೂಕಿನವರು ಅಲ್ಲದೇ ಪ್ರಮೋಟಿ. ನಮ್ಮದು ಬಹಳ ಸೂಕ್ಷ್ಮ ಪ್ರದೇಶ. ಈ ಪೋಲೀಸ್ ಸ್ಟೇಶನ್ ವ್ಯಾಪ್ತಿಯಲ್ಲಿಯೇ ಅವರು ಹುಟ್ಟಿದ ಊರು ಇರುವುದು. ಅವರು ಮದುವೆ ಮಾಡಿಕೊಂಡಿರುವುದು ಕೂಡ ಆ ಪ್ರದೇಶದವರನ್ನೇ. ಆದ್ದರಿಂದ ಈ ಎಲ್ಲ ವಿಷಯಗಳ ಬಗ್ಗೆ ದಯವಿಟ್ಟು ಆಲೋಚನೆ ಮಾಡಿ ಎಂದು ಹೇಳಿದೆ. ನಾನು ಹೇಳಿದ್ದನ್ನು ಕೇಳಿದ ಮಾನ್ಯ ಮಂತ್ರಿಯವರು ಹೂಂ ಅಥವಾ ಹಾಂ ಅನ್ನದೇ ಸುಮ್ಮನೆ ಇದ್ದು ಬಿಟ್ಟರು. ಅದಾದ ಎರಡು ತಿಂಗಳುಗಳಲ್ಲಿ ನಮ್ಮ ಗ್ರಾಮಗಳಲ್ಲಿ ಏನಾಗಿದೆ ಅಂದರೆ, ಅದನ್ನು ಊಹೆ ಮಾಡಲೂ ಆಗುವುದಿಲ್ಲ. ಎಷ್ಟು ಕಂಪ್ಲೈಂಟ್ಸ್ ಬಂದಿದೆ? ಎಷ್ಟು ಜನರು ನಿರ್ದಾಕ್ಷಿಣ್ಯವಾಗಿ ಅಲ್ಲಿ ಹೊಡೆಬಾಡಿದ್ದಾರೆ? ಸ್ಟೇಶನ್‌ಗೆ ಏನಾದರೂ ಕಂಪ್ಲೈಂಟ್ ಕೊಡುವುದಕ್ಕೆ ಹೋದರೆ ವೆಂಕಟರಮಣಪ್ಪ ದೂರು ಅರ್ಜಿಯನ್ನು ಹರಿದು ಬಿಸಾಕುವುದು ಇತ್ಯಾದಿ ಮಾಡುತ್ತಿದ್ದರಂತೆ. ಸಾರ್ವಜನಿಕರು ದೂರು ಕೊಟ್ಟರೆ ಸಂಬಂಧಪಟ್ಟವರು ಒಂದು ರಸೀತಿಯನ್ನು, ಅಕ್‌ನಾಲೆಡ್ಜಮೆಂಟ್‌ನ್ನು ಕೊಡುತ್ತಾರೆ. ಬಂದ ಕಂಪ್ಲೈಂಟ್‌ಗಳನ್ನು ಆನಂತರ ನೋಡಿ ಅದು ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ನೋಡಿಕೊಂಡು ಅದನ್ನು ರಿಜಿಸ್ಟರ್ ಮಾಡಿ, ಆ ಮೇಲೆ ಚಾರ್ಜ್‌ಶೀಟ್ ಹಾಕುವಾಗ ಬಿ.ರಿಪೋರ್ಟ್ ಕೊಡತಕ್ಕಂಥಾದ್ದು ಮುಂತಾಗಿ ಎಲ್ಲವನ್ನೂ ನಾನು ನೋಡಿದ್ದೇನೆ. ಆದರೆ ಈ ಊರಿನ ಸ್ಟೇಶನ್‌ನಲ್ಲಿ ಅವೆಲ್ಲವನ್ನೂ ಹರಿದು ಹಾಕಿ ಬಿಡುತ್ತಾರೆ. ಏಕೆಂದರೆ ರಾಜಕೀಯ ಅಲ್ಲಿ ಸ್ವಲ್ಪ ನಡೆಯುತ್ತಾ ಇದೆ. ನಾನು ಇಂಡಿಪೆಂಡೆಂಟ್ ಆಗಿ ಗೆದ್ದಿರತಕ್ಕಂಥ ಶಾಸಕ. ನನ್ನ ಮಾತು ಅಲ್ಲಿ ನಡೆಯ ಬಾರದು,

ನನ್ನನ್ನು ಯೂಸ್‌ಲೆಸ್ ಮಾಡಬೇಕು, ನನಗೆ ಎಲ್ಲ ರೀತಿಯಲ್ಲಿಯೂ ತೊಂದರೆಯನ್ನುಂಟು ಮಾಡಬೇಕೆಂಬ ದುರುದ್ದೇಶ ಅಲ್ಲಿನ ಕೆಲವರಲ್ಲಿದೆ. ಅದಕ್ಕೋಸ್ಕರವೇ ಆರು ಸಲ ಸಸ್ಪೆಂಡ್ ಆಗಿರುವವರನ್ನು ಆ ಸ್ಟೇಶನ್‌ಗೆ ಹಾಕಿಸಿದ್ದಾರೆ. ಯಾರು ಹಾಕಿಸಿದ್ದಾರೆಂದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲದಿದ್ದರೂ ಆ ಕುರಿತು ಸಚಿವರು ಬರೆದ ಲೆಟರ್ ನನ್ನ ಹತ್ತಿರವಿದೆ. ಏನಿದ್ದರೂ ಒಂದು ಕ್ಷೇತ್ರದಲ್ಲಿ ಒಬ್ಬರು ಕಷ್ಟಪಟ್ಟು ಕೆಲಸ ಮಾಡುವಾಗ ಅವರನ್ನು ಅವರ ಹೆಸರನ್ನು ಕೆಡಿಸಲು ಯಾರಿಂದಲೂ ಆಗುವುದಿಲ್ಲ. ಬಹುಶಃ ಅಲ್ಲಿಗೆ ಜವಾಬ್ದಾರಿಯುಳ್ಳಂಥ ಎಸ್.ಐ.ಯನ್ನು ಹಾಕಿದ್ದರೆ ಈ ಘಟನೆಯನ್ನು ತಪ್ಪಿಸ ಬಹುದಾಗಿತ್ತು ಎಂದು ನನಗನಿಸುತ್ತದೆ. ನಮ್ಮ ಈ ಪದ್ಧತಿಯಲ್ಲಿ ಏನಾಗಿದೆ ಅಂದರೆ, ಏನಾದರೂ ಒಂದು ಇನ್ಸಿಡೆಂಟ್ ಆದಾಗ ಶಾಸನಸಭೆಯಲ್ಲಿ ಬಹಳ ಹೆಚ್ಚಿನ ರೀತಿಯಲ್ಲಿ ಚರ್ಚೆ ಮಾಡಿದ ನಂತರ ಅದನ್ನು ಮರೆತು ಬಿಡುತ್ತೇವೆ. ಇಂಥ ಅನೇಕ ದುರ್ಘಟನೆಗಳನ್ನು ನಾವು ನೋಡುತ್ತಾ ಇದ್ದೇವೆ. ನಮ್ಮ ಕಾಲದಲ್ಲಿಯೂ ಕೂಡ ನಡೆದಿದೆ. ಇವೊತ್ತು ಶಾಸಕ ಅಸ್ನೋಟಿಕರ್‌ರವರ ಕೊಲೆ ವಿಚಾರ, ಹುಬ್ಬಳ್ಳಿಯಲ್ಲಿ ಮೊನ್ನೆ ನಡೆದ ಕೊಲೆ ವಿಚಾರ, ಮುಂತಾಗಿ ನಾವೆಲ್ಲರೂ ಪತ್ರಿಕೆಗಳಲ್ಲಿ ನೋಡುತ್ತಾ ಇದ್ದೇವೆ. ನಾನು ಮಂತ್ರಿಯಾಗಿದ್ದಾಗ ಕೂಡ ಅಲ್ಲಿ ಸಭೆ ಸೇರಿಸಿ, ಕಾನ್‌ಫರೆನ್ಸ ಮಾಡಿಸಿ ಇದನ್ನು ಪರಿಶೀಲಿಸಿದ್ದೆವು. ಕೆಲವರಿಗೆ ಇತರರನ್ನು ಸಾಯಿಸುವುದೇ ಒಂದು ವೃತ್ತಿ. ಕಳ್ಳತನ ಮಾಡುವುದು ಕೆಲವರಿಗೆ ವೃತ್ತಿ. ಇಂಥವರಿಗೆ ಹ್ಯಾಬಿಚ್ಯುಯಲ್ ಕ್ರೈಮರ್ಸ್ ಎಂದು ಹೇಳುತ್ತಾರೆ. ಅಂಥ ದುಷ್ಕರ್ಮಿಗಳನ್ನು ಗುರುತಿಸುವುದಕ್ಕೆ ನೀವೇನಾದರೂ ವ್ಯವಸ್ಥೆಯನ್ನು ಮಾಡಿದ್ದೀರೋ? ಎಂದು ಕೇಳಿದ್ದಕ್ಕೆ ನನ್ನ ಮುಂದೆಯೇ ಸಂಬಂಧಪಟ್ಟವರು ''ಸ್ವಾಮಿ ನಮಗೆ ಪೇಪರ್ ಸಿಗುವುದೇ ಇಲ್ಲ'' ಎಂದು ಹೇಳಿದ್ದರು. ಇದು ನಾವುಗಳು ನಾಚಿಕೆ ಪಟ್ಟುಕೊಳ್ಳ ಬೇಕಾದ ವಿಚಾರ. ಹಾಗೆಯೇ ಒಂದು ಕಡೆ ಗಲಾಟೆಯಾದರೆ ಅಲ್ಲಿಗೆ ಪೋಲೀಸ್ ಕಳುಹಿಸುತ್ತಾರೆ. ಅದನ್ನು ಬಿಟ್ಟು ಅಲ್ಲಿ ಪ್ರಾಕ್ಟಿಕಲ್ ಆಗಿ ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನಾವು ತಿಳಿದುಕೊಳ್ಳದೇ ಹೋದರೆ ನಾವು ಜನರಿಗೆ ರಕ್ಷಣೆಯನ್ನು ಕೊಡುವುದಕ್ಕೆ ಆಗುವುದೆ ಇಲ್ಲ. ಅಂಥ ಸ್ಥಳಕ್ಕೆ ಪೋಲೀಸ್ ಮುಂತಾಗಿ ಕಳುಹಿಸಿ ಕೊಡುತ್ತೇವೆ. ಅವರು ಊಟಕ್ಕೆ ಏನು ಮಾಡಬೇಕು? ಅವರು ಹೇಳಿದವರನ್ನೇ ಕೇಳ ಬೇಕು ಪುನಃ ಅವರ ಮೇಲೆ ಜಬರ್‌ದಸ್ತ್ ಮಾಡುವುದು, ಅಥವಾ ಅವರನ್ನು ಸರಿ ಮಾಡಿಕೊಳ್ಳುವುದು ಮುಂತಾಗಿ ಆಗುತ್ತದೆ. ಇದೇ ಗ್ರಾಮದಲ್ಲಿ ಮೂರು ದಿನಗಳ ಹಿಂದೆ ಗಲಾಟೆಯಾದಾಗ ಅವರು ಕಂಪ್ಲೈಂಟ್ ಕೊಟ್ಟಿದ್ದಾರೆ. ನಮಗೆ ರಕ್ಷಣೆ ಇಲ್ಲ, ನಮಗೆ ಪ್ರಾಣಭಯವಿದೆ ಎಂದು ಹೇಳಿದ ಮೇಲೆ ಇವರು ಪೋಲೀಸ್‌ರನ್ನು ಕಳುಹಿಸಿದ್ದಾರೆ. ನನಗೆ ವಿಷಯ ಆಗ ಗೊತ್ತಾಗಿದ್ದರೆ ನಾನು ಡಿಜಿಪಿ ಯವರಿಗೆ ಫೋನ್ ಮಾಡಿ ಅಲ್ಲಿ ಸರಿಯಾದ ಬಂದೋಬಸ್ತ್ ಆಗುವುದಕ್ಕೆ ಮಾಡುತ್ತಾ ಇದ್ದೆ. ನನಗೆ ಶನಿವಾರ ರಾತ್ರಿಯಲ್ಲಿ ಫೋನ್ ಬಂತು. ಪಕ್ಕದ ಎಲುಮಲಪಾಡಿ ಎಂಬ ಗ್ರಾಮದಿಂದ ಎಂಟೂವರೆ ಗಂಟೆಗೆ ಫೋನ್ ಬಂತು. ಬೆಂಕಿ ಹಚ್ಚಿಕೊಂಡು ಬಿಟ್ಟಿದೆ,

ಎಷ್ಟು ಜನರು ಸತ್ತು ಹೋಗುತ್ತಾರೋ ಏನೋ ಎಂದು ಭಯದಿಂದ ಅವರು ಫೋನ್ ಮಾಡಿದ್ದರು. ನಾನು ತಕ್ಷಣ ಕೋಲಾರಕ್ಕೆ ಫೋನ್ ಮಾಡಿದೆ. ಎಸ್.ಪಿ.ಯವರಿಗೆ ಫೋನ್ ಮಾಡಿದರೆ, ಅವರು ಊರಲ್ಲಿ ಇಲ್ಲ ಎಂದು ತಿಳಿಯಿತು. ಅನಂತರ ಡಿಜಿಪಿಯವರಿಗೆ ಫೋನ್ ಮಾಡಿದ ಕೂಡಲೇ ಅವರು ಕ್ರಮ ತೆಗೆದುಕೊಂಡು ಅವರೂ ಬಂದರು, ಅಡಿಶನಲ್ ಎಸ್‌ಪಿಯವರನ್ನು ಮತ್ತಿತರ ಪೋಲೀಸ್ ಅಧಿಕಾರಿಗಳನ್ನು ಸಿಬ್ಬಂದಿಗಳನ್ನು ಅಲ್ಲಿ ಹಾಕಿದರು. ಹಾಕುವ ಮೊದಲು ಅಲ್ಲಿದ್ದ ಇಬ್ಬರು ಪೋಲೀಸರು ಗಲಾಟೆ ಆದ ತತ್‌ಕ್ಷಣವೇ ಅವರಿಗೆ ಬೆಲ್ಲಾಂಡಹಳ್ಳಿಯ ಘಟನೆ ಜ್ಞಾಪಕ ಬಂದಿರಬೇಕು, ಆಗ ಅಲ್ಲಿ ನಾಲ್ಕು ಜನ ಸತ್ತು ಹೋಗಿದ್ದರು. ಹಾಗಾಗಿ ಅವರು ಓಡಿ ಬಂದು ಪಕ್ಕದಲ್ಲಿರುವ ಮುಂಗಾನಹಳ್ಳಿಯ ಮನೆಗಳಲ್ಲಿ ಸೇರಿಕೊಂಡು ಬಿಟ್ಟಿದ್ದಾರೆ. ಈಚೆಗೆ ಬರುವ ಧೈರ್ಯ ಅವರಲ್ಲಿರಲಿಲ್ಲ. ಆ ಸಂದರ್ಭದಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಸ್ವಲ್ಪ ಬೇಗ ಹೋಗಿದ್ದಾರೆ. ಅವರೂ ಕೂಡ ಬೆಂಕಿ ಉರಿ ನೋಡಿದವರು ಊರ ಒಳಗಡೆ ಹೋಗಲಿಲ್ಲ. ಅವರು ಕೂಡ ಒಂದು ಕಿ.ಮಿ ದೂರ ಇರತಕ್ಕಂಥ ಮುಂಗಾನಹಳ್ಳಿಯಲ್ಲಿಯೇ ಉಳಿದುಕೊಂಡಿದ್ದಾರೆ. ಅಕಸ್ಮಾತ್ತಾಗಿ ಅವರು ಸ್ಥಳಕ್ಕೆ ಹೋಗಿದ್ದರೆ ಅವರಿಗೇನಾಗುತ್ತಿತ್ತೋ ಭಾವಿಸಲಾರೆ, ಆದರೆ ಒಂದು ವೇಳೆ ಕಾರ್ಯಚರಣೆಯಲ್ಲಿ ಸಕ್ಸೆಸ್ ಆಗಿದ್ದರೆ ಕೆಲವರಾದರೂ ಬದುಕ ಬಹುದಾಗಿತ್ತು. ಈ ತರಹ ಒಂದು ಸಂದರ್ಭ ಆಗ ಬೇಕಾದರೆ, ಆ ಪೋಲೀಸರನ್ನು ಏಕೆ ಅಲ್ಲಿಂದ ತೆಗೆದರು? ಏನು ಕಾರಣ? ಎಂಬುದನ್ನೆಲ್ಲಾ ಸಿಬಿಐ ಎನ್‌ಕ್ವೈಯರಿ ಮಾಡಿದರೆ ಸೂಕ್ಷ್ಮವಾದಂಥ ವಿಚಾರಗಳು ಈಚೆಗೆ ಬರುತ್ತವೆ ಎಂದು ಭಾವಿಸುತ್ತೇನೆ. ಮುಂದೆ ಈ ತರಹದ ಘಟನೆಗಳು ಆಗಬಾರದು ಎಂದು ಸರಕಾರದವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಅಂದು ನನಗೆ ಫೋನ್ ಬಂದಾಗ ಆ ಜಾಗಕ್ಕೆ ಹೋಗೋಣ ಎಂದು ಕುಳಿತಿದ್ದಾಗ ನನಗೆ ತಹಶೀಲ್ದಾರರು ರಾತ್ರಿ 12ಗಂಟೆಯ ಹೊತ್ತಿಗೆ ಫೋನ್ ಮಾಡಿದರು. ಡಿಸಿ ಯವರು ಎಸಿ ಯವರು ಬರುತ್ತಿದ್ದಾರೆ ಎಂದು ಅವರು ತಿಳಿಸಿದರು. ಆಗ ಅವರಿಗೆ ನಾನೂ ಕೂಡ ಬರುವುದಾಗಿ ತಿಳಿಸಿದ್ದಲ್ಲದೆ ಬೆಳಿಗ್ಗೆ ಡಿಜಿಪಿಯವರಿಗೆ, ಐಜಿಯವರಿಗೆ ಫೋನ್ ಮಾಡಿದ್ದೇನೆ. ಅವರೂ ಪೋಲೀಸ್ ಪಡೆಯನ್ನು ಕಳುಹಿಸುತ್ತಿರುವುದಾಗಿ ತಿಳಿಸಿದ್ದಾರೆ, ಐಜಿಪಿಯವರು ಕೂಡ ಬರುತ್ತಿದ್ದಾರೆ, ನಾನೂ ಕೂಡ ಬರುತ್ತಿದ್ದೇನೆ, ಎಂದು ಹೇಳಿ ಕಾದಿದ್ದೆ. ಸುಮಾರು ಎರಡು ಗಂಟೆ ಹೊತ್ತಿಗೆ ತಹಶೀಲ್ದಾರರು ಫೋನ್ ಮಾಡಿ ಅವರುಗಳು ಬರಲಿಲ್ಲ ನಾನು ಕಾಯುತ್ತಿದ್ದೇನೆ ಎಂದು ಹೇಳಿದರು. ಅದರೊಳಗಾಗಿ ಅವರು ಬಂದು ಬಿಟ್ಟಿದ್ದಾರೆ. ಡಿಸಿ ಮತ್ತು ಎಸಿ ಯವರು ಬಂದ ಕೂಡಲೆ ನಿಮಗೆ ತಿಳಿಸುತ್ತೇನೆ ಎಂದು ಹೇಳಿದ ತಹಶೀಲ್ದಾರರು ಎಲ್ಲಿ ಹೋದರೋ ಗೊತ್ತಾಗಲಿಲ್ಲ. ನಾನು ಮಾತ್ರ ರಾತ್ರಿ ಅನಾಮಧೇಯನಾಗಿ ನಾಲ್ಕು ಗಂಟೆ ರಾತ್ರಿಯವರೆಗೆ ಫೋನ್ ಹತ್ತಿರ ಕುಳಿತುಕೊಂಡಿದ್ದೆ. ಅವರ ಕಛೇರಿಯಿಂದ ಕೂಡ ಯಾವ ಮಾಹಿತಿ ನನಗೆ ಸಿಗಲಿಲ್ಲ. ನಾನು ಇಂಡಿಪೆಂಡೆಂಟ್ ಅಭ್ಯರ್ಥಿ ಎಂದು ನನಗೆ

ತಿಳಿಸಿರಲಿಕ್ಕಿಲ್ಲ, ನನಗೇನಾದರೂ ತಿಳಿಸಿದರೆ ಅಥವಾ ನನ್ನನ್ನು ಕರೆದುಕೊಂಡು ಹೋದರೆ ಪುನಃ ಇವರು ಅಲ್ಲಿ ಉಳಿಯುವ ಹಾಗಿಲ್ಲ ಎಂದೋ? ಏನೋ ಅಂದು ಕಂಡೆ. ಸೂರ್ಯಕಾಂತಿಯ ಹೂವು ಸೂರ್ಯ ಯಾವ ಕಡೆಗೆ ಇರುತ್ತಾನೋ ಆ ಕಡೆಗೆ ತಿರುಗುತ್ತಾ ಇರುತ್ತದೆ. ಈ ಅಧಿಕಾರಿಗಳು ಕೂಡ ಹಾಗೆ ತಿರುಗುತ್ತಿರುತ್ತಾರೆ. ಸರಕಾರ ಯಾರ ಕಡೆ ಇದೆಯೋ ಅವರ ಕಡೆಗೆ ಮಾತನಾಡುತ್ತಾರೆ. ಈ ಸದನಕ್ಕೆ ಜವಾಬ್ದಾರಿ ಇದೆ. ಜನರು ಆರಿಸಿಕಳುಹಿಸಿದ ಪ್ರತಿನಿಧಿಗೆ ನಾವು ಮರ್ಯಾದೆ ಕೊಡಬೇಕು, ಈ ಸದನಕ್ಕೆ ಮರ್ಯಾದೆ ಕೊಡುವ ಪ್ರಶ್ನೆ ಅವರಲ್ಲಿ ಬರುವುದಿಲ್ಲ. ಏಕೆಂದರೆ ಎರಡೆರಡು ತಿಂಗಳಿಗೆ ಟ್ರಾನ್ಸ್‌ಫರ್ ಮಾಡುವುದು ಕೂಡ ಇರುತ್ತದೆ. ಮಕ್ಕಳು ಓದುತ್ತಿದ್ದರೆ ಆ ಮಕ್ಕಳನ್ನು ಎತ್ತಿಕೊಂಡು ಇವರು ಹಾಕಿದಲ್ಲಿಗೆ ಹೋಗಬೇಕು. ನಾವು ಪ್ರಜಾಪ್ರಭುತ್ವ ಹೊಂದಿ 50 ವರ್ಷಗಳು ಆಗಿವೆ. ಇಂಥ ಗಂಡಾಂತರಗಳು ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ ಎಂದು ಹೇಳಬಯಸುತ್ತೇನೆ. ನಾನು ಕೂಡ 18 ವರ್ಷಗಳಿಂದ ಶಾಸಕನಾಗಿದ್ದೇನೆ ಒಂದು ಲೆಟರ್ ತೆಗೆದುಕೊಂಡು ಹೋಗಿ ನನಗೆ ಬೇಕಾಗುವ ಒಬ್ಬ ಅಧಿಕಾರಿಯನ್ನು ಹಾಕಿಸಿಕೊಂಡು ಬಂದಿದ್ದೇನೇ ಎಂದು ಹೇಳಿ ಮೀಸೆ ತಿರುಗಿಸ ಬಹುದು. ಆದರೆ ಇಂತಹ ಹೇಯವಾದ ಕೆಲಸ ಬೇರೊಂದು ಇಲ್ಲ. ನಮ್ಮ ತಂದೆಯವರು 1952 ರಿಂದಲೂ ಎಂಎಲ್‌ಎ ಆಗಿದ್ದರು. ಅದುವರೆಗೂ ಒಬ್ಬ ಅಧಿಕಾರಿ ಬಂದಾಗ ಆತನು ಸರಿಯಾಗಿ ಕೆಲಸ ಮಾಡದಿದ್ದರೆ, ತಪ್ಪು ಮಾಡಿದರೆ, ಶಾಸಕರು ಕಾಗದ ಬರೆದು ಇಂಥ ಅಧಿಕಾರಿ ಇಂಥ ತಪ್ಪು ಮಾಡಿದ್ದಾರೆ ಅಂಥವರ ಮೇಲೆ ಕ್ರಮ ಜರುಗಿಸಿ ಎಂದು ಬರೆಯುತ್ತಿದ್ದರು. ಆದರೆ ಈಗ ಏನಾಗಿದೆ? ಎಲ್ಲರೂ ಬಂದು ಸರ್.. ಟ್ರಾನ್ಸ್‌ಫರ್ ಸೀಸನ್ ಬಂದು ಬಿಟ್ಟಿದೆ, ನಮಗೆ ಒಂದು ಲೆಟರ್ ಕೊಡಿ ಎಂದು ಗೋಗರೆಯುವ ಪರಿಸ್ಥಿತಿ ಇದೆ. ಈ ತರಹ ಒಬ್ಬ ಅಧಿಕಾರಿಯನ್ನು ಉಳಿಸಿಕೊಳ್ಳ ಬೇಕು, ಉಳಿಸಿಕೊಳ್ಳ ಬಾರದು ಎಂದು ಒಬ್ಬ ರಾಜಕಾರಣಿಯ ಕೈಯಲ್ಲಿ ಈ ಕಾರ್ಯಾಂಗವನ್ನು ಆಡಿಸುತ್ತಾ ಇದ್ದಾರಲ್ಲ? ಇಂಥ ಸ್ಥಿತಿಯು ಏಕೆ ಬಂತು ಎಂದು ನನಗೆ ಅರ್ಥವಾಗುತ್ತಾ ಇಲ್ಲ. ನಾವು ಚೆನ್ನಾಗಿ ಸಂವಿಧಾನದಲ್ಲಿ ತಿಳಿಸುತ್ತೇವೆ. ರಾಜ್ಯಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳು ಬೇರೆ ಬೇರೆ ಎಂದು ಹೇಳುತ್ತೇವೆ. ಅವರೆಲ್ಲರೂ ಇಂಡಿಪೆಂಡೆಂಟ್ ಆಗಿ ಕೆಲಸ ಮಾಡಬೇಕು, ಎಂದೆಲ್ಲಾ ಹೇಳುತ್ತೇವೆ. ಆದರೆ ನಮ್ಮ ರಾಜ್ಯಾಂಗದವರು ಕಾರ್ಯಾಂಗವನ್ನು ಟೂಲ್ಸ್ ಬಳಸಿಕೊಂಡ ಹಾಗೆ ಬಳಸಿಕೊಳ್ಳುತ್ತಾರೆ. ಹೀಗೆ ಅಧಿಕಾರಿಗಳನ್ನು ಬಳಸಿಕೊಳ್ಳುವ ಪದ್ಧತಿಯು ಎಷ್ಟು ದಿನ ಇರುತ್ತದೋ ಅಷ್ಟು ದಿನವೂ ಅವರಾದರೂ ಸರಕಾರವನ್ನು ನಡೆಸಲಿ, ಇವರಾದರೂ ನಡೆಸಲಿ, ಅದು ಸ್ಮಶಾನದ ಸರಕಾರವಾದ ರೀತಿಯಲ್ಲಾಗುತ್ತದೆ. ನಮ್ಮ ಊರಿನಲ್ಲಾದ ಹಾಗೆ ಆಗುತ್ತದೆ ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಈ ವಿಷಯ ಇಲ್ಲಿ ಪ್ರಸ್ತಾಪವಾಗಿದೆ ರಾಜಕೀಯ ಉದ್ದೇಶದಿಂದ ಅಂತಹ ಘೋರ ಗುರುತರ ಘಟನೆ ನಡೆದಿದೆಯೆಂದು ಸತ್ಯದಿಂದ ಇಲ್ಲಿ ಹೇಳುತ್ತಿದ್ದೇನೆ. ಯಾಕೆಂದರೆ ನೋಡಿ ಅಲ್ಲಿ ತಕ್ಕಡಿ ಇದೆ, ಅದರ ಇದಿರು

ಹೇಳುತ್ತಿದ್ದೇನೆ: ರಾಜಕೀಯ ದುರುದ್ದೇಶದಿಂದ ಅಲ್ಲಿ ಸಬ್‌ಇನ್‌ಸ್ಪೆಕ್ಟರನ್ನು ಹಾಕಿ, ಮೊದಲೇ ಬಹಳ ಸೂಕ್ಷ್ಮವಾದಂತಹ ಜಾಗಕ್ಕೆ ಇಂಥವರನ್ನು ಹಾಕಿ ಅದರಲ್ಲೂ ದ್ರೌಪದಿ ವಸ್ತ್ರಾಪಹರಣ ಕೂಡ ಮಾಡಿಬಿಟ್ಟರು ಸ್ವಾಮಿ. 25 ದಿವಸಗಳ ಹಿಂದೆ ಕರಡಮರಿ ಎಂದ ಗ್ರಾಮ ಪಕ್ಕದಲ್ಲಿದೆ; ಇದು ಕಂಬಾಲಹಳ್ಳಿ ಪಕ್ಕದಲ್ಲಿದೆ ನಾಲ್ಕೈದು ಕಿಮಿ ದೂರದಲ್ಲಿ ಅಲ್ಲಿ ಸುಬ್ಬಲಕ್ಷ್ಮಮ್ಮ ಅಂತ ಒಬ್ಬ ಹೆಂಗಸು ಬಿಲ್ಲಾಂಡಹಳ್ಳಿಯ ಕರಡಮರಿಯಿಂದ ಬಸ್‌ನಲ್ಲಿ ಬರುತ್ತಿದ್ದರ ಆ ಕರುಡಮರಿಯಲ್ಲಿ ಕೆಲವು ಮಹಾನುಭಾವರು ಇದ್ದಾರೆ, ಅವರಿಗೆ ದೇವರೇ ದಿಕ್ಕು, ಅವರು ಪೋಲಿಸರನ್ನೇ ಏಯ್ ಏಳೋ ಅಂತ ಮಾತಾಡಿಸುತ್ತಾರೆ ಅಂಥವರು ಆಯಮ್ಮನನ್ನು ಇಳಿಸಿಕೊಂಡು ಸೀರೆಯನ್ನು ಎಳೆದು ತೆರೆದ ಪ್ರದೇಶದಲ್ಲಿ ಅಷ್ಟು ಅವಮಾನ ಮಾಡಿದ್ದಾರೆ, ಅದಕ್ಕೆ ಕೇಸ್ ಬುಕ್ ಮಾಡಿ ಅಂದರೆ ಯಾರಿಗೂ ಧೈರ್ಯ ಇರಲಿಲ್ಲ, ಯಾಕೆಂದರೆ ಇವತ್ತು ಆ ಮಹನೀಯರು ಆಡಳಿತ ಪಕ್ಷಕ್ಕೆ ಬಂದುಬಿಟ್ಟಿದ್ದಾರೆ, ಇಲ್ಲದಿದ್ದರೆ ಆ ಧೈರ್ಯ ಇರುತ್ತಿರಲಿಲ್ಲ. ಸೂರ್ಯಕಾಂತಿ ಇದ್ದಂತೆ ಅಧಿಕಾರ ಯಾವ ಕಡೆ ಇರುತ್ತದೆಯೋ ಆ ಕಡೆಯೇ ಅವರು ಇರುವುದು. ಆಮೇಲೆ ಜನ ಹೋಗಿ ಇನ್‌ಸ್ಪೆಕ್ಟರನ್ನು ಘೆರಾವ್ ಮಾಡಿದರು ಪತ್ರಿಕೆಗಳಲ್ಲಿ ಬಂದಿದೆ, ಕೊನೆಗೆ ಕೇಸ್‌ನ್ನು ಬುಕ್ ಮಾಡಿದಂತೆ ಮಾಡಿ ಅದನ್ನು ಯಾವ ಸೆಕ್ಷನ್‌ನ್ನೊಳಗೆ ಬದಲಾಯಿಸಬೇಕೋ ಆ ರೀತಿ ಬದಲಾಯಿಸಿಕೊಂಡರು. ಇಂತಹ ವ್ಯವಸ್ಥೆ ಇದ್ದರೆ ನಿಜವಾಗಿಯೂ ಯಾರೇ ಸರ್ಕಾರ ನಡೆಸಿದರೂ ಅದು ಒಳ್ಳೆಯದಲ್ಲ. ಸರ್ಕಾರ ಜವಾಬ್ದಾರಿಯಿಂದ ನಡೆಯದೇ ಇದ್ದರೆ ಈ ರೀತಿ ಅಮಾಯಕರಿಗೆ ಅನ್ಯಾಯದ ಕೆಲಸ ನಡೆಯುತ್ತವೆ ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಹೆಚ್ಚು ಸೂಕ್ಷ್ಮಪ್ರದೇಶಗಳಿವೆ. ನಮ್ಮ ಮಾನ್ಯ ಸುಬ್ಬಾರೆಡ್ಡಿಯವರು ಪುಸ್ತಕ ತಗೊಂಡುಬಿಟ್ಟರು: 1950ರಲ್ಲಿ ಕೇಂದ್ರದಲ್ಲಿ ಗೃಹಸಚಿವರಾಗಿದ್ದ ಸರ್ದಾರ್ ಪಟೇಲ್ ಹೇಳಿದ್ದಾರೆ: ''ಪೋಲಿಸರು ಕೆಲಸ ಮಾಡುವಾಗ ರಾಜಕೀಯ ವ್ಯಕ್ತಿಗಳು ಕೈಹಾಕಿದರೆ ಆಗ ಸರ್ವನಾಶವಾಗುತ್ತದೆ, ಆ ದೇಶದಲ್ಲಿ ಜನಗಳಿಗೆ ರಕ್ಷಣೆ ಸಿಗುವುದಿಲ್ಲ'' ಅಂತ. ಈ ರೀತಿ ಪೋಲೀಸರನ್ನು ನಮ್ಮ ರಾಜಕೀಯ ವ್ಯಕ್ತಿಗಳು ಕೈಯಲ್ಲಿ ಹಿಡಿದುಕೊಂಡು ಆಡಿಸುವುದರಿಂದ ಖಂಡಿತವಾಗಿ ಈ ದೇಶಕ್ಕೆ ರಕ್ಷಣೆ ಸಿಗುವುದಿಲ್ಲ ಮಿಕ್ಕ ವಿಷಯಗಳನ್ನು ನಮ್ಮ ಸ್ನೇಹಿತರು ಹೇಳಿದ್ದಾರೆ ಇವತ್ತು ಇದನ್ನು ಸರಿಯಾದ ರೀತಿಯಲ್ಲಿ ತನಿಖೆ ನಡೆಸಬೇಕು ಮತ್ತು ಇಲ್ಲಿನ ಜನಗಳಿಗೆ ರಕ್ಷಣೆ ಸಿಗುವಂತೆ ಸರ್ಕಾರ ಮಾಡಲಿ ಎಂದು ಪ್ರಾರ್ಥನೆ ಮಾಡಿಕೊಂಡು ನನಗೆ ಈ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಅಧ್ಯಕ್ಷರೇ, ಚೌಡರೆಡ್ಡಿಯವರು ಇನ್‌ಸ್ಪೆಕ್ಟರ್ ವರ್ಗಾವಣೆಯ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ, ಅವರು ಅವರು ಆರು ಸಲ ಸಸ್ಪೆಂಡು ಆಗಿದ್ದರು, ಅದಕ್ಕೇ ನನ್ನ ಕೈವಾಡವೇನೂ ಇಲ್ಲ ಇದರಲ್ಲಿ ಮಾನ್ಯ ಮಂತ್ರಿ

ಮುನಿಯಪ್ಪನವರ ಕೈವಾಡವಿದೆ ಎಂದು ಹೇಳುತ್ತಾರೆ, ಇದರ ಬಗ್ಗೆ ನಿಜವಾಗಿಯೂ ವಿವರಣೆ ನೀಡಬೇಕಾಗಿದೆ. ಶಾಸಕರ ಗಮನಕ್ಕೇ ತರದೆ ಆರು ಸಲ ಸಸ್ಪೆಂಡ್ ಆದ ಇನ್‌ಸ್ಪೆಕ್ಟರನ್ನು ಚಿಂತಾಮಣಿಗೆ ಹಾಕಿ ಈ ಘಟನೆಗೆ ಅವರು ಕಾರಣರು ಆಗಿದ್ದಾರೆ.

ಶ್ರೀ ಚೌಡರೆಡ್ಡಿ: ಅದೇ ಅಲ್ಲ ಸೂರ್ಯಕಾಂತಿ ಹೂವು ಅಂತ ಏಕೆ ಹೇಳಿದೆ ಅಂದರೆ ನನ್ನ ಕ್ಷೇತ್ರದಲ್ಲಿ ಬಾಗೇಪಲ್ಲಿ ತಾಲ್ಲೂಕು ಚೇಳೂರು ಹೋಬಳಿ ಅಂತ ಇದೆ, ಅಲ್ಲಿ ನಾನು ಟೂರ್ ಮಾಡುವಾಗ ಅಂಗವಿಕಲರಿಗೆ, ಬುದ್ಧಿಮಾಂದ್ಯರಿಗೆ, ವೃದ್ಧರಿಗೆಲ್ಲ ಸಂಬಂಧಿಸಿದಂತಹ ಫಾರ್ಮುಗಳನ್ನು ತೆಗೆದುಕೊಂಡು ಹೋಗಿ ಅಲ್ಲಿರುವವರಿಂದ ಭರ್ತಿಮಾಡಿಸಿಕೊಂಡು ಕ್ಯಾಮೆರಾದಲ್ಲಿ ಫೋಟೋಗಳನ್ನು ತೆಗೆದುಕೊಂಡು ಅವುಗಳನ್ನು ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ನಾನು 20 ಸಲ ಹೋಗಿದ್ದೇನೆ ನೀವು ಅಲ್ಲಿ ಕ್ಯಾಂಪ್ ಮಾಡಿ, ಅವರಿಗೆಲ್ಲ ಶಾಶ್ವತ ಅಂಗವಿಕಲತಾ ಸರ್ಟಿಫಿಕೇಟ್ ಕೊಡಿ ಅಂತ ಹೇಳಿದರೆ ಅವರು ತಕ್ಷಣ ನನಗೆ ಡೇಟ್ ಕೊಡುವುದು, ಆ ತಕ್ಷಣ ನಮ್ಮ ಕೆಎಚ್ ಮುನಿಪ್ಪನವರು ಏಯ್ ನೀನೇನಾದರೂ ಚೌಡರೆಡ್ಡಿ ಜೊತೇಲಿ ಹೋದರೆ ಗುಲ್ಬರ್ಗಕ್ಕೆ ಹಾಕಿಸುತ್ತೇನೆ ಅಂತ ಅವರನ್ನು ಹೆದರಿಸುವುದು. ನನ್ನ ಮೇಲೆ ಹಟ ಸಾಧಿಸಲಿ, ಆದರೆ ಬಡವರ ಕೆಲಸ ಮಾಡುವುದಕ್ಕೆ ಹೋದಾಗ ಈರೀತಿ ನಡೆದುಕೊಳ್ಳುತ್ತಿದ್ದಾರಲ್ಲ, ಇದು ಎಂಥಾ ಪ್ರಜಾಪ್ರಭುತ್ವ ! ಅಧ್ಯಕ್ಷರೇ, ನೀವೇ ನೋಡಿ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದು ಬಹಳ ಅನ್ಯಾಯ, ಮಾನ್ಯ ಕೆಎಚ್ ಮುನಿಯಪ್ಪನವರಾಗಲಿ, ಮಾನ್ಯ ಮಂತ್ರಿಗಳಾದ ವಿ.ಮುನಿಯಪ್ಪನವರಾಗಲಿ ಜನಪ್ರತಿನಿಧಿಗಳಾಗಿ ಬಂದಿರುವವರು, ತಾಲ್ಲೂಕಿನ ಶಾಸಕರಿಗೆ ಪ್ರಾತಿನಿಧ್ಯ ಕೊಡದೇ ಇರುವುದು ಬಹಳ ದುರಾದೃಷ್ಟಕರ ಸಂಗತಿ.

+ ಶ್ರೀ ವಿ.ಸದಾನಂದಗೌಡ (ಪುತ್ತೂರು): ಅಧ್ಯಕ್ಷರೇ, ಅತ್ಯಂತ ಗಂಭೀರವಾದ್ದ ವಿಚಾರವನ್ನು ಇಂದು ನಾವು ಚರ್ಚೆಗೆತ್ತಿಕೊಂಡಿದ್ದೇವೆ. ಈ ನಿಲುವಳಿ ಸೂಚನೆ ಮೂಲಕ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು ಹಾಗೂ ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬೇಕು ಎಂಬ ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ನನಗೆ ಅನಿಸುತ್ತಿದೆ: ಇದು ಪೋಸ್ಟ್‌ಮಾರ್ಟಂ ಅಂತ ಒಬ್ಬ ಮೃತಪಟ್ಟಾಗ ಆತ ಯಾವ ಕಾರಣಕೋಸ್ಕರ ಸತ್ತಿದ್ದಾರೆಂದು ಕಾರಣ ಕಂಡು ಹಿಡಿಯುವ ಪ್ರಯತ್ನ ಅದು. ಆದರೆ ಆ ವ್ಯಕ್ತಿ ನಿರಂತರವಾಗಿ ಕಾಯಿಲೆಯಿಂದ ಬಳಲುತ್ತಿದ್ದ ಅಂದಾಗ ಅವನಿಗೆ ಯಾವ ಮದ್ದು ಕೊಡಬೇಕು, ಹೇಗೆ ಬದುಕಿಸಬೇಕೆಂಬುದು ವೈದ್ಯರ ಕೆಲಸ ಇದನ್ನು ನಾವೆಲ್ಲರೂ ನೋಡಿರುವುದು. ಆದರೆ ಇಲ್ಲ ಪರಿಸ್ಥಿತಿ ಪೂರ್ತಿ ವಿಪರ್ಯಾಸ. ಕಾಯಿಲೆ ಬಂದಿದೆ ಅಂತ ಗೊತ್ತಾದಾಗಲೂ ಅದಕ್ಕೆ ತಕ್ಕ ಮದ್ದನ್ನು ಮಾಡದೆ ರೋಗಿ ಮೃತಪಟ್ಟಮೇಲೆ ಪೋಸ್ಟ್‌ಮಾರ್ಟಂ ಕೆಲಸವನ್ನು ಇವತ್ತಿನ ಸರ್ಕಾರ ಮಾಡುತ್ತಿದೆ ಎಂದರೆ

ತಪ್ಪಾಗಲಿಕ್ಕಿಲ್ಲವೆಂದು ನಾನು ಭಾವಿಸುತ್ತೇನೆ. ಈಗಾಗೇ ಸರ್ಕಾರ ಒಪ್ಪಿಕೊಂಡಿರುವ ನ್ಯಾಯಾಂಗ ತನಿಖೆ ಒಂದು ರೀತಿಯ ಪೋಸ್ಟ್‌ಮಾರ್ಟಂ ಅಷ್ಟೆ ಮತ್ತು ಬಹಳ ದೂರಗಾಮಿ ಪರಿಣಾಮ ಕೊಡುವಂತಹ ವ್ಯವಸ್ಥೆ. ಇದರಿಂದ ಇವತ್ತಿನ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಲು ಸಾಧ್ಯವಾಗುವುದಿಲ್ಲ, ತೊಂದರೆಗೊಳಗಾದವರಿಗೆ ಪರಿಹಾರ ಕೊಡಲು ಸಾಧ್ಯವಾಗುವುದಿಲ್ಲ ಜೊತೆಗೆ ತಕ್ಷಣ ಯಾವ ತನಿಖೆಯನ್ನೂ ಮಾಡಲಾರದಂತಹ ಸಂಗತಿ ನ್ಯಾಯಾಂಗ ತನಿಖೆ ಈ ಹಿನ್ನೆಲೆಯಲ್ಲಿ ನಾವು ಹೇಳಿದ್ದು ಇದು ಪೋಸ್ಟ್‌ಮಾರ್ಟಂ ಆಗಬಾರದೆಂದು, ಆದರೆ ಪೋಸ್ಟ್ ಮಾರ್ಟಂ ಆಗಿದೆ. ಇಂತಹ ಸಂದರ್ಭದಲ್ಲೂ ತಕ್ಷಣ ಏನಾದರೂ ವಿಚಾರಗಳಿದೆ ಅಂತ ಅನ್ನಿಸಿದರೆ ಅವುಗಳನ್ನು ಅನುಸರಿಸಿ ಮುಂದೆ ಇಂತಹ ಘಟನೆ ನಡೆಯದ ರೀತಿಯಲ್ಲಿ ಕೆಲಸಗಳು ಹೇಗೆ ಆಗಬೇಕೆಂಬುದರ ಪ್ರಯತ್ನವೇ ಇಂದಿನ ನಿಲುವಳಿ ಸೂಚನೆಯಲ್ಲಿ ನಾವು ಒತ್ತಿಹೇಳುವುದು. ಇವತ್ತು ಗಂಭೀರವಾಗಿ ನಾವು ಹೇಳುತ್ತಿದ್ದೇವೆ. ನ್ಯಾಯಾಂಗ ತನಿಖೆ ಅಂತ ಉಲ್ಲೇಖಿಸಿದರು, ಹಿಂದಿನ ಇಂತಹ ತನಿಖೆಗಳ ಕಡತಗಳು ಧೂಳುಹಿಡಿದು ಕಪಾಟಿನಲ್ಲಿವೆ ಎಂಬುದನ್ನು ನಾವು ಆಲೋಚಿಸಬೇಕು. ಕಳೆದ ಅಧಿವೇಶನದಲ್ಲಿ ನಾನು ಉಲ್ಲೇಖ ಮಾಡಿದ್ದೆ: ಕನಿಷ್ಟ ಈ ಸರ್ಕಾರವಾದರೂ ಜಸ್ಟೀಸ್ ಜಗನ್ನಾಥಶೆಟ್ಟಿ ಆಯೋಗದ ವರದಿಯನ್ನು ಸದನದ ಮುಂದೆ ಮಂಡಿಸಲಿ ಅಂತ. ಇದರಲ್ಲಿ ಸರ್ಕಾರ ಏಕೆ ಹಿಂದೆಮುಂದೆ ನೋಡುತ್ತಿದೆ ಅಂತ ಗೊತ್ತಿಲ್ಲ, ಆದ್ದರಿಂದಲೇ ನಾವು ನ್ಯಾಯಾ,ಗ ತನಿಖೆಯಿಂದ ಏನೂ ಆಗುತ್ತಿಲ್ಲ, ಸಿ.ಬಿ.ಐ ತನಿಖೆ ಮಾಡಿಸಬೇಕು ಅಂತ ಹೇಳುತ್ತಿರುವುದು. ಸಿಬಿಐಗೆ ಒಪ್ಪಿಸಲು ಮುಖ್ಯ ಕಾರಣ, ಇದು ಕರ್ನಾಟಕದ ಗಡಿಪ್ರದೇಶಗಳಲ್ಲಿ ನಡೆದ ಘಟನೆಗಳು, ಇದಕ್ಕೆ ಅಲ್ಲಿನ ರಾಜಕೀಯವಂತರ ಪ್ರೋತ್ಸಾಹದ ಜೊತೆಗೆ ಅಪರಾಧಿಗಳು ತಪ್ಪಿಸಿಕೊಳ್ಳಲು ಎಲ್ಲ ವ್ಯವಸ್ಥೆಗಳೂ ಆಗುತ್ತವೆ, ಆಪಾದಿತರು ಪಕ್ಕದ ಆಂಧ್ರದಲ್ಲಿ ರಕ್ಷಣೆ ಪಡೆದಾಗ ನೇರವಾಗಿ ನಮ್ಮ ಪೋಲಿಸರು ಯಾವ ಕ್ರಮ ಜರುಗಿಸಿದರೂ ಅವರನ್ನು ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ.

1. 10 ಪಿ.ಎಂ.

ಈ ಕೆಲಸಗಳನ್ನು ತನಿಖೆ ಮಾಡಬೇಕಾದರೆ ನಾವು ನೇರವಾಗಿ ಸೆಂಟ್ರಲ್ ಗೌರ್ನಮೆಂಟ್‌ನಿಂದ ತನಿಖೆ ಮಾಡುವ ಸಿಬಿಐ ಸಂಘಟನೆಗಳಿಗೆ ಕೊಟ್ಟರೆ ಮಾತ್ರ ಈ ಕೆಲಸಗಳನ್ನು ತನಿಖೆ ಮಾಡುವುದಕ್ಕೆ ಸಾಧ್ಯ ಇದೆ ಎನ್ನುವ ಹಿನ್ನಲೆಯಲ್ಲಿ ನಾವು ಸಿಬಿಐ ತನಿಖೆಯಾಗಬೇಕೆನ್ನುವ ಒತ್ತಡಗಬೇಕೆನ್ನುವ ಒತ್ತಡಗಳ್ನು ಸರ್ಕಾರದ ಮೇಲೆ ಹಾಕುತ್ತಿದ್ದೇವೆ. ಅಲ್ಲಿ ನಡೆದ ಘಟನೆಯ ಬಗ್ಗೆ ಹೇಳುವುದಾದರೆ ರಾಜಕೀಯ ಕುಮ್ಮಕ್ಕೇ ಬಹುಶಃ ಕಾರಣ ಅಥವ ಇವತ್ತಿನ ದಿವಸ ಆಡಳಿತ ಮಾಡುತ್ತಿರುವ ಸರ್ಕಾರವೇ ಇದಕ್ಕೆಲ್ಲಾ ಕಾರಣ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾವು ಹಲವಾರು ವರ್ಷಗಳಿಂದ ನೋಡುತ್ತಿದ್ದೇವೆ. ಈ ರಾಜ್ಯದಲ್ಲಿ ಆಡಳಿತಕ್ಕೆ ಬರುವಂಥ ಯಾವುದೇ ಒಂದು

ರಾಜಕೀಯ ಪಕ್ಷಗಳು ಆಡಳಿತ ಮಾಡುವ ವ್ಯವಸ್ಥೆಗಳನ್ನು ಜಾತಿ ಲೆಕ್ಕಾಚಾರದ ಮೇಲೆ ಮಾಡುವಂಥದ್ದು. ಪ್ರಾಯಶಃ ಈ ಒಂದು ಘಟನೆ ಕೂಡ ಜಾತಿ ಲೆಕ್ಕಾಚಾರ ಒಂದು ವ್ಯವಸ್ಥೆಯೇ ಮೂಲಕಾರಣ ಎಂದು ನನಗನ್ನಿಸುತ್ತಿದೆ. ಯಾವುದಾದರೂ ಒಂದು ಪಕ್ಷ ಅಧಿಕಾರಕ್ಕೆ ಬಂದ ತಕ್ಷಣ ಯಾರ್ಯಾರಿಗೆ ಎಷ್ಟೆಷ್ಟು ಮಂತ್ರಿಪದವಿಗಳನ್ನು ಕೊಡಬೇಕು, ಯಾರ್ಯಾರಿಗೆ ಎಷ್ಟೆಷ್ಟು ಶಾಸಕರ ಸ್ಥಾನಗಳನ್ನು ಕೊಡಬೇಕು, ಒಕ್ಕಲಿಗರಿಗೆಷ್ಟು, ಲಿಂಗಾಯಿತರಿಗೆಷ್ಟು, ಹರಿಜನ ಗಿರಿಜನ ಬಂಧುಗಳಿಗೆಷ್ಟು, ಅಲ್ಪಸಂಖ್ಯಾತರಿಗೆಷ್ಟು ಈ ರೀತಿಯಾದ ಒಂದು ವ್ಯವಸ್ಥೆ ಸಮಾಜದಲ್ಲಿ ವಿಭಜನೆ ಮಾಡುವುದರ ಮೂಲಕ ಆಡಳಿತ ಮಾಡುವ ವ್ಯವಸ್ಥೆ ಇದಕ್ಕೆಲ್ಲಾ ಮೂಲಕಾರಣವೆಂದು ನಾನು ಭಾವಿಸುತ್ತಿದ್ದೇನೆ. ಬಹುಶಃ ಈ ಒಂದು ಆಡಳಿತ ವ್ಯವಸ್ಥೆ ಇದಕ್ಕೆ ಹೆಚ್ಚು ಕುಮ್ಮಕ್ಕು ಕೊಟ್ಟಿದೆ. ಈ ರಾಜ್ಯದಲ್ಲಿ ಅತ್ಯಂತ ಹೆಚ್ಚು ಈ ರೀತಿಯ ವಿಭಜನಕಾರ ವ್ಯವಸ್ಥೆಗೆ ಕುಮ್ಮಕ್ಕು ಕೊಟ್ಟಿದ್ದು ಎಂದರೆ ಇದೇ ಸರ್ಕಾರ ಈಗತಾನೆ ಮಾನ್ಯ ಚೌಡರೆಡ್ಡಿಯವರು ಉಲ್ಲೇಖ ಮಾಡಿದ ರೀತಿಯಲ್ಲಿ ಆರು ಸಾರಿ ಸಸ್ಪೆಂಡ್ ಆದ ಒಬ್ಬ ಸಬ್ ಇನ್ಸ್‌ಪೆಕ್ಟರ್‌ನ್ನು ಅಲ್ಲಿಯ ರಾಜಕೀಯ ನೇತಾರರ, ಕುಮ್ಮಕ್ಕಿನಿಂದ ಮಾಡಿರಬಹುದು ಚುನಾವಣೆಗೆ ಪೂರ್ವದಲ್ಲಿಯೇ ಜಾತಿ ಆಧಾರದಲ್ಲಿ ಲೆಕ್ಕಾಚಾರಗಳನ್ನು ಹಾಕಿ, ಇದು ಆ ದಿನದಿಂದಲೇ ಶುರುವಾಗಿದೆ. ಏಕೆಂದರೆ ಒಂದೂವರೆ ಎರಡು ವರ್ಷಗಳಿಂದ ಹಿಂದೆ ಇದ್ದವರನ್ನೇ ಪುನಃ ನಾಲ್ಕು ತಿಂಗಳ ಹಿಂದೆ ಅವರನ್ನು ಅಲ್ಲಿಗೆ ಪುನಃ ಹಾಕಿದ್ದಾರೆ. ಹಾಗೆ ಹಾಕಿ ರಾಜಕೀಯ ಪ್ರಭಾವವನ್ನು ಬೆಳೆಸತಕ್ಕಂಥದ್ದು, ಬಹುಶಃ ಇವರು ಈ ಒಂದು ಒತ್ತು ಕೊಟ್ಟಿದ್ದರಿಂದ ಇಂಥ ಘಟನೆ ನಡೆದಿರಬಹುದು ಎಂದು ನನ್ನ ಭಾವನೆ. ಈ ಎಲ್ಲಾ ಸಂಗತಿಗಳು ಹೊರಗೆ ಬರಬೇಕೆಂದರೆ ಪ್ರಾಯಶಃ ಸಿಬಿಐ ತನಿಖೆಯಾದರೆ ಮಾತ್ರ ಸಾಧ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಸಾಧಾರಣವಾಗಿ ವೈಯಕ್ತಿಕ ಪ್ರತಿಷ್ಠೆಯಿಂದಾಗಿ ಈ ರೀತಿಯ ಘಟನೆಗಳು ನಡೆಯುತ್ತವೆ. ಇವತ್ತು ಇದು ವೈಯಕ್ತಿಕ ಪ್ರತಿಷ್ಠೆಯೇ ಕಾರಣ. ಅಲ್ಲಿರುವ ಪೋಲೀಸ್ ವ್ಯವಸ್ಥೆ ಅತ್ಯಂತ ಬಲಯುತವಾಗಿದ್ದಿದ್ದರೆ ಅಥವಾ ಅಲ್ಲಿ ಒಳ್ಳೆಯ ಪೋಲೀಸ್ ಅಧಕಾರಿಗಳನ್ನು ಹಾಕುವ ಪ್ರಯತ್ನಗಳು ಅಲ್ಲಿಯ ಜಿಲ್ಲಾಡಳಿತದಿಂದ ಆಗುತ್ತಾ ಇದ್ದರೆ ಈ ರೀತಿ ಸಂಗತಿಗಳು ಖಂಡಿತವಾಗಿಯೂ ಆಗುತ್ತಿರಲಿಲ್ಲ. ಅಲ್ಲಿರುವ ಪೋಲೀಸ್ ಅಧಿಕಾರಿಗಳನ್ನು ಅಲ್ಲಿ ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವಂಥ ವ್ಯಕ್ತಿಗಳನ್ನು ಹಾಕಿದ ಹಿನ್ನೆಲೆಯಲ್ಲಿಯೇ ಬಹುಶಃ ಈ ಪರಿಸ್ಥಿತಿ ಉಂಟಾಗಿದೆ ಎಂದು ನನ್ನ ಭಾವನೆ. ಇದರಬಗ್ಗೆ ಕೂಡ ಒಂದು ಕೂಲಂಕುಷವಾದ ತನಿಖೆ ನಡೆಯಬೇಕಾಗುತ್ತದೆ. ಏಕೆಂದರೆ ಇದರ ಹಿನ್ನೆಲೆಯಲ್ಲಿ ಯಾರು ಇದ್ದಾರೆ, ಏಕೆ ಅವರನ್ನು ಅಲ್ಲಿಗೆ ಪೋಸ್ಟಿಂಗ್ ಮಾಡಲಾಯಿತು, ಅವರಿಂದ ಈ ಸಂದರ್ಭದಲ್ಲಿ ಯಾವ ರೀತಿ ಪೋಲೀಸ್ ವ್ಯವಸ್ಥೆಗಳು ನಡೆದಿದೆ ಎನ್ನುವುದನ್ನು ಕೂಡ ನಾವು ನೋಡಬೇಕಾಗಿದೆ. ಬಹುಶಃ ನಾನು ಪತ್ರಿಕೆಯಲ್ಲಿ ಓದಿದೆ. ಸನ್ಮಾನ್ಯ ಮುನಿಯಪ್ಪನವರು ಒಂದು ಪತ್ರಿಕಾಹೇಳಿಕೆಯಲ್ಲಿ ಹೇಳಿದ್ದರು. ಈ ಒಂದು ಘಟನೆಯ ಹಿನ್ನೆಲೆಯಲ್ಲಿ ಯಾರೂ ಕೂಡ ತಮ್ಮ ರಾಜಕೀಯ ಬೇಳೆ

ಬೇಯಿಸುವ ಪ್ರಯತ್ನವನ್ನು ಮಾಡಬಾರದು ಎನ್ನುವಂಥ ರೀತಿಯಲ್ಲಿ ಹೇಳಿದರು ಬಹುಶಃ ಅದರ ಹಿನ್ನೆಲೆಯನ್ನು ನಾವು ಆಲೋಚನೆ ಮಾಡಬೇಕಾಗಿದೆ. ಹಿಂದಿನ ದಿನಗಳಲ್ಲಿ ತಮ್ಮ ರಾಜಕೀಯ ಬೇಳೆಯನ್ನು ಬೇಯಿಸಲಿಕ್ಕೆ ಬೇಕಾದ ಪ್ರಯತ್ನದಿಂದಾಗಿ ಬಹುಶಃ ಈ ಪರಿಸ್ಥಿತಿ ಬಂದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲವೆಂದು ನಾನು ಭಾವಿಸುತ್ತಿದ್ದೇನೆ. ಇವತ್ತು ಅನೇಕ ಸದಸ್ಯರುಗಳು ಉಲ್ಲೇಖಮಾಡಿ ಬಹುಶಃ ಇದಕ್ಕೆ ಈ ಆಡಳಿತ ವ್ಯವಸ್ಥೆಯ ಒಂದು ವಿಫಲತೆಯೇ ಕಾರಣ ಎನ್ನುವುದನ್ನು ಹೇಳಿದರು ಎಲ್ಲಾ ಸಂದರ್ಭಗಳಲ್ಲೂ ನಾವು ಪೋಲೀಸ್ ಇಲಾಖೆಯನ್ನು ಒಂದು ಸ್ಪಷ್ಟೀಕರಣ ಮಾಡುವಂತಹ ರೀತಿಯನ್ನು ನಾವು ನೋಡುತ್ತಿದ್ದೇವೆ. ಇವತ್ತು ಕೂಡ ಪೋಲೀಸ್ ಇಲಾಖೆ ಆ ಕೆಲಸಗಳನ್ನು ಸರಿಯಾಗಿ ಮಾಡಲಿಲ್ಲ ಎಂದು ಹೇಳುತ್ತೇವೆ. ಇದನ್ನೆಲ್ಲಾ ಮೇಲ್ಮಟ್ಟದಲ್ಲಿ ಸೂಪರ್‌ವಿಷನ್ ಮಾಡುವ ಒಂದು ಜಿಲ್ಲಾ ಆಡಳಿತ ವ್ಯವಸ್ಥೆ ಇದೆ. ಜಿಲ್ಲಾಧಿಕಾರಿಗಳು ಉಪಸ್ಥಿತರಿದ್ದರು. ಅಲ್ಲಿ ಪ್ರಾಯಶಃ ಎಸ್‌ಪಿ ಯವರು ಮಾತ್ರ ಇರಲಿಲ್ಲ. ಜಿಲ್ಲಾಧಿಕಾರಿಯವರಿಗೆ ಎಲ್ಲಾ ವಿಚಾರಗಳು ಆಗಾಗ್ಗೆ ಗೊತ್ತಾಗುತ್ತಿರುತ್ತದೆ. ಜಿಲ್ಲಾಧಿಕಾರಿಯವರು ಏನು ಕ್ರಮವನ್ನು ಕೈಗೊಂಡರು? ಇಷ್ಟರತನಕ ಬಾಕಿ ಎಲ್ಲಾ ಅಧಿಕಾರಿಗಳನ್ನು ವರ್ಗ ಮಾಡುವುದು, ಮತ್ತೊಂದನ್ನು ಮಾಡುವುದು ಮಾಡಿದರು. ಆದರೆ ಈ ಜಿಲ್ಲಾಧಿಕಾರಿಗಳ ಬಗ್ಗೆ ಏಕೆ ಕ್ರಮ ಕೈಗೊಂಡಿಲ್ಲ? ಜಿಲ್ಲಾಧಿಕಾರಿಗಳು ಏನು ವ್ಯವಸ್ಥೆ ಮಾಡಿದ್ದಾರೆ? ಇದರ ಬಗ್ಗೆ ಕೂಡ ಸ್ವಲ್ಪ ನಾವು ಕೂಲಂಕುಷವಾಗಿ ನೋಡುವ ಅವಶ್ಯಕತೆ ಇದೆ. ಆ ಹಿನ್ನೆಲೆಯಲ್ಲಿ ಮಾತ್ರ ತನಿಖೆಗಳು ನಡೆದರೆ ಪ್ರಾಯಶಃ ಆ ತನಿಖೆಗೆ ಮಹತ್ವ ಬರುತ್ತದೆ. ಇಲ್ಲದಿದ್ದರೆ ಖಂಡಿತವಾಗಿಯೂ ಯಾವುದೇ ಒಂದು ವಿಚಾರಗಳು ಹೊರಗೆ ಬರಲಿಕ್ಕೆ ಸಾಧ್ಯವಿಲ್ಲ ಎಂದು ಹೇಳುವ ಅನಿಸಿಕೆ ನನ್ನದು. ಈ ರಾಜಕೀಯ ಹಸ್ತಕ್ಷೇಪದ ಬಗ್ಗೆ ನಾನು ಹೆಚ್ಚು ಉಲ್ಲೇಖ ಮಾಡಲಿಕ್ಕೆ ಹೋಗುವುದಿಲ್ಲ. ರಾಜಕೀಯ ಹಸ್ತಕ್ಷೇಪದ ಬಗ್ಗೆ ಮಾತನಾಡಲಿಕ್ಕೆ ಹೋದರೆ ಪ್ರಾಯಶಃ ಇವತ್ತು ಸನ್ಮಾನ್ಯ ಖರ್ಗೆಯವರು, ಅವರ ಬಗ್ಗೆ ನಿಜವಾಗಿಯೂ ಅತ್ಯಂತ ಹೆಚ್ಚಿನ ಗೌರವ ಇದೆ. ಕಳೆದ ಐದುವರ್ಷದ ಅವಧಿಯಲ್ಲಿ ಸದನದಲ್ಲಿ ಅವರು ವಿರೋಧ ಪಕ್ಷದಲ್ಲಿ ಅವರು ನಾಯಕರಾಗಿ ಕೆಲಸ ಮಾಡಿದ ಸಂದರ್ಭದಲ್ಲಿ ಅತ್ಯಂತ ಯಶಸ್ವಿಯಾಗಿ ವಿಚಾರಗಳನ್ನು ಉಲ್ಲೇಖ ಮಾಡುತ್ತಿದ್ದರು. ಎಷ್ಟೋ ಸಂದರ್ಭದಲ್ಲಿ ಯಾರಿಗಾದರೂ ಅವನ ಸ್ವಂತಿಕೆಯ ಮೇಲೆ ಗೌರವ ಇದ್ದರೆ ಅಥವಾ ಯಾವುದಾದರೂ ಕೆಲಸಗಳು ಅವನಿಂದ ಮಾಡುವುದಕ್ಕಾಗುವುದಿಲ್ಲವೆಂದರೆ ಅಥವ ಬೇರೆಯವರ ಒತ್ತಡದಿಂದ ಅವನು ಆ ಸ್ಥಾನದಲ್ಲಿ ಕುಳಿತು ಕೊಳ್ಳುವುದಕ್ಕೆ ಆಗುವುದಿಲ್ಲವೆಂದರೆ, ಅವರು ಆ ಸ್ಥಾನವನ್ನು ತ್ಯಜಿಸಬೇಕೆನ್ನುವ ಎನ್ನುವಂತಹ ಮಾತನ್ನು ಅವರು ಉಲ್ಲೇಖ ಮಾಡುತ್ತಿದ್ದರು. ಬಹುಶಃ ಇವತ್ತು ಮಾತನಾಡಿದವರೆಲ್ಲರೂ, ಮತ್ತು ಪತ್ರಿಕೆಗಳಲ್ಲಿ ಎಲ್ಲಾ ವಿಚಾರಗಳನ್ನು ಓದಿ ನಾವೇನು ತಿಳಿದುಕೊಂಡಿದ್ದೇವೆ ಎಂದರೆ ಇವತ್ತು ಆಡಳಿತದಲ್ಲಿರುವ ದ್ವಂದ್ವ ನೀತಿಗಳು, ಹಾಗೂ ಅಧಿಕಾರಿಗಳಿಗೆ ಬೇರೆಯವರ ಕುಮ್ಮಕ್ಕಿನಿಂದ ತಮ್ಮತಮ್ಮ ಕರ್ತವ್ಯಗಳನ್ನು

ನಿಭಾಯಿಸುವುದಕ್ಕೆ ಅಡಚಣೆ ಉಂಟು ಆಗಿದೆ ಎಂದು ನಮ್ಮ ಗಮನಕ್ಕೆ ಬರುತ್ತಿದೆ ಗೌರವಾನ್ವಿತರಾದ ಖರ್ಗೆಯವರ ಬಗ್ಗೆ ನನಗೆ ವಿಶ್ವಾಸವಿದೆ. ಇವತ್ತು ನಿಜವಾಗಿ ಅವರು ಆಡಳಿತವನ್ನು ನಡೆಸುತ್ತಿರುವ ಸಂದರ್ಭದಲ್ಲಿ ಪೂರ್ತಿಪ್ರಮಾಣದ ಒಂದು ಸ್ವಂತಿಕೆಯನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲವೆಂದಾದರೆ ಅವರು ಖಂಡಿತವಾಗಿಯೂ ಅವರ ಸ್ಥಾನವನ್ನು ಅವರು ತ್ಯಜಿಸಲೇಬೇಕು. ಅದು ಅವರಿಗೆ ಬಿಟ್ಟಿದ್ದು. ನಾವೇನು ಅವರನ್ನು ಹೀಗೆ ಮಾಡಿ ಎಂದು ಹೇಳುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಖಂಡಿತವಾಗಿಯೂ ರಾಜೀನಾಮೆಯನ್ನು ಕೊಡ ಬೇಕು. ಏಕೆಂದರೆ ಅವರು ಆ ಸತ್ಸಂಪ್ರದಾಯವನ್ನು ಹಾಕಿಕೊಂಡಂಥವರು; ಹಿಂದಿನ ದಿನಗಳಿಂದಲೇ ತಮ್ಮ ಪಕ್ಷದಎಲ್ಲಾ ರೀತಿ ರಿವಾಜುಗಳಿಗೆ ಹೊಂದಿಕೊಂಡಂಥವರು. ಎಂದು ನಾನು ಉಲ್ಲೇಖ ಮಾಡಿದರೆ ತಪ್ಪಾಗಲಿಕ್ಕಿಲ್ಲ ಎಂದು ಭಾವಿಸುತ್ತಿದ್ದೇನೆ. ಇವತ್ತು ಸಾಮಾನ್ಯವಾಗಿ ಇಂಥ ಸಂದರ್ಭಗಳು ಬಂದಾಗ, ಯಾವುದೇ ಒಂದು ಊರಿಗಾಗಲಿ, ಒಂದು ರಾಜ್ಯಕ್ಕಾಗಲಿ ಒಂದು ಸಂದೇಶ ಹೋಗಬೇಕು. ಏನು ಸಂದೇಶ ಹೋಗಬೇಕು ಎಂದರೆ ನೈತಿಕತೆ ಎಂದು ಹೇಳುವ ಸಂದೇಶ ಅವರಿಗೆ ಹೋಗಬೇಕು. ಇವತ್ತು ಅಧಿಕಾರಿಗಳಿಗೆ ಮತ್ತು ಮನದಟ್ಟಾಗಬೇಕು ಅಂತ ಎಂದು ಹೇಳಿದರೆ ಪ್ರಾಯಶಃ ಇವತ್ತು ಆಡಳಿತ ಮಾಡುವ ಒಂದು ವ್ಯಕ್ತಿಗೆ ತನ್ನ ವಿಫಲತೆಯಿಂದಾಗಿ ಈ ರಾಜ್ಯದಲ್ಲಿ ತೊಂದರೆಯಾಗಿದೆ, ಆದಕಾರಣ ಇಂಥ ಸ್ಥಾನದಲ್ಲಿ ನಾನು ಕುಳಿತುಕೊಳ್ಳುವುದಿಲ್ಲ, ನನ್ನಿಂದ ಒಂದು ಒಳ್ಳೆಯ ಆಡಳಿತವನ್ನು ಮಾಡುವ ವ್ಯಕ್ತಿಯನ್ನು ಕೂಡಿಸುವುದರ ಮುಖಾಂತ ಒಂದು ಒಳ್ಳೆಯ ಕೆಲಸವನ್ನು ಮಾಡುತ್ತೇನೆ ಎಂದು ಅವರ ಮನಸ್ಸಿನಲ್ಲಿರಬೇಕು. ಅವರ ಪಕ್ಷದ ಸಂಪ್ರದಾಯದಲ್ಲಿ ಕೂಡ ಅದು ನಡೆದಿದೆ. ಬಹುಶಃ ನಾನು ಒರಿಸ್ಸಾದ ಘಟನೆಯನ್ನು ಉಲ್ಲೇಖ ಮಾಡಬೇಕಾಗಿಲ್ಲ. ಅಲ್ಲೇನು ಕ್ರಿಶ್ಚಿಯನ್ ಪಾದ್ರಿಯವರ ಮರ್ಡರ್ ಆಯಿತು, ಆ ಪಾದ್ರಿಯ ಜೀವಕ್ಕೂ, ಬಹುಶಃ ಇಲ್ಲಿ ಮರ್ಡರ್ ಆದ ದಲಿತರ ಜೀವಕ್ಕೂ ಬೇರೇನೂ ವ್ಯತ್ಯಾಸವಿಲ್ಲ ಎಂದು ನಾನು ಭಾವಿಸುತ್ತಿದ್ದೇನೆ. ಬಹುಶಃ ಇವರು ದಲಿತರಾದ ಕಾರಣಕ್ಕೆ ಅವರಿಗೆ ಆ ಸ್ಥಾನಮಾನ ಇಲ್ಲವೋ? ಅಥವಾ ಅಲ್ಲಿದ್ದವರಿಗೆ ಆ ಸ್ಥಾನಮಾನ ಇದೆಯೋ? ಇದು ನನಗೆ ಗೊತ್ತಾಗುತ್ತಿಲ್ಲ. ತಕ್ಷಣ ಅಲ್ಲಿಗೆ ಅವರ ಪಕ್ಷದ ಪ್ರಮುಖರು ಬಂದು ನೀವು ಈ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ನಾಲಾಯಕ್ ಎಂದು ಅವರಿಂದ ರಾಜೀನಾಮೆ ಕೊಡಿಸುವಂತಹ ಕೆಲಸಗಳನ್ನು ಕೊಡಿಸಿದರು. ಇವತ್ತು ಅದೇ ಕೆಲಸವನ್ನು ಇಲ್ಲೂ ಮಾಡಬೇಕು. ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಮುಖ್ಯಮಂತ್ರಿಗಳು ರಾಜೀನಾಮೆ ಕೊಡುವುದರ ಮುಖಾಂತರ ಇಡೀ ಸಮಾಜಕ್ಕೊಂದು ಗ್ರೀನ್ ಸಿಗ್ನಲ್ ಏನೆಂದರೆ ಆಡಳಿತ ವ್ಯವಸ್ಥೆಯಲ್ಲಿ ನಾನು ವಿಫಲನಾದ ಮೇಲೆ ನಾನು ಆ ಒಂದು ಆಡಳಿತದ ಚುಕ್ಕಾಣಿಯನ್ನು ಹಿಡಿಯಲಿಕ್ಕೆ ನಿಲ್ಲಬಾರದು. ಮುಂದಿನ ದಿನಗಳಲ್ಲಿ ಒಳ್ಳೆಯ ಆಡಳಿತ ಬರಬೇಕು ಎನ್ನುವ ನೈತಿಕ ನೆಲೆಯಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಯವರೆ ರಾಜೀನಾಮೆ ಕೊಡಬೇಕೆಂದು ಹೇಳುವಂಥ ಒಂದು ಆಗ್ರಹವನ್ನು

ಕೂಡ ನಾನು ಈ ಸಂದರ್ಭದಲ್ಲಿ ಮಾಡಲು ಇಚ್ಚೆಪಡುತ್ತಿದ್ದೇನೆ. ಇವತ್ತು ಇನ್ನೊಂದು ಪ್ರಮುಖ ಸಂಗತಿಗಳನ್ನು ನಾವು ತಿಳಿದುಕೊಳ್ಳಬೇಕಾದುದು ಏನೆಂದರೆ ಇಂಥ ಗಲಾಟೆಗಳು, ಮತ್ತು ಬಾಕಿ ಎಲ್ಲಾ ಆಗುವ ಸಂದರ್ಭಗಳಲ್ಲಿ ಯಾರು ಅದನ್ನು ಹತೋಟಿಗೆ ತರುವುದಕ್ಕೆ ಪಯತ್ನ ಮಾಡಬೇಕೋ ಅಂಥವರ ಮೇಲೆ ವಿಪರೀತಿ ಒತ್ತಡಗಳನ್ನು ಹೇರುವುದು ನಿಲ್ಲಬೇಕು ಮೇಲಿನ ಅಧಿಕಾರಿಗಳು, ಮತ್ತೊಬ್ಬರು ಸರಿಯಾದ ವಿಚಾರಗಳನ್ನು ಅವರಿಗೆ ಹೇಳದೆ ಅವರಿಗೆ ಬೇಕಾದ ಎಲ್ಲಾ ಸಹಕಾರಗಳನ್ನು ಕೊಡದಿದ್ದರೆ ಅವರಿಗೆ ತೊಂದರೆಯಾಗುತ್ತದೆ. ಇನ್ನು ಕೂಡ ಪೋಲೀಸ್ ವ್ಯವಸ್ಥೆಯಲ್ಲಿ ಆಮೂಲಾಗ್ರವಾದ ಒಂದು ಬದಲಾವಣೆಯಾಗಬೇಕಾಗಿದೆ. ಏತಕ್ಕೆ ಬದಲಾವಣೆಯಾಗಬೇಕೆಂದರೆ ಈಗಾಗಲೇ ಮಾನ್ಯ ಚೌಡರೆಡ್ಡಿಯವರು ಹೇಳಿದ ಪ್ರಕಾರ ಕಳೆದ ಹಲವಾರು ವರ್ಷಗಳಿಂದ ಅವರು ಮಂತ್ರಿಯಾಗಿದ್ದಾಗಲೇ ಅಲ್ಲಿ ಶಾಂತಿಸುವ್ಯವಸ್ಥೆ ಉಂಟಾಗಬೇಕೆಂದರೆ ಅಲ್ಲಿ ಒಂದು ಪೋಲೀಸ್ ಠಾಣೆಯನ್ನು ಸ್ಥಾಪಿಸ ಬೇಕೆಂದು ಅವರು ಹೇಳಿದ್ದರು. ಆದರೆ ಇಷ್ಟರತನಕ ಅದರ ಬಗ್ಗೆ ಯಾರು ಕೂಡ ಮುತುವರ್ಜಿ ವಹಿಸಲಿಲ್ಲ. ಕಳೆದ ಎರಡು-ಮೂರು ವರ್ಷಗಳಿಂದ ನಿರಂತರವಾಗಿ ಈ ರೀತಿಯ ಸಮಾಜಘಾತುಕ ಶಕ್ತಿಗಳು ಅಲ್ಲಿ ಕೆಲಸಮಾಡುತ್ತಿವೆ. ಆ ಸಮಾಜಘಾತುಕ ಶಕ್ತಿಗಳಿಗೆ ಒಂದು ಫುಲ್‌ಸ್ಟಾಪ್ ಹಾಕುವಂಥ ಕೆಲಸಗಳನ್ನು ಕೂಡ ಮಾಡಲಿಕ್ಕೆ ಆಗದ ಸಂದರ್ಭದಲ್ಲಿ ಅದನ್ನು ಕೂಡ ನಾವು ನೋಡಬೇಕಾಗಿದೆ. ಒಟ್ಟಾರೆ ಈ ಒಂದು ಸಮಾಜವಿದ್ರೋಹಿ ಘಟನೆಗಳಿಗೆ ನಾವು ಒಂದು ಕಡಿವಾಣವನ್ನು ಹಾಕಬೇಕಾಗಿದೆ. ಇದರ ಬಗ್ಗೆ ಕೂಲಂಕುಷವಾದ ತನಿಖೆಯಾಗಬೇಕು.

ಶ್ರೀ ಎ.ರಾಮದಾಸ್ (ಕೃಷ್ಣಾರಾಜ್): ಮಾನ್ಯ ಉಪಾಧ್ಯಕ್ಷರೇ, ಪೋಲೀಸ್ ಠಾಣೆ ಆಗಬೇಕೆನ್ನುವ ವಿಚಾರ ಪ್ರಮುಖವಾಗಿ ಅವತ್ತಿನಿಂದಲೂ ಇದೆ. ಆದರೆ ಮಾನ್ಯ ಖರ್ಗೆಯವರು ಇಲ್ಲಿ ಕುಳಿತಾಗ ಯಾವುದೇ ಒಂದು ವಿಚಾರವನ್ನು ಮಾತನಾಡುವ ಸಂದರ್ಭದಲ್ಲಿ ನಾವು ಎದ್ದು ಹೋಗದೆ ಅವರ ಭಾಷಣವನ್ನು ಕೇಳುತ್ತಿದ್ದೆವು. ಅನುಭವಿಗಳು, ಅವರುಹೇಳುವ ವಿಚಾರವನ್ನು ಕೇಳುತ್ತಿದ್ದೆವು. ಇಲ್ಲಿ ಕುಳಿತ ಸಂದರ್ಭದಲ್ಲಿ ಕಳೆದಬಾರಿ ಒಂದು ವಿಚಾರವನ್ನು ಹೇಳಿದರು. ಗೃಹಇಲಾಖೆಯಲ್ಲಿ ವಿಶೇಷವಾಗಿ ಪೋಲೀಸ್‌ಠಾಣೆಗಳಲ್ಲಿ ಒಂದೇ ಸಮಾಜದ ವ್ಯಕ್ತಿಗಳು ಎಲ್ಲಾ ಸ್ಥಾನಗಳಲ್ಲಿ ಇರುವುದು ಸೂಕ್ತವಲ್ಲ ಅದು ಒಳ್ಳೆಯದಲ್ಲ ಎನ್ನುವ ವಿಚಾರವನ್ನು ಅವರು ಹೇಳಿದ್ದರು. ಆದರೆ ಆ ಠಾಣೆಯಲ್ಲಿ ಡಿವೈಎಸ್‌ಪಿ ಯಿಂದ ಹಿಡಿದು ಹೆಡ್‌ಕಾನ್‌ಸ್ಟೇಬಲ್‌ವರೆಗೂ ಕೂಡ ಒಂದೇ ಸಮಾಜದ ಒಬ್ಬ ವ್ಯಕ್ತಿ ಇರುವಾಗ ಏನಾಗುತ್ತದೆ ಎನ್ನುವ ಪರಿಣಾಮ ಅವರಿಗೂ ಗೊತ್ತಿದ್ದರೂ ಕೂಡ ಆರು ತಿಂಗಳುಗಳ ಕಾಲದಿಂದ ಏಕೆ ಈ ಬದಲಾವಣೆಯನ್ನು ಮಾಡಲಿಲ್ಲ ಎನ್ನುವುದು ಇಲ್ಲಿ ಅತಿ ಪ್ರಮುಖವಾದುದು ಠಾಣೆ ಮಾಡುವುದು ಒಂದು ಭಾಗ. ಆದರೆ ಇರುವ ವ್ಯವಸ್ಥೆಯೊಳಗಡೆ ಏನಾಯಿತು?

ಎರಡನೆಯದು ಇವತ್ತು ಪ್ರಮುಖವಾಗಿ ತುಂಬಾ ನೋವಿನಿಂದ ಹೇಳಬೇಕಾಗಿದೆ. ಅವರ ಇಲಾಖೆಯಲ್ಲಿ ಬಹಳ ಅನುಭವಿಗಳು ಇದ್ದಂಥವರು ಇದ್ದರು. ಆದರೆ ಇವತ್ತು ತಂದೆ ಇಲ್ಲದಂಥ ಒಂದು ಇಲಾಖೆಯಾಗಿದೆ. ಇವತ್ತು ಈ ರಾಜ್ಯದ ಡಿಜಿಪಿ ಯಾರು ಎನ್ನುವುದೇ ಎಲ್ಲರಿಗೂ ಒಂದು ಪ್ರಶ್ನೆಯಾಗಿದೆ.

ಉಪಾಧ್ಯಕ್ಷರು: ನಿಮಗೆ ಅವಕಾಶ ಸಿಕ್ಕಾಗ ನೀವು ಮಾತನಾಡಿ.

ಶ್ರೀ ಎ.ರಾಮದಾಸ್: ಈ ವಿಚಾರದ ಬಗ್ಗೆ ನಾನು ಮಾತನಾಡುತ್ತಿಲ್ಲವಾದ್ದರಿಂದ ಹೇಳುತ್ತಿದ್ದೇನೆ. ನಾನು ಇದಕ್ಕೆ ಸಿಗ್ನೇಟರಿ ಅಲ್ಲ. ಏಕೆಂದರೆ ಈ ಇಲಾಖೆಯ ಟಾಪ್‌ನಲ್ಲಿ ಇರುವಂಥವರೇ ಒಂದು ಅನಿಶ್ಚಿತವಾದ ಪರಿಸ್ಥಿತಿಯಲ್ಲಿ ಇರುವುದರಿಂದ ಪೋಲೀಸ್ ಕಾನ್‌ಸ್ಟೇಬಲ್‌ರವರಿಗೂ ಕೂಡ ಇದು ಯಾವ ರೀತಿ ಪರಿಣಾಮ ಬೀರುತ್ತದೆ ಎನ್ನುವುದಕ್ಕೆ ಇದು ಒಂದು ಉದಾಹರಣೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸದಾನಂದಗೌಡ. ಡಿ.ವಿ: ಆದ್ದರಿಂದ ಮಾನ್ಯ ಅಧ್ಯಕ್ಷರೆ ಇದರ ಗಂಭೀರತೆಯನ್ನು ಅರಿತು ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಏಕೆಂದರೆ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಎರಡನೆಯದಾಗಿ, ಇಡೀ ಸಮಾಜಕ್ಕೆ ವಿಶ್ವಾಸಾರ್ಹತೆ ಬರತಕ್ಕ ವ್ಯವಸ್ಥೆಗಳು ಬೇಕು. ಇವತ್ತು ಸಮಾಜದಲ್ಲಿ ಯಾರು ವಿದ್ರೋಹಿಗಳಿದ್ದಾರೆ ಅವರುಗಳ ಜೊತೆಯಲ್ಲಿ ಶಾಮೀಲಾಗಿ ಆಗುವಂಥ ಕೆಲಸಗಳು, ಬೆಂಗಳೂರು, ಹುಬ್ಬಳ್ಳಿ ಬೇರ ಬೇರೆ ಕಡೆಗಳಲ್ಲಿ, ಎಲ್ಲಾ ಕಡೆಗಳಲ್ಲಿ ಯಾರು ಈ ರೀತಿಯಾದ ಭೂಗತವಾದ ಚಟುವಟಿಕೆಗಳನ್ನು ಮಾಡುತ್ತಾರೋ ಅವರಿಗೆ ರಾಜಕೀಯ ಸಂಬಂಧವಿದೆಯೆಂದು ಹೇಳುವಂಥ ಭಾವನೆಗಳು ಇದೆ. ಅವರುಗಳು ಕಾಣದ ಕೈವಾಡದ ಕೆಲಸವನ್ನು ಮಾಡಿದ್ದರು ಸಹ ಅವರಿಗೆ ರಕ್ಷಣೆ ಇದೆ ಎಂಬುದನ್ನು ಎಲ್ಲಾ ಕಡೆ ನೋಡುತ್ತಿರುವ ಸಂಗತಿಯಾಗಿದೆ. ಇದಕ್ಕೆ ಇತಿಶ್ರೀ ಹೇಳಬೇಕಾದರೆ ಇಂಥ ಒಂದು ವಿಚಾರಗಳಲ್ಲಿ ರಾಜಕೀಯ ಹಸ್ತಕ್ಷೇಪ ಇರಬಾರದು. ಈ ಒಂದು ಘಟನೆಯಲ್ಲಿ ಇರುವ ರಾಜಕೀಯ ಹಸ್ತಕ್ಷೇಪ ಪೂರ್ಣವಾಗಿ ಹೊರಗಡೆ ಬಂದರೆ ಬಹುಶಃ ಮುಂದಿನ ದಿವಸಗಳಲ್ಲಿ ಅಂಥದಕ್ಕೆ ಕಡಿವಾಣ ಹಾಕಲು ಸಾಧ್ಯವಾಗುತ್ತದೆ. ಇದರಿಂದ ಪೋಲೀಸ್ ಇಲಾಖೆಯ ನೈತಿಕತೆ ಹೆಚ್ಚಾಗುತ್ತದೆ. ಮತ್ತು ಮುಂದಿನ ದಿನಗಳಲ್ಲಿ ನಿಜವಾಗ ತಪ್ಪಿತಸ್ತರನ್ನು ಹಿಡಿಯಲು ಪೋಲೀಸ್ ಇಲಾಖೆಯಲ್ಲಿ ಒಂದು ಸ್ಥೈರ್ಯ ಬರುತ್ತದೆ. ಆ ಹಿನ್ನೆಲೆಯಲ್ಲಿ ಈ ಕೆಲಸಗಳು ಆಗಬೇಕು. ಇದು ಮತ್ತೊಂದು ಬಿಹಾರ ಮತ್ತು ಆಂಧ್ರ ಪ್ರದೇಶದಂತೆ ಆಗಬಾರದು. ಈಗಾಗಲೆ ಆಗಿದೆ ಆದರೆ ಮುಂದೆ ಮತ್ತೆ ಇಂತಹ ಘಟನೆಗಳು ಆಗಬಾರದು. ಆದ್ದರಿಂದ ಇದರ ಬಗ್ಗೆ ಸಿ.ಬಿ.ಐ. ತನಿಖೆಯಾಗಬೇಕು. ಇದರಲ್ಲಿ ಬೇರೆ ರಾಷ್ಟ್ರ, ರಾಜ್ಯಗಳ ಕೈವಾಡವಿಲ್ಲವೆಂದು ಹೇಳಲು ಸಾಧ್ಯವಾಗುವುದಿಲ್ಲ.

ಅಕ್ಕಪಕ್ಕದ ರಾಜ್ಯಗಳಲ್ಲಿ ಐ.ಎಸ್.ಐ, ನಕ್ಸಲೈಟ್ಸ್‌ನ ವ್ಯವಸ್ಥೆಗಳಿರುವುದನ್ನು ನೋಡಿದರೆ ಬಹುಶಃ ಎಲ್ಲಾ ರೀತಿಯಲ್ಲೂ ಕೂಡ ಒಂದು instability create ಮಾಡುವಂಥ ಕೆಲಸಗಳನ್ನು ಈ ಭಾಗದಲ್ಲಿ ಮಾಡಲು ಸಾಧ್ಯತೆ ಇದೆ. ಇವೆಲ್ಲವು ಹೊರಗಡೆ ಬರಬೇಕಾದರೆ ಇದರ ಬಗ್ಗೆ ಸಿ.ಬಿ.ಐ. ತನಿಖೆ ಮಾಡಲೇ ಬೇಕು. ಜೊತೆಗೆ ನೈತಿಕವಾದ ಹೊಣೆಯನ್ನು ಹೊತ್ತು ಜವಾಬ್ದಾರಿಯುತವಾಗಿರುವಂಥ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ತಮ್ಮ ಸ್ಥಾನವನ್ನು ತೆರವು ಮಾಡಿ ಇಡೀ ಸಮಾಜದಲ್ಲಿ ಹೊಸ ಭಾವನೆ, ವಿಶ್ವಾಸ ಮೂಡುವಂಥ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಮಗೆ ವಂದನೆಗಳು.

+ ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ಈ ದಿನ ಯಾವ ವಿಚಾರದ ಬಗ್ಗೆ ಮಾತನಾಡುತ್ತಿದ್ದೇವೆ ಎಂದರೆ ಹೃದಯದಲ್ಲಿ ಒಂದು ಕಡೆ ಬೆಂಕಿ ಬರುತ್ತದೆ, ಮತ್ತೊಂದು ಕಡೆ ದುಃಖವು ಸಹ ಹರಿಯುತ್ತಿದೆ. ಕರ್ನಾಟಕ ರಾಜ್ಯದ ವಿಧಾನ ಸಭೆಯಲ್ಲಿ ನಾವು ಮಾತನಾಡುತ್ತಿದ್ದೇವಯೇ ಅಥವಾ ಬಿಹಾರ್‌ನ ವಿಧಾನಸಭೆಯಲ್ಲಿ ಮಾಡನಾಡುತ್ತಿದ್ದೇವೆಯೇ ಎಂಬ ಅನುಮಾನ ನನಗೆ ಬರುತ್ತಿದೆ. ಇಂಥ ಘಟನೆ ಕರ್ನಾಟಕ ರಾಜ್ಯದ ಇತಿಹಾಸದಲ್ಲೇ ಯಾವತ್ತು ನಡೆದಿಲ್ಲ. ನಮ್ಮ ರಾಜ್ಯ ಶಾಂತಿ, ಸೌಹಾರ್ಧತೆಗೆ ಹೆಸರಾದ ರಾಜ್ಯವಾಗಿದೆ. ನಮ್ಮ ಪೊಲೀಸ್ ಇಲಾಖೆಯ ಬಗ್ಗೆ ಸಹ ಒಂದು ಇತಿಹಾಸ, ಪರಂಪರೆ ಇದೆ. ಯಾವುದೇ ವಿಧಾನಸಭೆಯಲ್ಲಿ ಸಹ ಒಂದೇ ಸಲ ಎಂಟು ಜನ ದಲಿತರು ಸತ್ತಿದ್ದಾರೆ, ಅದರ ಬಗ್ಗೆ ಚರ್ಚೆಯಾಗಿದೆಯೆಂದು ನಾವು ಯಾವತ್ತು ಕೇಳಿಲ್ಲ. ಇದಕ್ಕಾಗಿ ನಾವೆಲ್ಲರು ತಲೆತಗ್ಗಿಸಬೇಕಾಗಿದೆ. ಇದಕ್ಕೆ ಕಾರಣಕರ್ತರು ಯಾರು ಎಂಬುಕ್ಕಿಂತ ಹೆಚ್ಚಾಗಿ ಏಕೆ ಈ ರೀತಿ ಆಗುತ್ತಿದೆ ನಾವು ಎಲ್ಲಿ ವಿಫಲರಾಗಿದ್ದೇವೆ? ಯಾರು ವಿಫಲರಾಗಿದ್ದಾರೆ? ಇದಕ್ಕೆ ಯಾರು ಹೊಣೆ? ಅದರ ಬಗ್ಗೆ ಸ್ವಲ್ಪ ಚಿಂತನೆ ಮಾಡಬೇಕಾಗಿದೆ. ಕಾಂಗ್ರೆಸ್ ಪಕ್ಷದ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಐದು ತಿಂಗಳುಗಳಾಯಿತು. ಈ ಸರ್ಕಾರ ಅಧಿಕಾರಕ್ಕೆ ಬರಬೇಕಾದರೆ ಯಾರು ಓಟನ್ನು ಹಾಕಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ದಲಿತರು, ಬಡವರು, ಅಲ್ಪಸಂಖ್ಯಾತರು ಕಾಂಗ್ರೆಸ್‌ನ ಬೆನ್ನೆಲುಬು ಎಂದು ಹೇಳಿ ಇವರು ಓಟನ್ನು ತೆಗೆದುಕೊಂಡರು. ಜನತಾಪಾರ್ಟಿ, ಜನತಾದಳ ಮೇಲ್ ವರ್ಗದವರ ಪಕ್ಷ, ಇವರು ದಲಿತರನ್ನು ತುಳಿಯುತ್ತಾರೆ, ಇವರಿಗೆ ದಲಿತರ ಬಗ್ಗೆ ಕಾಳಿಜಿ ಇಲ್ಲ, ಮುಂತಾಗಿ ನಮ್ಮನ್ನು ಟೀಕೆ ಮಾಡಿದರು, ಅವಮಾನ ಮಾಡಿದರು. ನಾವು ಅದನ್ನೆಲ್ಲ ಸಹಿಸಿಕೊಂಡಿದ್ದೆವು. ನಾವು ಕರ್ನಾಟಕ ರಾಜ್ಯದಲ್ಲಿ 1983, 1985, 1994 ಈ ಮೂರು ಬಾರಿ ಸರ್ಕಾರ ನಡೆಸಿದ್ದೇವೆ ಮಾನ್ಯ ರಾಚಯ್ಯನವರು ಗೃಹ ಖಾತೆಯ ಸಚಿವರಾಗಿದ್ದರು. ಮಾನ್ಯ ಸಿಂಧ್ಯ ರವರು ಸಹ ಗೃಹ ಖಾತೆಯ ಸಚಿವರಾಗಿದ್ದರು. ನಮ್ಮ ಅಧಿಕಾರದ ಅವಧಿಯಲ್ಲಿ ಇದೇ ಪೋಲೀಸ್ ಇಲಾಖೆ, ಸಿಬ್ಬಂದಿ ಇದ್ದರು. ನಮ್ಮ ಸರ್ಕಾರವಿದ್ದಾಗ ಯಾವುದೇ

ಸನ್ನಿವೇಶದಲ್ಲು ಒಂದೂ ಕೊಲೆಯಾಗಿಲ್ಲ. ತಾವು ಇದನ್ನು ಗಮನಿಸಬೇಕು. ನಾವೇನಾದರು ದಲಿತರ ವಿರೋಧಿಗಳಾಗಿದ್ದರೆ ಎಷ್ಟು ಕೊಲೆಗಳಾಗಬೇಕಿತ್ತು? ದಲಿತರ ಮೇಲೆ ಎಷ್ಟು ಲಾಠಿಚಾರ್ಜ್, ಗೋಲಿಬಾರ್ ಆಗಬೇಕಾಗಿತ್ತು? ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ 5 ತಿಂಗಳಿಂದೀಚೆಗೆ, ಕಳೆದ ಒಂದು ತಿಂಗಳ ಹಿಂದೆ ದಲಿ ಸಂಘರ್ಷ ಸಮಿತಿಯವರು ಸಂವಿಧಾನವನ್ನು ಕೇಂದ್ರ ಸರ್ಕಾರದವರು ಪುನರ್ವಿಮರ್ಶೆ ಮಾಡುತ್ತಿದ್ದಾರೆಂದು ಕೇಂದ್ರ ಸರ್ಕಾರವನ್ನು ಧಿಕ್ಕರಿಸಿ ಹೊರಟಾಗ, ಹೋರಾಟ ಮಾಡಲು ಹೊರಟಿದ್ದಾಗ ಇದ್ದವರು ಕೇವಲ 50-60 ಜನರು, ಅದಕ್ಕೆ ರಕ್ಷಣೆ ಕೊಟ್ಟುಕೊಂಡು ಹೋಗುತ್ತಿದ್ದ ಪೋಲೀಸ್ ಸಿಬ್ಬಂದಿಯ ಸಂಖ್ಯೆ 150 ಜನ, ಡಿ.ಎಸ್.ಎಸ್. ನವರು ಶಾಂತಿಯುತವಾಗಿ ಪ್ರದರ್ಶನ ಮಾಡುತ್ತಿದ್ದರು. ಅವರನ್ನು ಹೀನಾಯವಾಗಿ ಹೊಡೆದು ಲಾಠಿಚಾರ್ಜ್ ಮಾಡಿ ಒಬ್ಬ ದಲಿತನನ್ನು ಸಾಯಿಸಿದರು. ಡಿ.ಎಸ್.ಎಸ್. ನವರು ಪ್ರದರ್ಶನದ ಸಮಯದಲ್ಲಿ ಯಾವುದೇ ಆಸ್ತಿಪಾಸ್ತಿಗೆ ನಷ್ಟವನ್ನು ಉಂಟು ಮಾಡಿರಲಿಲ್ಲ, ಯಾವುದೇ ಬಸ್ಸಿಗೆ ಬೆಂಕಿಯನ್ನು ಇಟ್ಟಿರಲಿಲ್ಲ. ರಸ್ತೆ ತಡೆ ಮಾಡಿರಲಿಲ್ಲ. ಅವರು ಕೇವಲ ರಾಜ್ಯಪಾಲರಿಗೆ ಮನವಿಯನ್ನು ಸಲ್ಲಿಸಲು ಹೋಗುತ್ತಿದ್ದರು. ಅದಕ್ಕೆ ಯಾವ ಸರ್ಕಾರದಿಂದ ಅವರುಗಳ ಮೇಲೆ ಹೊಡೆತ? ಯಾವ ವಿಚಾರದಲ್ಲಿ ಹೊಡೆತ? ಯಾವ ಒಂದು ಪಕ್ಷ ಕರ್ನಾಟಕದಲ್ಲಿ ಅಧಿಕಾರ ಮಾಡುತ್ತಿದೆ ಅದು ಕೇಂದ್ರದಲ್ಲಿ ಸಂವಿಧಾನದ ವಿಮರ್ಶೆ ಮಾಡುತ್ತಿರುವುದು ತಪ್ಪು ಎಂದು ಹೇಳುತ್ತಿದ್ದಿರಿ ಅದರ ಪರವಾಗಿ ಪ್ರದರ್ಶನ ಮಾಡುತ್ತಿರುವವರ ಮೇಲೆ ಲಾಠಿ ಚಾರ್ಜು. ಇದು ತಮ್ಮ ಇಬ್ಬಗೆತನವನ್ನು ತೋರಿಸುತ್ತದೆ. ತಾವು ನಿಜವಾಗಿಯು ಕೇಂದ್ರ ಸರ್ಕಾರದ ಸಂವಿಧಾನ ಪುನರ್ವಿಮರ್ಶೆಯ ವಿರುದ್ಧ ಮಾತನಾಡುತ್ತಿದ್ದಿರೋ ಅಥವಾ ಕೇವಲ ಬೂಟಾಟಿಕೆಗೋಸ್ಕರ ಹೇಳಿಕೆ ಕೊಟ್ಟಿದ್ದಿರೋ ಎಂಬ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಸಾವಿಗೀಡಾದ ದಲಿತನ ಮರಣೋತ್ತರ ಪರೀಕ್ಷೆಯಾಗುತ್ತದೆ. ಸರ್ಕಾರ ತಮ್ಮ ಕೈಯಲ್ಲಿದೆ. ವೈದ್ಯರ ಕೈಯಿಂದ ಮರಣೋತ್ತರ ಪರೀಕ್ಷೆಯ ಒಂದು ವರದಿಯನ್ನು ಕೊಡಿಸುತ್ತೀರಿ. ದಲಿತ ಸಂಘರ್ಷ ಸಮಿತಿಯವರು ಮರಣೋತ್ತರ ಪರೀಕ್ಷೆ ಸರಿಯಿಲ್ಲ, ಮತ್ತೆ ಪರೀಕ್ಷೆ ಮಾಡಿಸಬೇಕು ಎಂದು ಒತ್ತಾಯ ಮಾಡಿದಮೇಲೆ ಮತ್ತೊಮ್ಮೆ ಪರೀಕ್ಷೆ ಮಾಡಿಸುತ್ತೀರಿ. ಅದರ ಬಗ್ಗೆ ಏನೂ ಗೊತ್ತಿಲ್ಲ. ಆದರೆ ನಿನ್ನೆ ಒಂದು ಪತ್ರಿಕೆಯಲ್ಲಿ ಸಾವಿಗೀಡಾದ ದಲಿತ ವ್ಯಕ್ತಿಯು ಲಾಠಿಚಾರ್ಜ್‌ನಿಂದ ಸತ್ತಿಲ್ಲ, ಹೃದಯಾಘಾತದಿಂದ ಎಂದು ವರದಿ ಬಂದಿದೆ. ಇದನ್ನು ಯಾರಾದರು ನಂಬುವ ವಿಚಾರವೆ? ಸರ್ಕಾರ ನಮ್ಮ ಕೈಯಲ್ಲಿದೆ, ಅಧಿಕಾರಿಗಳು ನಾವು ಹೇಳಿದಂತೆ ಕೇಳುತ್ತಾರೆಂದು ದಲಿತರನ್ನು ಸಾಯಿಸಿ ಪತ್ರಿಕೆಗಳಲ್ಲಿ ಏನು ಬೇಕಾದರು ವರದಿ ನೀಡಬಹುದೆ? ಆವತ್ತು ಈ ಘಟನೆಗೆ ಕಾರಣರಾದವರನ್ನು ಸಸ್‌ಪೆಂಡ್ ಮಾಡಿದ್ದೇವೆ, ಸತ್ತವರ ಕುಟುಂಬದವರಿಗೆ ಒಂದು ಲಕ್ಷ ಪರಿಹಾರ ಕೊಟ್ಟಿದ್ದೇವೆಂದು ಹೇಳಿಕೆ ಕೊಟ್ಟರು. ಅಂದರೆ ಈ ಸಾಯಿಸುತ್ತಿರತಕ್ಕದ್ದು ಒಂದು ಲಕ್ಷ ರೂಪಾಯಿ ಕೊಡುವುದಕ್ಕೆ.

ಈ ದಲಿತರ ಒಂದು ಜೀವ ಕೇವಲ ಒಂದು ಲಕ್ಷ ರೂಪಾಯಿ ಬೆಲೆಯೆ? ಹಾಗಿದ್ದರೆ ನನಗೆ ಎಷ್ಟು ಬೆಲೆ ಇರಬಹುದು? ಮಾನ್ಯ ಖರ್ಗೆಯವರಿಗೆ ಹತ್ತು ಲಕ್ಷ ಬೆಲೆ ಇರಬಹುದು. ಆ ಹೋಲಿಕೆ ತೆಗೆದುಕೊಂಡರೆ ಇಷ್ಟು ಇರಬಹುದು. ಆ ಪ್ರಾಣಕ್ಕೆ ಬೆಲೆ ಇಲ್ಲವೆ? ಈ ರೀತಿ ಏಕೆ ಆಗುತ್ತಿದೆ? ಜನರನ್ನು ಮೋಸ ಮಾಡಿ ಓಟನ್ನು ಪಡೆದುಕೊಂಡು ಅಧಿಕಾರಕ್ಕೆ ಬಂದಿರುವ ಪಕ್ಷಗಳು ಯಾವ ರೀತಿಯಲ್ಲಿ ನಡೆದುಕೊಂಡಿದೆ ಎಂಬ ಬಗ್ಗೆ ಬಹಳ ತೀವ್ರವಾಗಿ ಚಿಂತನೆ ಮಾಡಬೇಕಾಗಿದೆ. ಒರಿಸ್ಸಾದಲ್ಲಿ ನಾಲ್ಕು ಜನ ಪಾದ್ರಿಗಳನ್ನು ಕೊಲೆ ಮಾಡಲಾಯಿತು. ಆ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಅದರ ಬಗ್ಗೆ ಯಾವ ರೀತಿಯ ಕ್ರಮ ಕೈಗೊಂಡಿತು? ಇದೊಂದು ವಿಚಾರವಾದರೆ, ಇನ್ನೊಂದು ಕಡೆ ನಮ್ಮ ರಾಜ್ಯದಲ್ಲಿ 1989ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಂಥ ಸಂದರ್ಭದಲ್ಲಿ ರಾಮನಗರದಲ್ಲಿ ಕೋಮುಗಲಭೆಯುಂಟಾಗಿ ಅಲ್ಪಸಂಖ್ಯಾತರ ಮೇಲೆ ಹಲ್ಲೆಯಾದಾಗ ಮುಖ್ಯಮಂತ್ರಿಯಾಗಿ ಉತ್ತಮ ರೀತಿಯ ಆಡಳಿತ ಕೊಡುತ್ತಿದ್ದ ಸನ್ಮಾನ್ಯ ವೀರೇಂದ್ರ ಪಾಟೀಲರನ್ನು ಬದಲಾವಣೆ ಮಾಡಿದರು. ಆದರೆ, ಇವೊತ್ತಿನ ದಿವಸ ಒಂದೇ ಕುಟುಂಬಕ್ಕೆ ಸೇರಿದ ಎಂಟು ಜನ ದಲಿತರು ಸತ್ತಿರುವುದಕ್ಕೆ ಮತ್ತು ಮೊನ್ನೆ ದಿವಸ ದಲಿತ ಸಂಘಟನೆ ಮೇಲೆ ಲಾಠಿ ಚಾರ್ಜ್ ಮಾಡಿರುವ ಕಾರಣ ಸತ್ತಿರುವವರ ಬಗ್ಗೆ ನಿಮ್ಮ ಪಕ್ಷದ ಮುಖಂಡರುಗಳು ಯಾವ ರೀತಿಯ ತೀರ್ಮಾನ ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ಜನರೇ ಯೋಚಿಸುತ್ತಾರೆ. ನಮ್ಮ ಪಕ್ಷದ ನಾಯಕರಾದ ಪಿ.ಜಿ.ಆರ್.ಸಿಂಧ್ಯರವರು ಹೇಳಿದಂತೆ ಪತ್ರಿಕೆಗಳಲ್ಲಿ ಏನು ಬೇಕಾದರೂ ಬರೆಸಿಕೊಂಡು ಬಚಾವಾಗಬಹುದು ಮತ್ತು ಯಾವ ರೀತಿಯಲ್ಲಿ ಬೇಕಾದರೂ ರಿಪೋರ್ಟ್‌ಗಳನ್ನು ತಿದ್ದಬಹುದು. ಆದರೆ, ಜನರ ಅನಿಸಿಕೆಗಳನ್ನು ಮಾತ್ರ ತಿದ್ದುವುದಕ್ಕಾಗುವುದಿಲ್ಲ. ಜನರ ಮನಸ್ಸಿನಲ್ಲಿ ಏನು ಅಭಿಪ್ರಾಯ ಮೂಡುತ್ತದೋ, ಅದನ್ನು ಯಾರೂ ಕೂಡ ತಿದ್ದುವುದಕ್ಕಾಗುವುದಿಲ್ಲ. ಇದರ ಬಗ್ಗೆ ಇವೊತ್ತಿನ ದಿವಸ ಜನರೇ ಯೋಚಿಸುವಂಥ ಸಂದರ್ಭ ಬಂದಿದ್ದು, ಯಾವ ಸರ್ಕಾರ ಅಧಿಕಾರಕ್ಕೆ ಬರುತ್ತದೋ ಆ ಸರ್ಕಾರ ನೈತಿಕ ಬಲವನ್ನು ಪಡೆಯಬೇಕಾಗುತ್ತದೆ. ನೈತಿಕತೆ ಇಲ್ಲದಿರುವಂಥ ಸರ್ಕಾರ ಒಳ್ಳೆಯ ಆಡಳಿತ ಕೊಡಲು ಸಾಧ್ಯವಿಲ್ಲ. ಇದೆಲ್ಲವೂ ಯಾವ ರೀತಿಯಾಯಿತು ಎಂಬುದರ ಬಗ್ಗೆ ಇವೊತ್ತು ನಾವು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಸತ್ತಿರತಕ್ಕಂಥ ಎಂಟು ಜನರು ಒಂದೇ ಕುಟುಂಬಕ್ಕೆ ಸೇರಿರುವ ಅಣ್ಣ-ತಮ್ಮಂದಿರಾಗಿದ್ದಾರೆ. 1998ರಲ್ಲಿ ಒಂದು ಘಟನೆ ಜರುಗಿ, ಆ ಸಂದರ್ಭದಲ್ಲಿ ಮೂರು ಜನ ಪೊಲೀಸರನ್ನು ಜೀವಂತವಾಗಿ ಸುಟ್ಟು ಸಾಯಿಸಲಾಯಿತು. ಏಕೆ? ಇಂತಹ ಒಂದು ಸಾಂಸ್ಕೃತಿಕ ಸಂಘಟನೆ ಕಾರ್ಯಕ್ರಮದ ಪ್ರದರ್ಶನಕ್ಕೆ ಸೂಕ್ತ ರಕ್ಷಣೆ ಕೊಡದೇ ಅಡ್ಡಿಪಡಿಸುತ್ತಿದ್ದರೆನ್ನುವ ಕಾರಣಕ್ಕೆ ಅಂದು ಬಿಲ್ಲಾಂಡ್ಲ ಹಳ್ಳಿಯಲ್ಲಿ ಮೂರು ಜನ ಪೊಲೀಸರನ್ನು ಸುಟ್ಟು ಹಾಕಲಾಯಿತು. ಅವೊತ್ತು ಪ್ರಾರಂಭವಾದ ವೈಷಮ್ಯ ಇಂದಿನವರೆವಿಗೂ ನಡೆದುಕೊಂಡು ಬರುತ್ತಿದೆ. ಅಂದಿನ

ಘಟನೆಯಿಂದ ಇಂದಿನ ಘಟನೆವರೆಗೆ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದೆ? ಎರಡು ವರ್ಷಗಳ ಹಿಂದೆ 10ನೇ ತಾರೀಖಿನಂದು ವೆಂಕಟರಮಣಪ್ಪ ಎಂಬುವರು ಯಾವುದೋ ಒಂದು ಹೆಣ್ಣುಮಗಳ ವಿಚಾರದಲ್ಲಿ ಇಲ್ಲವೇ ಬೇರಾವುದೋ ವಿಚಾರದಲ್ಲಿ ಕೊಲೆಯಾದರು. ಇವರ ಕೊಲೆಯಾದ ತಕ್ಷಣವೇ ಆತನ ಇಬ್ಬರು ತಮ್ಮಂದಿರು ಭಯಪಟ್ಟು ನಾವು ಈ ಊರಿನಲ್ಲಿದ್ದರೆ ನಮ್ಮನ್ನು ಏನಾದರೂ ಮಾಡಬಹುದೆಂದು ಹೆದರಿ ಚಿಂತಾಮಣಿಗೆ ಹಸ್ತಪ್ರತಿಯ 59ನೇ ಪುಟವನ್ನು ಮಾಡಿಲ್ಲ ಮಾಡುತ್ತಾರೆ. ಅವರು ಪೊಲೀಸ್ ಕಂಪ್ಲೆಂಟ್ ಕೊಟ್ಟು ಬರುವಾಗ ರಾತ್ರಿ 7.30ಯಾಗಿರುತ್ತದೆ. ಆಗ ನಮ್ಮ ಮೇಲೆ ಪೊಲೀಸ್ ಕಂಪ್ಲೆಂಟ್ ಕೊಟ್ಟಿದ್ದಾರೆಂಬ ಕಾರಣಕ್ಕೆ ಒಂದು ಗುಂಪು ಅವರನ್ನು ಹೊಡೆಯುವುದಕ್ಕೆ ಸಜ್ಜಾಗಿದೆ. ಆ ಗುಂಪಿಗೆ ನೂರಾರು ಜನರು ಬಂದು ಸೇರಿಕೊಳ್ಳುತ್ತಾರೆ. ಆಗ ಪೊಲೀಸರಿಗೆ ಎರಡು ವರ್ಷಗಳ ಹಿಂದೆ ಬಿಲ್ಲಾಂಡ್ಲಹಳ್ಳಿಯಲ್ಲಿ ಮೂರು ಜನ ಪೊಲೀಸರನ್ನು ಜೀವಂತವಾಗಿ ಸುಟ್ಟು ಸಾಯಿಸಿದ ಘಟನೆ ಜ್ಞಾಪಕಕ್ಕೆ ಬಂದು ನಾವು ಇಲ್ಲಿದ್ದರೆ ನಮ್ಮನ್ನು ಏನಾದರೂ ಮಾಡಬಹುದೆಂದು ಹೆದರಿ ಓಡಿ ಹೋಗುತ್ತಾರೆ. ಯಾವ ವರ್ಗದವರು ಏನು ಬೇಕಾದರೂ ಗಲಾಟೆ ಮಾಡಿ, ಎಷ್ಟು ಜನರನ್ನು ಬೇಕಾದರೂ ಕೊಲ್ಲಲಿ ಎಂದು ಸರ್ಕಾರ ಬಿಟ್ಟುಬಿಡುತ್ತದೆ. ಆ ಗುಂಪಿನಲ್ಲಿ ಕೃಷ್ಣಾರೆಡ್ಡಿಯವರು ಕೊಲೆಯಾಗುತ್ತಾರೆ. ಕೃಷ್ಣರೆಡ್ಡಿಯವರನ್ನು ಯಾರನ್ನು ಯಾರು ಕೊಲೆ ಮಾಡಿದರು? ಅವರಿಗೆ ಯಾರು ಚಾಕು ಹಾಕಿದರು? ಇದು ಯಾರಿಗೂ ಗೊತ್ತಾಗಲಿಲ್ಲ. ಇದೆಲ್ಲವೂ ಒಂದು ರೀತಿಯಲ್ಲಿ ನಿಗೂಢವಾಗಿದೆ. ಈ ಘಟನೆ ಜರುಗಿದ ತಕ್ಷಣ ಭಯದಿಂದ ಸತ್ತಿರುವ ವೆಂಕಟರಮಣಪ್ಪನ ಇಬ್ಬರು ತಮ್ಮಂದಿರಾದ ಶ್ರೀರಾಮಪ್ಪ ಮತ್ತು ಕೆಂಚಪ್ಪ, ಆತನ ತಂಗಿ ಪಾಪಮ್ಮ, ಈಕೆ ಬೇರ ಊರಿಗೆ ಮದುವೆಯಾಗಿದ್ದರೂ ಗಂಡನನ್ನು ಬಿಟ್ಟು ತಂದೆ ಮನೆಯಲ್ಲಿಯೇ ಸೇರಿಕೊಂಡಿರುತ್ತಾಳೆ, ಇವರ ಜೊತೆಗೆ ದೊಡ್ಡವನ ಮಗನಾದ ಒಬ್ಬ ಹುಡುಗ ಮತ್ತು ಪಕ್ಕದಲ್ಲಿ ವಾಸವಾಗಿದ್ದ ಆತನ ತಮ್ಮಂದಿರ ಮೂರು ಜನ ಹೆಣ್ಣುಮಕ್ಕಳು, ಇವರೆಲ್ಲರೂ ಮನೆಯೊಳಗೆ ಚಿಲಕ ಹಾಕಿಕೊಂಡು ಸೇರಿಕೊಂಡಂಥ ಸಂದರ್ಭದಲ್ಲಿ ಅಲ್ಲಿ ಜಮಾಯಿಸಿದ್ದ ಗುಂಪು ಚಿಲಕ ಹಾಕಿದ ಈ ಮನೆಗೆ ಹೊರಗಡೆಯಿಂದ ಬೀಗ ಹಾಕಿ ಜೊತೆಯಲ್ಲಿ ತಂದಿದ್ದ ಹುಲ್ಲು, ಸೀಮೆಎಣ್ಣೆ ಹಾಗೂ ಪೆಟ್ರೋಲ್ ಅನ್ನು ಬಳಸಿ ಸುಟ್ಟುಹಾಕುತ್ತಾರೆ. ಆಗ ಅಲ್ಲಿ ಯಾರೂ ಇಲ್ಲ. ಇವೊತ್ತು ಇಂತಹ ಕೃತ್ಯವನ್ನು ಯಾರು ಮಾಡಿದ್ದಾರೆ? ಇದೆಲ್ಲಕ್ಕಿಂತ ಹೆಚ್ಚಾಗಿ ಅಲ್ಲಿನ ಸ್ಥಳೀಯ ಪೊಲೀಸರು ಯಾವ ರೀತಿ ನಡೆದುಕೊಂಡಿದ್ದಾರೆಂಬುದು ನಾವುಗಳೆಲ್ಲರೂ ಚರ್ಚೆ ಮಾಡತಕ್ಕಂಥ ವಿಚಾರವಾಗಿದೆ. ಮಾನ್ಯ ಭೈರೇಗೌಡರು ಹೇಳಿರುವಂತೆ, ಅಲ್ಲಿನ ಪೊಲೀಸ್ ಠಾಣೆಯಲ್ಲಿರುವ ಸಬ್ ಇನ್ಸ್‌ಪೆಕ್ಟರ್ ಪರಿಶಿಷ್ಟ ಜಾತಿಯವರು, ಅಲ್ಲದೆ ಸರ್ಕಲ್ ಇನ್ಸ್‌ಪೆಕ್ಟರ್, ಡಿವೈಎಸ್‌ಪಿ ಮತ್ತು ಐ.ಜಿ.ಪಿ.ಯವರೂ ಸಹ ಪರಿಶಿಷ್ಟ ಜಾತಿಯವರಾಗಿದ್ದು, ಇವರಿಗಿಂತ ಮೇಲಿದ್ದವರೂ ಸಹ ದಲಿತರೇ ಆಗಿದ್ದರೂ ಈಗ

ನಾವು ಯಾರನ್ನು ದೂಷಿಸಬೇಕು? ವ್ಯವಸ್ಥೆಯನ್ನು ದೂಷಿಸ ಬೇಕೇ? ಅಧಿಕಾರಿಗಳನ್ನು ದೂಷಿಸಬೇಕೇ? ಯಾರನ್ನು ದೂಷಿಸಬೇಕೆಂಬುದು ನನಗಂತೂ ಅರ್ಥವಾಗುತ್ತಿಲ್ಲ. ಒಮ್ಮೆ ಬಾಬಾಸಾಹೇಬ್ ಅಂಬೇಡ್ಕರ್‌ರವರು ಸಾಯುವುದಕ್ಕೆ ಆರು ತಿಂಗಳ ಹಿಂದೆ ಒಂದು ಪುಸ್ತಕವನ್ನು ಓದುತ್ತಿದ್ದರು. ಗೃಹ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆ ಪುಸ್ತಕವನ್ನು ಓದಿರಬಹುದು, ಮತ್ತು ವಿಚಾರವನ್ನು ತಿಳಿದುಕೊಂಡಿರಬಹುದು. ಡಾ: ಅಂಬೇಡ್ಕರ್‌ರವರು ಅಕ್ಟೋಬರ್, 1956ನೇ ಇಸವಿಯಲ್ಲಿ ನಿಧನರಾದರು. 1956ರ ಮೇ ತಿಂಗಳಿನ ಒಂದು ಇಡೀ ರಾತ್ರಿ ಅವರು ಆ ಪುಸ್ತಕವನ್ನು ಓದುತ್ತಿರುತ್ತಾರೆ, ಬೆಳಿಗ್ಗೆವರೆಗೆ ನಿದ್ರೆಯನ್ನೂ ಮಾಡಿರುವುದಿಲ್ಲ. ಬೆಳಿಗ್ಗೆನವರೆಗೂ ಅವರು ಅದೇ ಪುಸ್ತಕವನ್ನು ಹಿಡಿದುಕೊಂಡು ದುಃಖ ಪಡುತ್ತಿರುವುದನ್ನು ಕಂಡ ಅವರ ಆಪ್ತ ಸಿಬ್ಬಂದಿ ದತ್ತು ಎಂಬುವರು ಅವರ ಬಳಿಗೆ ಬಂದು 'ಬಾಬಾಸಾಹೇಬ್, ಏನೋ ಬಹಳ ದುಃಖದಿಂದ ಇರುವಂತೆ ಕಾಣುತ್ತಿದೆಯಲ್ಲ, ಈ ಪುಸ್ತಕವನ್ನು ಓದಿ ಮುಗಿಸಲೆ ಇಲ್ಲವಲ್ಲ, ನಿಮ್ಮ ಮನಸ್ಸಿನಲ್ಲಿ ಏನು ಕಾಡುತ್ತಿದೆ? ಏಕಿಷ್ಟು ನೋವು ಅನುಭವಿಸುತ್ತಿದ್ದೀರಿ?' ಎಂದು ಕೇಳುತ್ತಾರೆ.

1.40 ಪಿ.ಎಂ

ನಾನು ತ್ಯಾಗ ಮಾಡಿದ್ದೇನೆ. ಈ ವರ್ಗದ ಜನರಿಗೆ ನ್ಯಾಯ ಒದಗಿಸಿಕೊಡಬೇಕು. ಅವರು ಗೌರವದಿಂದ ಬಾಳಬೇಕು ಎನ್ನುವುದಕ್ಕೋಸ್ಕರ ಹೋರಾಟ ಮಾಡಿದ್ದೇನೆ. ಸಂವಿಧಾನದಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇನೆ. ನಮ್ಮಿಂದ ಅನೇಕ ಜನರು ಶಾಸಕರಾಗಿದ್ದಾರೆ, ಮಂತ್ರಿಗಳು ಆಗಿದ್ದಾರೆ. ಮುಖ್ಯಮಂತ್ರಿಗಳೂ ಆಗಬಹುದು. ಲೋಕಸಭಾ ಸದಸ್ಯರುಗಳು ಆಗಬಹುದು. ಅಧಿಕಾರಿಗಳು ಆಗಬಹುದು. ನನ್ನಿಂದ ಯಾರಿಗೆ ಅನುಕೂಲ ಆಯಿತು? ಕೇವಲ ಎರಡು ಪರ್ಸೆಂಟ್ ಜನರಿಗೆ ಅನುಕೂಲ ಆಯಿತು. ಶೇಕಡಾ ಎರಡರಷ್ಟು ಮಾತ್ರ. ಹಳ್ಳಿಯಲ್ಲಿ 98 ಜನ ಅಮಾಯಕರು ಇದ್ದಾರೆ ಅವರು ಇವತ್ತು ಈ ಜನಾಂಗದ ಒಳಿತಿಗೋಸ್ಕರ, ಏಳಿಗೆಗೋಸ್ಕರ ಪ್ರಾಣಕ್ಕೆ ಪ್ರಾಣ ಕೊಡುತ್ತಾರೆ. ನಾನೊಂದು ಕೂಗು ಇವತ್ತು ಕೊಟ್ಟರೆ ಪ್ರಾಣ ಕೊಡುತ್ತಾರೆ. ಅಂತಹ ಜನರು ಇದ್ದಾರೆ. ಆದರೆ ಆ ಜನಕ್ಕೆ ನಾನೇನೂ ಮಾಡಿಲ್ಲ. ನಾನು ಏನೂ ಮಾಡುವುದಕ್ಕೆ ಆಗಲಿಲ್ಲ. ಇವತ್ತು ನಾನು ಕೊನೆಯ ಹಂತದಲ್ಲಿ ಇದ್ದೇನೆ. ನನ್ನಿಂದ ಯಾರು ಅನುಕೂಲ ಪಡೆದುಕೊಂಡಿದ್ದಾರೆ, ಅವರು ಆ ಆಜನರನ್ನು ನ್ಯಾಯವಾಗಿ ಕಾಪಾಡಬೇಕು. ಆದರೆ ನನಗೆ ಅನಿಸುತ್ತದೆ, ಈ ವಿದ್ಯಾವಂತರನ್ನು ನೋಡಿದರೆ ಇವರಿಂದಲೇ ಈ ಜನಗಳಿಗೆ ದ್ರೋಹ ಆಗುತ್ತದೆ ಎನ್ನುವ ಒಂದು ನೋವು ನನ್ನಲ್ಲಿ ಕಾಡುತ್ತಿದೆ. ಆದ್ದರಿಂದ ಇವತ್ತು ಇವರಿಂದಲೇ ಈ ಜನಗಳಿಗೆ ಮೋಸ ಆಗುತ್ತದೆ ಎನ್ನುವ ನೋವು ನನಗೆ ಕಾಣುತ್ತಿದೆ ಎಂದು ಅವರು ದುಃಖಪಟ್ಟುಕೊಂಡು ಹೇಳುತ್ತಾರೆ. ಇವತ್ತು ನೋಡಿದರೆ ಅದು ನಿಜ

ಎಂದು ಕಾಣಿಸುತ್ತದೆ. ಏನು ಪ್ರಯೋಜನ? ಅವರು ಮೀಸಲಾತಿ ಪದ್ಧತಿ ಕೊಟ್ಟರು. ನಾವೆಲ್ಲ ಮೀಸಲು ಕ್ಷೇತ್ರದಿಂದ ಶಾಸಕರಾದೆವು. ನೀವು ಏಳು ಬಾರಿ ಶಾಸಕರಾಗಿದ್ದೀರಿ ನಾವು ನಾಲ್ಕು ಬಾರಿ ಶಾಸಕರಾಗಿದ್ದೇವೆ. ಸಮಾಜದಲ್ಲಿ ನಾವು ದೊಡ್ಡ ಮುಖಂಡರುಗಳು ಎಂದು ಎನಿಸಿಕೊಂಡಿದ್ದೇವೆ. 36 ಜನ ಶಾಸಕರು ನಾವಿಲ್ಲಿ ಇದ್ದೇವೆ. ಎಷ್ಟು ಜನ ದಲಿತ ಐಎಎಸ್ ಅಧಿಕಾರಿಗಳು ಇದ್ದಾರೆ. ಅವರು ದುಃಖಪಟ್ಟುಕೊಂಡು ಹೇಳುತ್ತಾರೆ. ಇವತ್ತು ನೋಡಿದರೆ ಅದು ನಿಜ ಎಂದು ಬಹುಶಃ ಯಾವುದೇ ಒಂದು ಜನಾಂಗದಲ್ಲಿ ಇಷ್ಟೊಂದು ಅಧಿಕಾರಿಗಳು ಸಿಕ್ಕುವುದಿಲ್ಲ. ಸುಮಾರು 25 ಜನ ಐಪಿಎಸ್ ಅಧಿಕಾರಿಗಳು, ಸುಮಾರು 50 ಜನ ಐಎಎಸ್ ಅಧಿಕಾರಿಗಳು ಇದ್ದಾರೆ. ನಾವು 36 ಜನ ಶಾಸಕರು ಇದ್ದೇವೆ. ಇದಕ್ಕೇನಾ ನಮಗೆ ಡಾ: ಅಂಬೇಡ್ಕರ್ ಅವರು ಮೀಸಲಾತಿ ಕೊಟ್ಟು ಕಳಿಸಿದ್ದು? ಈ ಜನರನ್ನು ನಾವು ರಕ್ಷಣೆ ಮಾಡುವುದಕ್ಕೆ ಆಗಲಿಲ್ಲ ಎಂದರೆ ನಮ್ಮ ಸ್ವಾರ್ಥಕ್ಕೋಸ್ಕರ ಬೇರೆ ಜನರ ಜೊತೆಗೆ ಕೈಜೋಡಿಸಿದಾಗ ಈ ತರಹ ಆಗಬಹುದು. ಕೆಲವು ಅಧಿಕಾರಿಗಳು ಇದ್ದಾರೆ ಮೀಸಲಾತಿಯಿಂದ ಬಂದಿರತಕ್ಕ ಅಧಿಕಾರಿಗಳನ್ನು ನಾನು ನೋಡಿದ್ದೇನೆ. ಈ ಜನರ ರಕ್ಷಣೆಗಿಂತ ಅವರಿಗೆ ತಮ್ಮ ಸ್ವಾರ್ಥ ಬಹಳ ಮುಖ್ಯ ಆಗುತ್ತದೆ. ತಾವು ಸರ್ವೈವಲ್ ಆಗುವುದಕ್ಕೆ ಬೇರೆಯವರನ್ನು ಪ್ಲೀಸ್ ಮಾಡಬೇಕು. ಇಂತಹ ಒಂದು ಮೆಂಟಾಲಿಟಿ ಇರತಕ್ಕ ಈ ವರ್ಗದಲ್ಲಿ ಯಾರು ಈ ಜನರಿಗೆ ರಕ್ಷಣೆ ಕೊಡುವುದು? ಯಾರು ರಕ್ಷಣೆ ಕೊಡಬೇಕು ಎಂದು ನನಗಂತೂ ಅರ್ಥವಾಗುತ್ತಿಲ್ಲ. ಈ ಸಮಾಜದಲ್ಲಿ ಇವತ್ತು ಬೇರೆ ಜನಾಂಗದವರು ಇವರನ್ನು ಪ್ರಾಣಿಗಳ ರೀತಿಯಲ್ಲಿ ಕೊಲ್ಲುತ್ತಿದ್ದಾರೆ. ನಮ್ಮ ಕೆಟ್ಟ ಸಮಾಜ, ಜಾತಿ ವ್ಯವಸ್ಥೆ, ಇದೆ. ಆದರೆ ಈ ಜನರಿಗೆ ರಕ್ಷಣೆ ಕೊಡಲಿಲ್ಲ ಎಂದಾಗ ಯಾರು ನೋಡಬೇಕು? ನಾನು ಮೊದಲೇ ಹೇಳಿದೆ, ನೈತಿಕ ಛಲ ಈ ಸರ್ಕಾರಕ್ಕೆ ಬರಬೇಕು. ಇವತ್ತು ಮಾನ್ಯ ಖರ್ಗೆಯವರು ಗೃಹ ಮಂತ್ರಿಗಳು ಆದರು. ನನಗೆ ಅನಿಸುತ್ತದೆ ಅವತ್ತೇ ಇವರು ವೀಕ್ ಆದರು, ಅಬಲರಾದರು. ಈ ಒಂದು ಸೂಕ್ಷ್ಮವಾದ ಇಲಾಖೆಯಲ್ಲಿ ಖಾತೆ ವಹಿಸಿಕೊಂಡ ತಕ್ಷಣ ಒಂದು ಭಯ ಇರಬೇಕು, ಇನ್ನೊಂದು ಗೌರವ ಇರಬೇಕು. ಈ ಭಯ ಮತ್ತು ಗೌರವ ಎರಡೂ ಇದ್ದಾಗ ತನ್ನಷ್ಟಕ್ಕೆ ತಾನೇ ರಾಜ್ಯದಲ್ಲಿ ಶಾಂತಿ ನೆಲೆಸುತ್ತದೆ, ಒಬ್ಬರ ಬೀಳಬೇಕಾದರೆ ಭಯ ಬೀಳುತ್ತಾರೆ. ನನಗಾದರೂ ಅನಿಸುತ್ತದೆ ಇವರು ಎರಡನ್ನೂ ಸೃಷ್ಟಿ ಮಾಡಲಿಲ್ಲ. ಪತ್ರಿಕೆಯಲ್ಲಿ ಬರುತ್ತಿತ್ತು. ನೀವು ಮಾನ್ಯ ಮುಖ್ಯಮಂತ್ರಿ ಆಗುತ್ತೀರಿ, ಕಾಂಗ್ರೆಸ್ ಪಕ್ಷದಲ್ಲಿ ಮೊದಲ ಬಾರಿಗೆ ದಲಿತ ಪಕ್ಷದವರನ್ನು ಮುಖ್ಯ ಮಂತ್ರಿ ಮಾಡುತ್ತಾರೆಂದು ಪ್ರಚಾರ ಆಗಿದೆ. ಏಕೆ ಈ ರೀತಿ ಆಗಿದ್ದೀರಿ ಎಂದು ನಾನು ಕೇಳಿದರೆ ಆವಾಗಲೇ ಅವರು ಹೆದರಿಕೊಂಡರು. ಅರೆ, ಅವರು ಧೈರ್ಯವಾಗಿ ಹೇಳಬೇಕಾಗಿತ್ತು. ಹೌದು, ನಾನು ಪ್ರಯತ್ನ ಮಾಡಿದ್ದೆ, ಏಕೆ ಆಗಬಾರದು, ನಾನು ಏಳು ಸಾರಿ ಗೆದ್ದಿದ್ದೆ ಎಂದು ಹೇಳಬೇಕಿತ್ತು. ಆದರೆ ಮಾನ್ಯ ಎಸ್.ಎಂ.ಕೃಷ್ಣ ಅವರನ್ನು ಮುಖ್ಯಮಂತ್ರಿ ಮಾಡುತ್ತೇವೆಂದು ಪಕ್ಷ ತೀರ್ಮಾನ ಮಾಡಿತು, ನಾನು ಅದಕ್ಕೆ ತಲೆ ಬಾಗಿದ್ದೇನೆಂದು

ಹೇಳಿದ್ದರೆ ಯಾರೂ ಇವತ್ತು ತಪ್ಪು ಕಾಣುತ್ತಿರಲಿಲ್ಲ. ಅಷ್ಟಕ್ಕೇ ಹೆದರಿ ನಾನು ಯಾವತ್ತೂ ಹೇಳೇ ಇಲ್ಲ, ನೀವು ಸುಮ್ಮನೇ ನಮಗೂ ಅವರಿಗೂ ರಿಫ್ಟ್ ತರುತ್ತಿದ್ದೀರಿ, ಎಂದರು. ಇದೇ ಮೆಸೇಜ್ ಕರ್ನಾಟಕ ರಾಜ್ಯಕ್ಕೆ ಹೋಯಿತು. ಇವರೇನು ಇಷ್ಟು ಅಂಜುಬುರುಕರು ಎಂದು ಮೆಸೇಜ್ ಹೋಯಿತು. ಅವರು ಒಳಗಡೆ ಪ್ರಯತ್ನ ಮಾಡ್ತಿದ್ದು ನಿಜ, ಭರವಸೆಯೂ ಇತ್ತು. ಆದರೆ ನಾನು ಪ್ರಯತ್ನ ಮಾಡೇ ಇಲ್ಲ ಎಂದು ಸೋಮಶೇಖರ ಕೇಳಿದಾಗ ಹೇಳುತ್ತಾರೆ. ಇದೆಷ್ಟು ಬೆದರಿಕೆ ಇವರಿಗೆ ಇದೆ ಎಂಬ ಮೆಸೇಜ್ ಆ ಜನರಿಗೆ ಹೋಗುವುದರ ಜೊತೆಗೆ ಪೋಲೀಸ್ ಇಲಾಖೆಗೆ ಎಂತಹ ಮೆಸೇಜ್ ಹೋಗಬಹುದು ನೋಡಿ. ನಮ್ಮ ಸರ್ಕಾರ 1983 ಆಡಳಿತಕ್ಕೆ ಬಂದಾಗ ಮಲ ತಿನ್ನಿಸಿದ ಘಟನೆ ನಡೆಯಿತು. ಆಗಿನ ನಮ್ಮ ಮುಖ್ಯ ಮಂತ್ರಿಗಳು ಏನು ಹೇಳಿದರು? ಯಾವ ವರ್ಗದವರು ಮಲ ತಿನ್ನಿಸಿದ್ದಾರೆ, ಆ ವರ್ಗದವರಿಗೆ ಪೋಲೀಸ್ ನವರ ಕೈಯಲ್ಲಿ ಮಲ ತಿನ್ನಿಸುತ್ತೇನೆಂದು ಹೇಳಿದ್ದರು. ಇಂತಹ ಸ್ಟೇಟ್‌ಮೆಂಟ್, ಇಂತಹ ಒಂದು ಸೂಚನೆ, ಮೆಸೇಜ್ ಹೋಗಬೇಕು. ಇವರು ಮೊದಲೇ ಎಂತಹ ಮೆಸೇಜ್ ಕೊಟ್ಟರು ನೋಡಿ. ಪೋಲೀಸ್‌ನವರಿಗೆ ಆ ತರಹದ ಮೆಸೇಜ್ ಹೋದರೆ ಹೇಗೆ? ಮತ್ತು ಇಲ್ಲೊಂದು ಕಡೆ ಹೇಳಿದರು. ದಲಿತರು ಕೇಳಿದ್ದಾರೆ, ಸಸ್ಪೆಂಡ್ ಮಾಡುತ್ತಿದ್ದೇನೆ. ಅವರಿಗೆ ಒಳ್ಳೆಯ ಪೋಸ್ಟಿಂಗ್ ಕೊಟ್ಟಿದ್ದೇನೆ, ಸಧ್ಯಕ್ಕೆ ಏನೋ ವಿಚಾರಣೆ ಆಗಲಿ ಎಂಬಂತಹ ಹೇಳಿಕೆ ಕೊಟ್ಟರೆ ಅವರಿಗೆ ಎಂತಹ ಭಯ ಬರುತ್ತದೆ? ಯಾವ ಸರ್ಕಾರ ಅಧಿಕಾರಿಗಳನ್ನು ಎನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತದೆ, ಅಧಿಕಾರ ವ್ಯಕ್ತಿ ಪರವಾಗಿ ಇರಬಹುದು ಅಥವಾ ಪಕ್ಷಕ್ಕೇ ಆಗಲಿ ಆ ಸರ್ಕಾರ ಜನರಿಗೆ ಒಳ್ಳೆಯ ಆಡಳಿತ ಕೊಡಲಿಕ್ಕೆ ಸಾಧ್ಯವಿಲ್ಲ. ಇವತ್ತು ಆಗಿರತಕ್ಕದ್ದು ಇದು. ನಾನು ಇವತ್ತು ಕೇಳುತ್ತೇನೆ. ಇಂತಹ ಒಂದು ಸೂಕ್ಷ್ಮ ಸ್ಥಳದಲ್ಲಿ ಮೂರು ಜನರ ಕೊಲೆ ಆಗಿದೆ, ಅದು ಪೊಲೀಸ್‌ನವರದ್ದು ಕೊಲೆ ಆಗಿದೆ. ಅಂತಹ ಒಂದು ಸ್ಟೇಷನ್‌ಗೆ ವ್ಯಾಪ್ತಿಗೆ ಎಂತಹ ಸಬ್ ಇನ್ಸ್‌ಪೆಕ್ಟರ್ ಅವರನ್ನು ಕೊಟ್ಟಿದ್ದೀರಿ? ಆರು ಬಾರಿ ಸಸ್ಪೆಂಡ್ ಆದಂತಹವರನ್ನು ಕೊಟ್ಟಿದ್ದೀರಿ. ಏಕೆ ಕೊಟ್ಟಿರಿ? ಉದ್ದೇಶ ಏನು ಇದೆ ಅದರಲ್ಲಿ? ಏನು ಮುಲಾಜು ಇದೆ. ಆ ಮುಲಾಜಿಗೆ ನೀವು ಬಲಿ ಆದವರು ಒಳ್ಳೆಯ ಆಡಳಿತ ಕೊಡುವುದಕ್ಕೆ ಆಗುತ್ತದಾ? ಮುಲಾಜಿಗೆ ಒಳಗಾದವರು ಯಾವುದೇ ಸರ್ಕಾರ ಆಗಲಿ ಅಥವಾ ಮಂತ್ರಿಗೆ ಆಗಲಿ, ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಗೆ ಮುಲಾಜಿಗ ಬಲಿ ಆದಂತಹವರು ಯಾವುತ್ತೂ ಸಹ ನೈತಿಕ ಶಕ್ತಿಯಿಂದ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ನನಗೆ ಅನಿಸುತ್ತದೆ. ನಿಮಗೇನಾದರೂ ಈ ಜನರ ಬಗ್ಗೆ ಕಾಳಜಿ ಇದ್ದರೆ, ಈ ಜನರ ಬಗ್ಗೆ ಕಳಕಳಿ ಇದ್ದರೆ ನಾವು ನಮ್ಮನ್ನೇ ಆತ್ಮಾವಲೋಕನ ಮಾಡಿಕೊಳ್ಳಬೇಕಾದಂತಹ ಪರಿಸ್ಥಿತಿ ಬಂದಿದೆ. ನಾವು ಇನ್ನೇನೂ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ, ನಾವು ಪಶ್ಚಾತ್ತಾಪ ಪಡಬೇಕಾಗುತ್ತದೆ. ಪಶ್ಚಾತ್ತಾಪ ಎಂದರೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಟ್ಟರೆ ಬಂದು ಬಿಡುತ್ತದಾ? ಅಥವಾ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿದ ತಕ್ಷಣ ಪಶ್ಚಾತ್ತಾಪ ಬಂದು ಬಿಡುತ್ತದಾ? ಡಾ: ಅಂಬೇಡ್ಕರ್

ಅವರು ಹಿಂದೂ ಕೋಡ್ ಬಿಲ್‌ಗೆ ಗಾಗಿ ರಾಜೀನಾಮೆ ಕೊಟ್ಟರು. ಯಾವುದೋ ಒಂದು ಬಿಲ್‌ನಲ್ಲಿ ಮಹಿಳೆಯರಿಗೆ ರಕ್ಷಣೆ ಕೊಡತಕ್ಕ ವಿಚಾರದಲ್ಲಿ ಪ್ಲಾನಿಂಗ್ ಪೋರ್ಟ್ ಫೋಲಿಯೋ ಕೊಡಲಿಲ್ಲ ಎಂದು ರಾಜೀನಾಮೆ ಕೊಟ್ಟರು. ಈ ದೇಶದಲ್ಲಿ ಸ್ವಾತಂತ್ರ್ಯ ಬಂದಿದೆ. ನಾನು ಈ ದೇಶದ ಜನರಿಗೆ ಒಳ್ಳೆ ಪ್ಲಾನಿಂಗ್ ಕೊಡಬೇಕು ಒಳ್ಳೆಯ ಯೋಜನೆ ಹಾಕಬೇಕು. ಒಳ್ಳೆಯ ಯೋಚನೆ ಹಾಕಬೇಕು. ಒಳ್ಳೆಯ ದಿಕ್ಕು ರಾಜಿನಾಮೆ ಕೊಡಲಿಲ್ಲ. ಫೈನಾನ್ಸ್ ಕೊಡಿ ಎಂದು ರಾಜಿನಾಮೆ ಕೊಡಲಿಲ್ಲ. ನಾನು ತೋರಿಸಬೇಕು ಎಂದು ಉದ್ದೇಶ ಅವರಿಗೆ ಇತ್ತು. ಅವರೇನೂ ಎಕ್ಸೈಜ್ ಕೊಡಿ ಎಂದು ರಾಜೀನಾಮೆ ಕೊಟ್ಟ ವಿಚಾರವನ್ನು ನಾನು ಹೇಳಿಕೊಳ್ಳಲೇ ಬಾರದು. ನಾನು ಎಣಿಸಿದ್ದೆ. ಇವತ್ತು ಅವರು ರಾಜೀನಾಮೆ ಒಂದೇ ಸರಿಗೆ ಕೊಟ್ಟಿದ್ದರೆ ಅವರು ಮುಖ್ಯಮಂತ್ರಿಗಳು ಆಗುತ್ತಿದ್ದಾರೆ. ನಾನು ಉನ್ನತ ಶಿಕ್ಷಣ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟೆ, ಕಂದಾಯ ಮಂತ್ರಿ ಆದೆ. ನಾನು ಕಂದಾಯ ಇಲಾಖೆ ಕೇಳೇ ಇರಲಿಲ್ಲ. ನನ್ನ ಸಹೋದ್ಯೋಗಿಗಳನ್ನು ಬೇಕಾದರೆ ಕೇಳಿ; ಇವರೆಲ್ಲರೂ ಇದ್ದರು. ನಾನು ಕಂದಾಯ ಖಾತೆ ಕೇಳಿರಲಿಲ್ಲ. ಬಹುಶಃ ಅವರೇ ನನಗೆ ಹೇಳಿ ಕಳಿಸಿದ್ದರು. ಏಕಪ್ಪ ಇಂತಹ ಸಣ್ಣ ವಿಷಯಗಳಿಗೆಲ್ಲಾ ಸೋಮಶೇಖರ್ ಅವರು ರಾಜೀನಾಮೆ ಕೊಡುತ್ತಾರೆ? ಎಂದು ಹೇಳಿಕಳಿಸಿದರು. ಮಾನ್ಯ ವಾಟಾಳ್ ನಾಗರಾಜ್ ಅವರು ಬಂದಿದ್ದರು, ಎಲ್ಲರೂ ಬಂದಿದ್ದರು. ನಾನು ಹೇಳಿದೆ. ಈ ಜನಾಂಗದ ಘನತೆ ಗೌರವ ಕಾಪಾಡಿಕೊಂಡು ಹೋಗಬೇಕಾದರೆ ಜನರು ಇವತ್ತು ನನ್ನ ಬಗ್ಗೆ ಟೀಕೆ ಮಾಡುತ್ತಾರೆ. ಏನೋ ದಲಿತ ಜನಾಂಗದ ವ್ಯಕ್ತಿ ಶಿಕ್ಷಣ ಸಚಿವ ಆಗಿರುವಾಗ ಈ ರೀತಿ ಕಾಪಿ ಮಾಡಿ ಬಂದಿದ್ದಾರೆ, ಇಂತಹವರಿಗೆಲ್ಲಾ ಬುದ್ಧಿ ಇದೆಯಾ? ಯಾವ ರೀತಿ ಆಡಳಿತ ನಡೆಸುತ್ತಾರೆ ಎಂದು ಟೀಕೆ ಮಾಡುತ್ತಾರೆ. ನನ್ನನ್ನು ಟೀಕೆ ಮಾಡಿದರೆ ನಾನು ಒಂದು ವರ್ಗದಿಂದ ಬಂದಿದ್ದೇನಲ್ಲ, ಆ ವರ್ಗಕ್ಕೆ ಅವಮಾನ ಮಾಡಿದ ಹಾಗೆ. ನನಗೆ ಅವಮಾನ ಮಾಡಿದರೆ ನನ್ನ ವರ್ಗಕ್ಕೆ ಅವಮಾನ ಮಾಡಿದ ಹಾಗೆ. ಆದ್ದರಿಂದ ನಾನು ನನ್ನ ವ್ಯಕ್ತಿತ್ವವನ್ನು ಹೆಚ್ಚಿಸಿಕೊಂಡಾಗ ಜನತೆ ಮೆಚ್ಚುತ್ತಾರೆ. If I want to protect the honour of the community, I have to protect my own honour. ಎಂದು ನಾನು ರಾಜೀನಾಮೆ ಕೊಟ್ಟು ಹೊರಗಡೆ ಬಂದೆ ನಾನು ಮುಖ್ಯಮಂತ್ರಿಗಳಿಗೆ ಅದೇ ಖಾತೆ ಕೊಡಿ ವಾಪಸ್ ಹೋಗಬೇಕು ಎಂದು ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳು ದೊಡ್ಡತನ ಮಾಡಿ ನಿನಗೆ ಅದಕ್ಕಿಂತ ದೊಡ್ಡ ಖಾತೆ ಕೊಡಬೇಕೆಂದು ಹೇಳಿ ಕಂದಾಯ ಇಲಾಖೆಯನ್ನು ಕೊಟ್ಟರು. ಯಾರೇನೂ ಸತ್ತಿರಲಿಲ್ಲ. ನನ್ನ ಇಲಾಖೆಯ ವ್ಯಾಪ್ತಿಯಿಂದ ಹಣ ಪೋಲು ಆಗಿರಲಿಲ್ಲ. ಏನೇನೂ ಆಗಿರಲಿಲ್ಲ. ಒಂದು ನೈತಿಕತೆಯಿಂದ ರಾಜೀನಾಮೆ ಕೊಟ್ಟಿದ್ದೆ. ಇಂತಹ 8 ಜನರು ಬಲಿ ಆದಾಗ ನೀವು ಆ ನೈತಿಕತೆಯನ್ನು ತೋರಿಸಿದ್ದರೆ ಬಹುಶಃ ನೀವು ಆರು ತಿಂಗಳ ಒಳಗೆ ಮುಖ್ಯಮಂತ್ರಿ ಆಗುತ್ತಿದ್ದಿರಿ. ನೀವು ಅದನ್ನು ಕಳೆದುಕೊಂಡಿರಿ. ಹೋದ ಸಾರಿಯೂ ಠುಸ್ ಆದಿರಿ, ಈ ಸಾರಿಯೂ ಠುಸ್ ಆದಿರಿ. ಏನು ಅಧಿಕಾರ ಶಾಶ್ವತವಾ? ಈ ಜನರಿಗೆ

ಏನು ಮೆಸೇಜ್ ಹೋಗುತ್ತದೆ? ನೀವು ಒಂದು ಪೋಲೀಸ್ ಇನ್ಸ್‌ಪೆಕ್ಟರ್ ಪೋಸ್ಟಿಂಗ್ ಅನ್ನು ರೆಸಿಸ್ಟ್ ಮಾಡಲಿಲ್ಲ ಅಂದರೆ, ಆರು ಸಾರಿ ಸಸ್ಪೆಂಡ್ ಆದವರನ್ನು ಪೋಸ್ಟಿಂಗ್ ಮಾಡಬೇಡಿ ಎಂದು ಹೇಳಿದರೂ, ಅವನು ನ್ಯಾಯ ಕೊಡುವುದಕ್ಕೆ ಆಗುವುದಿಲ್ಲ, ಪ್ರಾಣ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ, ಅವನ ಕ್ರೆಡಿಬಲಿಟಿ ಹಿಂದೆ ಸರಿ ಇಲ್ಲ ಎಂದು ಹೇಳಿ ಬಂದಾಗಲೂ ನೀವು ಅವನನ್ನು ಅಲ್ಲಿಗೆ ಪೋಸ್ಟ್ ಮಾಡುತ್ತೀರಿ ಎಂದರೆ ನೀವು ಎಷ್ಟರಮಟ್ಟಿಗೆ ಆಡಳಿತ ಬಿಗಿ ಇಟ್ಟುಕೊಂಡಿದ್ದೀರಿ? ಎಷ್ಟರ ಮಟ್ಟಿಗೆ ನೀವು ಪೋಸ್ಟಿಂಗ್ಸ್ ಮಾಡುತ್ತೀರಿ? ಎಂದು ಗೊತ್ತಾಗುತ್ತದೆ. ನಾನು ಆ ವಿಚಾರವನ್ನು ನಿಮ್ಮ ನೈತಿಕತೆಗೆ ಬಿಡುತ್ತೇನೆ. ಅದರ ಬಗ್ಗೆ ನಾನು ಇನ್ನೇನೂ ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಕಾಂಗ್ರೆಸ್ ಪಕ್ಷದ ಧೋರಣೆಗೆ ಆ ವಿಚಾರವನ್ನು ನಾನು ಬಿಡುತ್ತೇನೆ, ಪಕ್ಷದವರು ಯಾವ ರೀತಿ ತೀರ್ಮಾನ ತೆಗೆದುಕೊಳ್ಳುತ್ತಾರೋ ಹಾಗೆ ನೀವು ಮಾಡಿ. ಆದರೆ ಈ ಘಟನೆ ಬಗ್ಗೆ ಮಾತ್ರ ಸಿ.ಬಿ.ಐ. ತನಿಖೆ ಆಗಲೇಬೇಕು. ಮಾನ್ಯ ಸದಸ್ಯರಾದ ಸದಾನಂದಗೌಡರು ಹೇಳಿದ ಹಾಗೆ ನಮ್ಮ ಪೊಲೀಸ್ ಇಲಾಖೆ ಮೇಲೆ ಯಾರಿಗೂ ನಂಬಿಕೆ ಇಲ್ಲ. ನ್ಯಾಯಾಂಗ ಆಯೋಗದ ವರದಿಗಳ ಮೇಲೆ ಯಾರೂ ಕೂಡ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಸಿ.ಬಿ.ಐ.ನಿಂದಲೇ ತನಿಖೆ ಆಗಬೇಕೆಂಬುದು ಅವರ ನಿಲುವಾಗಿದೆ, ಅದೇ ನಿಲುವು ಸಹಾ ನಮ್ಮದೂ ಆಗಿದೆ. ಅದನ್ನು ನೀವು ಮಾಡಲೇಬೇಕು. ಈ ಒಂದು ಘಟನೆಯ ಹಿನ್ನೆಲೆಯಲ್ಲಿ ಎಲ್ಲ ಪಕ್ಷದವರೂ ಸೇರಿ ಪೊಲೀಸ್ ಇಲಾಖೆಯನ್ನು ರಾಜಕೀಯದಿಂದ ಹೇಗೆ ಹೊರತುಪಡಿಸಬಹುದು ಎಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ಪೊಲೀಸ್ ಇಲಾಖೆ ಸರ್ಕಾರದ ಕೈಯ್ಯಲ್ಲೂ ಇರಬಾರದು ಮತ್ತು ಬೇರೆ ಯಾರದೇ ಕೈಯ್ಯಲ್ಲೂ ಸಹಾ ಇರಬಾರದು ಅದಕ್ಕಾಗಿ ಒಂದು ಇಂಡಿಪೆಂಡೆಂಟ್ ಏಜೆನ್ಸಿ ಮಾಡಬೇಕು. ಅವರಿಗೆ ಸರಿಯಾದಂತಹ ತರಬೇತಿ ನೀಡಬೇಕು. ನೀವು ಪೊಲೀಸ್ ಅಧಿಕಾರಿಗಳನ್ನು ಪೋಸ್ಟಿಂಗ್ಸ್ ಮಾಡಬೇಕಾದರೆ ಯಾವುದಾದರೂ ಒಂದು ನಾರ್ಮ್ಸ್ ಅನ್ನು ಇಟ್ಟುಕೊಳ್ಳಬೇಕು. ಮಾನ್ಯ ಸಿಂಧ್ಯಾರವರಿಗೆ ಗೃಹ ಇಲಾಖೆ ನಡೆಸಿ ಅಪಾರವಾದ ಅನುಭವ ಇದೆ. ನೀವು ಅಂತಹವರ ಸಲಹೆ ಈ ದಿಸೆಯಲ್ಲಿ ಪಡೆಯಬಹುದಾಗಿದೆ. ಎಲ್ಲರಿಗೂ ಸಮನಾದಂತಹ, ಸರಿಯಾದಂತಹ ಪೋಸ್ಟಿಂಗ್ಸ್ ಅನ್ನು ನೀವು ಮಾಡದೇ ಇದ್ದರೆ ಸಿಬ್ಬಂದಿ ಧೃತಿಗೆಡುತ್ತಾರೆ. ಅವರೇ ಇಂತಹ ಕೃತ್ಯಗಳು ನಡೆಯಲು ಅವಕಾಶ ಮಾಡಿಕೊಡುತ್ತಾರೆ. ಇದರಿಂದ ದ್ವೇಷ ಶುರುವಾಗುತ್ತದೆ. ಒಬ್ಬರ ಮೇಲೆ ಒಬ್ಬರನ್ನು ಎತ್ತಿ ಕಟ್ಟಲಿಕ್ಕೆ ಶುರು ಮಾಡುತ್ತಾರೆ. ಈಗ ಸಿಒಡಿ ಯಲ್ಲಿ ಇರುವವರು ಹತ್ತಾರು ವರ್ಷಗಳಿಂದ ಅಲ್ಲಿಯೇ ಇದ್ದಾರೆ. 10 ಬಾರಿ ಸಸ್ಪೆಂಡ್ ಆಗಿದ್ದರೂ ಸಹಿತ ಒಬ್ಬ ಸಬ್ ಇನ್ಸ್‌ಪೆಕ್ಟರ್ ಒಂದೇ ಸ್ಟೇಷನನಲ್ಲೇ ಇರುತ್ತಾನೆ. ಈ ರೀತಿ ಆಗಬಾರದು. ಪೊಲೀಸ್ ಅಧಿಕಾರಿಗಳನ್ನು ಪೋಸ್ಟಿಂಗ್ಸ್ ಮಾಡುವುದಕ್ಕೆ ಸರ್ಕಾರ ಏನಾದರೂ ಒಂದು ನಾರ್ಮ್ಸ್ ಅನ್ನು ಹಾಕಿಕೊಳ್ಳಲೇಬೇಕು. ಇಷ್ಟು ವರ್ಷಗಳ ಕಾಲ ಕೆಲಸ ಮಾಡಿದಂತಹ ಇಷ್ಟು

ಜನರನ್ನು ಎಗ್ಸಿಕ್ಯೂಟಿವ್‌ನಿಂದ ನಾನ್ ಎಗ್ಸಿಕ್ಯೂಟಿವ್‌ಗೆ ಕಳುಹಿಸಿ ಕೊಡೋಣ ಎನ್ನುವಂತಹ ನಾರ್ಮ್ಸ್ ನೀವು ಹಾಕಿಕೊಳ್ಳಬೇಕು. ಯಾವ್ಯಾವ ಕಡೆ ಸೆನ್ಸಿಟೀವ್ ಸ್ಟೇಷನ್‌ಗಳಿವೆ, ಯಾವ್ಯಾವ ಕಡೆಗಳಲ್ಲಿ ಪದೇ ಪದೇ ಕೋಮು ಗಲಭೆಗಳು ನಡೆಯುತ್ತವೆಯೋ ಅಂತಹ ಕಡೆ ಇಂಥವರನ್ನು ನೇಮಿಸೋಣ ಎಂದು ನಾರ್ಮ್ಸ್ ಹಾಕಿಕೊಂಡು ಅದರ ಪ್ರಕಾರ ಸರ್ಕಾರ ನಡೆದುಕೊಳ್ಳಬೇಕು. ನೀವು ಈ ರೀತಿ ಮಾಡದೇ ಇದ್ದರೆ ಕಷ್ಟವಾಗುತ್ತದೆ. ಶಿಸ್ತನ್ನು ನೀವು ಇಲಾಖೆಯಲ್ಲಿ ತರಬೇಕಾಗುತ್ತದೆ. ಕಟ್ಟುನಿಟ್ಟಿನ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆರು ಬಾರಿ ಸಸ್ಪೆಂಡ್ ಆಗಿರುವಂತಹರನ್ನು ಇಲ್ಲಿಯ ಪೊಲೀಸ್ ಠಾಣೆಗೆ ಹಾಕಿದ್ದೀರಿ ಎಂದರೆ, ಅದು ಯಾವ ರೀತಿಯ ಆಡಳಿತವೋ ನನಗಂತೂ ಗೊತ್ತಿಲ್ಲ. ಮಾನ್ಯ ಬಚ್ಚೇಗೌಡರು ಆಗಾಗ್ಗ ಹೇಳುವಂತೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪೊಲೀಸ್ ಸ್ಟೇಷನ್‌ಗಳಲ್ಲಿ ಕಂಪ್ಲೇಂಟ್‌ಗಳನ್ನು ಕೊಡುವ ಸಲುವಾಗಿ ಯಾವಾಗಲೂ ಜನರು ಗಿಜಿಗಿಜಿ ಅಂತ ತುಂಬಿರುತ್ತಾರೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ರೆಡಿ ಮಾಡಿ ಇಟ್ಟಿದ್ದಂತಹ ಹಕ್ಕುಪತ್ರಗಳನ್ನು ನೀವಿನ್ನೂ ಸಂಬಂಧಪಟ್ಟವರಿಗೆ ಕೊಟ್ಟಿಲ್ಲ. ಅದಕ್ಕಾಗಿ ಬಿಡಿಓ ಅಥವಾ ತಾಲ್ಲೂಕು ಕಛೇರಿಗಳಲ್ಲಿ ಜನ ತುಂಬಿಲ್ಲ. ಅದಕ್ಕೆ ಬದಲಾಗಿ ಪೊಲೀಸ್ ಠಾಣೆಗಳಲ್ಲಿ ಜನ ತುಂಬಿದ್ದಾರೆ. ಯಾವುದೇ ಒಂದು ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೆ ಅದು ಎಲ್ಲರಿಗೂ ಇರುವಂತಹ ಸರ್ಕಾರವೇ ಹೊರತು ಯಾವುದೇ ಒಂದು ಪಕ್ಷಕ್ಕೆ ಮಾತ್ರ ಸೀಮಿತವಾದದ್ದಲ್ಲ. ಈ ಘಟನೆಯ ಕಳಂಕವನ್ನು ಇತಿಹಾಸದಲ್ಲಿ ಯಾರೂ ಕೂಡ ಅಳಿಸುವುದಕ್ಕಾಗುವುದಿಲ್ಲ. ನೀವು ಎಷ್ಟೇ ತ್ಯಾಗ ಮಾಡಿದರೂ ಕೂಡ ನಿಮ್ಮ ಪಕ್ಷಕ್ಕೆ, ನಿಮ್ಮ ಸರ್ಕಾರಕ್ಕೆ ತಗಲಿರುವ ಈ ಕಳಂಕವನ್ನು ಅಳಿಸುವುದಕ್ಕಾಗುವುದಿಲ್ಲ. ಅದು ಇತಿಹಾಸದಲ್ಲಿ ಉಳಿದು ಹೋಗಿದೆ. 8 ಜನ ದಲಿತರು ಮತ್ತು ದಲಿತ ಸಂಘಟನೆಯ ಪ್ರತಿಭಟನೆಯಲ್ಲಿ ಭಾಗವಹಿಸಿದವನೊಬ್ಬ ಲಾಠಿ ಚಾರ್ಜ್‌ನಲ್ಲಿ ಕೊಲೆಯಾಗಿದ್ದಾರೆ ಎಂಬುದು ಇತಿಹಾಸದಲ್ಲಿ ದಾಖಲಾಗಿ ಹೋಗಿದೆ. ಮಾನ್ಯ ಭೈರೇಗೌಡರು ಹೇಳಿದಂತೆ ಮದ್ದೂರಿನಲ್ಲಿ ನಮ್ಮ ಪಕ್ಷದ ಕಾರ್ಯಕರ್ತನೊಬ್ಬನ ಕೊಲೆಯಾಗಿದ್ದು, ಸದರಿ ಪ್ರಕರಣದಲ್ಲಿ ಕೇಸ್ ರಿಜಿಸ್ಟರ್ ಮಾಡಿ ಆರೋಪಿಯನ್ನು ಇನ್ನೂವರೆಗೆ ಅರೆಸ್ಟ್ ಮಾಡಲಾಗಿರುವುದಿಲ್ಲ. ಈ ರೀತಿಯಾದರೆ, ಸರ್ಕಾರ ಜನರಿಗೆ ನಿಷ್ಪಕ್ಷಪಾತವಾದಂತಹ ರೀತಿಯಲ್ಲಿ ಆಡಳಿತವನ್ನು ಕೊಡದೇ ಹೋದರೆ, ಈ ಸರ್ಕಾರ ಯಾವತ್ತೂ ಉಳಿಯುವುದಿಲ್ಲ. ಈ ಘಟನೆ ಬಗ್ಗೆ ಸರ್ಕಾರ ಸಿಬಿಐ ತನಿಖೆ ಮಾಡಲೇ ಬೇಕು. ಇಲ್ಲದಿದ್ದರೆ ನಾವು ಇದನ್ನು ಸುಮ್ಮನೆ ಬಿಡುವುದಿಲ್ಲ. ನಾವು ಈ ವಿಷಯವನ್ನು ಯಾವ ಮಟ್ಟಕ್ಕೆ ಬೇಕಾದರೂ ತೆಗೆದುಕೊಂಡು ಹೋಗುತ್ತೇವೆ. ಹಳ್ಳಿ ಹಳ್ಳಿಗಳ ಬೀದಿ ಬೀದಿಗಳಲ್ಲಿ ಈ ವಿಚಾರವನ್ನು ನಾವು ತಗೆದುಕೊಂಡು ಹೋಗುತ್ತೇವೆ ಪರಿಶಿಷ್ಟ ಜಾತಿ ಮತ್ತು ದಲಿತರ ಮೇಲೆ ನಡೆದಂತಹ ದಬ್ಬಾಳಿಕೆ ಪ್ರಕರಣಗಳ ವಿಚಾರಣೆಗಾಗಿ ಪ್ರತ್ಯೇಕವಾದಂತಹ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕೆಂದು ಕೇಂದ್ರ

ಸರ್ಕಾರದವರು ಆದೇಶ ಕೊಟ್ಟಿದ್ದರೂ ನೀವು ಯಾವ ವಿಶೇಷ ನ್ಯಾಯಾಲಯಗಳನ್ನೂ ಸ್ಥಾಪಿಸಿಲ್ಲ. ಕೆಲವನ್ನು ಸ್ಥಾಪಿಸಿದ್ದರೂ ಅವು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹಲ್ಲು ಇಲ್ಲದೇ ಇರುವಂತಹ ಸಿಆರ್‌ಇ ಸೆಲ್ ಈಗ ಇದೆ. ಅದರಿಂದ ಏನು ಪ್ರಯೋಜನವಿಲ್ಲ. ಇಂತಹ ವಿಚಾರಗಳನ್ನೆಲ್ಲಾ ನಾವೆಲ್ಲರೂ ಪಕ್ಷಬೇಧ ಮರೆತು ಒಂದೆಡೆ ಕುಳಿತು ಚರ್ಚಿಸಿ ಒಳ್ಳೆಯ ಆಡಳಿತ ವ್ಯವಸ್ಥೆ ನೀಡುವ ಕಡೆ ಶ್ರಮಿಸೋಣ. ಇದಕ್ಕೆ ಬೇಕಾದ ಎಲ್ಲಾ ಸಹಕಾರವನ್ನೂ ಕೂಡ ಕೊಡಲು ನಾವು ಸಿದ್ಧರಿದ್ದೇವೆ. ಒಟ್ಟಿನಲ್ಲಿ ಈ ಘಟನೆ ಬಗ್ಗೆ ಸರ್ಕಾರ ಸಿ.ಬಿ.ಐ. ತನಿಖೆ ಮಾಡಲೇಬೇಕೆಂದು ನಾನು ಮತ್ತೊಮ್ಮೆ ಒತ್ತಾಯಿಸುತ್ತಾ ಇಷ್ಟು ಮಾತುಗಳನ್ನು ಆಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಉಪ ಸಭಾಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮುಂದೂಡುತ್ತಿದ್ದೇನೆ. ಸದನವು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ ಒಂದು ಗಂಟೆ 56 ನಿಮಿಷಕ್ಕೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟಿತು ಹಾಗೂ ಮಧ್ಯಾಹ್ನ ಪುನಃ 3.00 ಗಂಟೆಗೆ ಪುನರ್ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಮತ್ತೆ ಸಭೆಯು ಮಧ್ಯಾಹ್ನ 3.20 ಗಂಟೆಗೆ ಸಮಾವೇಶಗೊಂಡಿತು ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

2. ಪ್ರಕಟಣೆ

ವಿಷಯ: ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯ ವರದಿ

ಅಧ್ಯಕ್ಷರು: ದಿನಾಂಕ 15-3-2000ರಂದು ನಡೆದ ವಿಧಾನಸಭೆಯ ಕಾರ್ಯ ಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ವಿಧಾನಸಭೆಯ ಕಾರ್ಯ ಕಲಾಪಗಳನ್ನು ದಿನಾಂಕ: 31-3-2000ರವರೆಗೆ ನಡೆಸಿ ತದನಂತರ ದಿನಾಂಕ: 10-4-2000ದಿಂದ ದಿನಾಂಕ: 28-4-2000ರವರೆಗೆ ಪುನಃ ವಿಧಾನಸಭೆಯು ಸಮಾವೇಶಗೊಳ್ಳುವುದೆಂದು ತೀರ್ಮಾನಿಸಲಾಗಿದ್ದು ಈ ಬಗ್ಗೆ ತಾತ್ಕಾಲಿಕ ಕಾರ್ಯಕ್ರಮಗಳ ಪಟ್ಟಿಯನ್ನು ಕಳುಹಿಸಲಾಗುವುದು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಒಂದು ವಿಚಾರವನ್ನು ನೆನಪು ಮಾಡಬೇಕಾಗಿದೆ. ಸದನದಲ್ಲಿ ನಿಮ್ಮ